TIGHT BINDING BOOK

UNIVERSAL LIBRARY
OU_198095
UNIVERSAL LIBRARY

*Mysore University Extension Lectures*

# PALAYAGARS.

## FIVE LECTURES

DELIVERED BY

**M. S. PUTTANNA, B. A.**

# ಪಾಳಯಗಾರರು.

ಐದು ಉಪನ್ಯಾಸಗಳು.

ಮೈಸೂರು ಯೂನಿವರ್ಸಿಟಿಯವರ

ಅಪ್ಪಣೆಯಂತೆ

**ಯಂ. ಯಸ್. ಪುಟ್ಟಣ್ಣ, ಬಿ. ಎ.**

ರಚಿಸಿದ್ದು.

**1923.**

[*All Rights Reserved.*]

ದಿ ಪವರ್ ಪ್ರಿಟಿಂಗ್ ವರ್ಕ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

# PREFACE.

This little book contains five Lectures on Palayagars, delivered by me in Kannada, as the Mysore University Extension Lectures, at Chikkamagalur in January 1922. Palayagars were petty chieftains who flourished during the days of the Vijayanagar Empire, ruling over small states of varying size and exercising all sovereign authority in their own petty kingdoms. A regular history of these Vassals will supply some reliable material for the future history of Vijayanagar. Their foreign policy was so intertwined with that central authority on the banks of the Tungabhadra, that without these Vassals the emperors will dwindle into mere figure heads.

These Palayagars have left indelible marks of improvement in the country over which they ruled. The most advanced Revenue system under Sivappa Nayak of Ikkeri; the peculiar items of State Revenue and the Begar service which is a part of the Local-Self Government of the modern times, under the Chitaldrug Palayagars; the system of militia, justice and moderation in the State of Gummanayakanapalaya; the moral tone that prevailed in the Hagalavadi State etc., are such that will do credit to any civilised country. The valour or heroism which we read about in the legendary stories of the Puranas were transformed into actual facts in the actions of these Palayagars. In every respect they resembled their European compeers, the

feudal lords of the middle ages. The traces of their rule can even now be found in all the parts once governed by them. The facts relating to them have now fallen into oblivion, and some of the old scanty materials are in the possession of people who are unwilling to part with them. As far as I have had opportunities of ransacking this old stock of information, I find that the real history of the countries south of the river Godavari will be entirely incomplete, if it do not contain an account of these states from their foundation up to their extinction. My poor attempt to search for these old materials has met with partial success in respect of only a few of the Palayagar states or Palayaputs. Readers that desire to have fuller information will have to resort to the histories of these states which will be published in future.

These lectures give a short sketch of the salient points about a few of the states as shown in the syllabus printed herewith. I express my thanks to the Mysore University for having given me an opportunity to lay before the learned public the scanty materials that I have collected about this main subject which, as a collateral question, is not less important than the "History of the forgotten Empire." My sincere thanks are due to our grand old man of Mysore, Mr. M. Venkata Krishnaiya, Retired Head-Master of the Marimallappa's School for having first published these Lectures in the Civic and Social Journal.

M. S. PUTTANNA,

**25th Dec, 1923.** *Basavanagudi, Bangalore City.*

# ಪೀಠಿಕೆ.

ಮೈಸೂರು ಯೂನಿವರ್ಸಿಟಿ ಎಂಬ ವಿದ್ವತ್ ಮಹಾಮಂಡಲಿಯ ಅಪ್ಪಣೆಯಂತೆ, ಸನ್ ೧೯೨೨ನೇ ಈಸವಿ ಜನವರಿ ತಿಂಗಳಲ್ಲಿ ಚಿಕ್ಕಮಗಳೂರಲ್ಲಿ ಇದರೊಳಗಿರುವ ಪಾಳೆಯಗಾರರ ವಿಷಯಕವಾದ ಐದು ಉಪನ್ಯಾಸಗಳನ್ನು ನಾನು ಓದಿದೆ. ಪಾಳೆಯಗಾರರೆಂಬ ಚಿಕ್ಕ ಚಿಕ್ಕ ಪ್ರಭುಗಳು ವಿಜಯನಗರದ ಸಂಸ್ಥಾನದಲ್ಲಿ ವಿಶೇಷ ಪ್ರಬಲರಾಗಿದ್ದರು. ಇವರು ಕೆಲವು ದೊಡ್ಡದಾಗಿಯೂ ಕೆಲವು ಚಿಕ್ಕದಾಗಿಯೂ ಇರುವ ಸಂಣ ಸಂಣ ಸಂಸ್ಥಾನಗಳಿಗೆ ದೊರೆಗಳಾಗಿ ತಮ್ಮ ರಾಜ್ಯಗಳಲ್ಲಿ ಸರ್ವಾಧಿಕಾರಗಳನ್ನೂ ನಡಿಸುತಾ ಇದ್ದರು. ಮುಂದಕ್ಕೆ ವಿಜಯನಗರದ ಚರಿತ್ರೆಯನ್ನು ವಿಶದವಾಗಿ ಬರೆಯಬಹುದಾದ ಚರಿತ್ರಕರ್ತರಿಗೆ ಈ ಅಧೀನ ರಾಜರುಗಳ ಚರಿತ್ರೆಯಿಂದ ನಂಬಿಕೆಗೆ ಅರ್ಹವಾದ ಸಂಗತಿಗಳೂ ಕಥಾ ಸಂದರ್ಭಗಳೂ ದೊರೆಯುವವು. ಈ ಪಾಳೆಯಗಾರರಿಗೂ ಅನ್ಯರಾಜ್ಯಗಳವರಿಗೂ ಇದ್ದ ಸಂಬಂಧವು ತುಂಗಭದ್ರಾತೀರವಾಸಿಗಳಾಗಿದ್ದ ಚಕ್ರಾಧೀಶ್ವರರ ಆಳಿಕೆಯೊಳಗೆ ಎಷ್ಟರಮಟ್ಟಿಗೆ ಸೇರಿಕೊಂಡು ಇತ್ತೆಂದರೆ, ಈ ಅಧೀನರಾಜರಿಲ್ಲದಿದ್ದರೆ, ರಾಜಾಧಿರಾಜರೆಂದು ಖ್ಯಾತಿಯನ್ನು ಪಡೆದಿದ್ದ ಆ ಚಕ್ರವರ್ತಿಗಳು ಚಿತ್ರದಲ್ಲಿ ಬರೆದ ಚಕ್ರವರ್ತಿಗಳಂತಾಗುತಿದ್ದರು.

ಈ ಪಾಳೆಯಗಾರರು ಆಳುತಾ ಇದ್ದ ರಾಜ್ಯದಲ್ಲಿ ತಾವು ಲೋಕೋಪಯುಕ್ತವಾಗಿರತಕ್ಕ ಶಾಶ್ವತವಾದ ಗುರುತುಗಳನ್ನು ಬಿಟ್ಟು ಹೋಗಿದಾರೆ. ಪುರಾಣಸ್ಥವಾದ ಕಥೆಗಳಲ್ಲಿ ನಾವು ಕೇಳಿರುವಂಥಾ ಪರಾಕ್ರಮವು ಮನುಷ್ಯ ಜನ್ಮವನ್ನು ಎತ್ತಿದ್ದ ಈ ಪಾಳೆಯಗಾರರ ಚರಿತ್ರೆಯಲ್ಲಿ ಕಂಣಾರ ಕಂಡ ವಿಷಯವಾಗಿ ಪರಿಣಮಿಸಿದೆ. ಇವರ ಚರಿತ್ರೆಯು ಹಿಂದಕ್ಕೆ ಯೂರೋಪುಖಂಡದಲ್ಲಿದ್ದ "ಫ್ಯೂಡಲ್ ಲಾರ್ಡುಗಳು" ಎಂಬ ಪ್ರಭುಗಳ ಚರಿತ್ರೆಯನ್ನು ಹೋಲುತಾ ಇದೆ. ಈ ಪಾಳೆಯಗಾರರಿಗೆ ಸಂಬಂಧಿಸಿದ ಅಪೂರ್ವವಾದ ಸಂಗತಿಗಳನ್ನು ಅನೇಕರು ಮರೆತುಬಿಟ್ಟು ಅವು ನಾಶವಾಗಿ ಹೋಗಿವೆ. ಈ ಪುರಾತನವಾದ ಸಂಗತಿಗಳು ಎಲ್ಲಿಯಾದರೂ ಇದ್ದರೆ ಅವುಗಳನ್ನು ಇರಿಸಿಕೊಂಡಿರುವ ಪುಣ್ಯಾತ್ಮರು ಏನನ್ನೂ ಈಚೆಗೆ ಬಿಡದೆ ಭದ್ರಮಾಡಿಕೊಂಡಿದಾರೆ. ಈ ಪ್ರಾಚೀನ ವಿಚಾರವನ್ನು ನಾನು ಹುಡುಕಿ ನೋಡಿದ್ದರಲ್ಲಿ, ಗೋದಾವರೀ ನದಿಗೆ ದಕ್ಷಿಣವಾಗಿರುವ ಸೀಮೆಗಳ ಚರಿತ್ರೆಯು, ಈ ಪಾಳೆಯಪಟ್ಟುಗಳ ಆದ್ಯಂತ ಚರಿತ್ರೆಯನ್ನು ಒಳಗೊಂಡಿಲ್ಲದಿದ್ದರೆ, ಅದು ಪೂರ್ತಿಯಾದ ಚರಿತ್ರೆ ಎಂದು ಖಂಡಿತವಾಗಿಯೂ ಹೇಳುವುದಕ್ಕಾಗು

ವುದಿಲ್ಲ. ಇದಕ್ಕೆ ಬೇಕಾದ ಸಂಗತಿಗಳನ್ನು ಸಂಪಾದಿಸಲು ನಾನು ಮಾಡಿದ ಪ್ರಯತ್ನ ಸ್ವಲ್ಪ ಮಟ್ಟಿಗೆ ಸಫಲವಾದರೂ ಅಷ್ಟು ತೃಪ್ತಿಕರವಾಗಿಲ್ಲ. ಈಚಿಕ್ಕ ರಾಜ್ಯಗಳನ್ನು ಕುರಿತು ಹೆಚ್ಚಾದ ಸಂಗತಿಗಳನ್ನು ತಿಳಿಯಲು ಆಕಾಂಕ್ಷೆಯುಳ್ಳ ವಾಚಕರು, ಮುಂದೆ ಪ್ರಕಟಿಸಲ್ಪಡುವ ಆಯಾ ಆಧಿಪತ್ಯದ ಚರಿತ್ರೆಯನ್ನು ಓದಿ ಕೊಳ್ಳಬೇಕಾಗುವುದು. ಈ ಪುಸ್ತಕದ ವಿಷಯಸೂಚಕೆಗಳಲ್ಲಿ ಇದರ ಮುಖ್ಯ ವಾದ ಅಂಶಗಳನ್ನು ಸಂಕ್ಷೇಪವಾಗಿ ಕಾಣಿಸಿದೆ. ವಿಜಯನಗರದ ಚರಿತ್ರೆಗೆ ಸಮಾನವಾದ ತಿರುಳುಳ್ಳ ಈ ಪಾಳಯಗಾರರ ಚರಿತ್ರೆಯ ಸಾರಾಂಶವನ್ನು ಕುರಿತು ನನಗೆ ದೊರೆತ ಅಲ್ಪ ಸ್ವಲ್ಪ ಸಂಗತಿಗಳನ್ನು ಬಹಿರಂಗಮಾಡಲು ನನಗೆ ಸಮಯವನ್ನು ಕಲ್ಪಿಸಿ ಕೊಟ್ಟದ್ದಕ್ಕಾಗಿ, ಮೈಸೂರು ಯೂನಿವರ್ಸಿಟಿಯವರಿಗೆ ನನ್ನ ಕೃತಜ್ಞತೆಯನ್ನು ಈ ಮೂಲಕ ಸಮರ್ಪಿಸುತ್ತೇನೆ. ಮರಿಮಲ್ಲಪ್ಪನವರ ಸ್ಕೂಲ್ ಹೆಡ್ ಮಾಸ್ಟರು ಮ|| ರಾ|| ವೆಂಕಟಕೃಷ್ಣಯ್ಯನವರು ಈ ಉಪನ್ಯಾಸಗಳನ್ನು ಪೌರಸಮಾಜಿಕ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕಾಗಿ ಆಲೋ ಕೋಪಕಾರಕರ್ತರಿಗೆ ನಾನು ಕೃತಜ್ಞನಾಗಿದ್ದೇನೆ.

ರುಧಿರೋದ್ಗಾರಿ ಸಂ||
ಮಾರ್ಗಶಿರ ಬ||

ಎಂ. ಎಸ್. ಪುಟ್ಟಣ್ಣ,
ಬಸವನ ಗುಡಿ,
ಬೆಂಗಳೂರು.

## CONTENTS.

### LECTURE.—I.

1. A short preamble .... 1

2. Rough explanation of the term Palayagars and their origin .... 2

   (*a*) As connected with Vijayanagar .... 4

   (*b*) Antiquity as discovered in the History of Gummanayakanapalaya .... 6

   (*c*) Their place under several ancient Emperors and inference therefrom .... 7

3. Explanation of the term as distinguished from Jahagirdars, Talukdars, Zamindars, Heggades, Ruddies, Desapandes, Desais, Desakulkarnis etc., .... 10—11

4. Appointment of Chief Officers by the Bahamani and the Shahi Kings and the Moghul Emperors, Vijayanagar Emperors etc. .... 12—14

5. Destructive policy of Sivaji, Mysore Rajas, Hyder Ali, Tippoo Sultan, the Hyderabad Government, and the British Government .... 15—18

### LECTURE.—II.

1. Comparison of the Palayagar Institution with Feudalism, showing agreement and difference .... 19—30

2. Some of the leading Palayaputs in the Deccan and Southern India, some interesting features during the last days of Chitaldrug, and Gummanayakanapalaya etc., .... 31—37

LECTURE.—III.

1. How the great palayagars established their own principalities through their own exertion .... 38

2. Finding hidden treasure and supernatural agency etc., are almost invariable accidents of the rise and progress of most of the Palayaputs .... 39—42

3. The most powerful potentates among the Palayagars were those of Chitaldrug and Wakingere .... 43—44

4. (*a*) The Military organisation under the Palayagars .... 45
   (*b*) Fortifications .... 47
   (*c*) Army .... 49
   (*d*) Navy .... 50

5. Civil Administration .... 51
   (*a*) Central Power .... 52
   (*b*) Districts .... 53
   (*c*) Civil Officers, their authority in Military matters in times of need .... 54
   (*d*) Bégár institution (ಬೇಗಾರರು) .... 55

LECTURE.—IV.

1. Heroism of the Chitaldrug Palayagars, and their people .... 58—60

2. Joan of Arc of Chitaldrug .... 61

3. Heroes of Gummanayakanapalaya .... 63—66

4. Nyayamurthi Aggi Thimmanayaka of Gummanayakanapalaya .... 67

5. Ramakka Nayakaralu of Gummanayakanapalaya .... 70

6. Their caste etc., .... 73

LECTURE.—V.

1. Public works under them (Chitaldrug) (*a*) Tanks. (*b*) Village topes (*c*) Temples. 76—78

2. do do (Gummanayakanapalaya). 79

3. Sahagamana (suttee) and other customs among the female members of the Royal family .... 80—81

4. Peculiarities among these Rulers .... 82—83

5. Peculiar method of choosing a king when necessary .... 84

6. Military party in the ascendant and Revolutions .... 85

7. The living scions of the Palayagars preserve their dignity and high moral tone. 86

8. Government can educate them and use them for public appointments in different Departments according to qualifications .... 89

# ವಿಷಯಾನುಕ್ರಮಣಿಕೆ.

## ಉಪನ್ಯಾಸ

## ೧.

1. ಸಣ್ಣ ಪೀಠಿಕೆ .... 1
2. ಪಾಳಯಗಾರರ ಶಬ್ದದ ಸಾಧಾರಣಾರ್ಥ .... 2
(a) ಪಾಳಯಗಾರರು ವಿಜಯನಗರಕ್ಕೆ ಅಧೀನ .... 3
(b) ವಿಜಯನಗರದವರು ಇವರನ್ನು ನೇಮಿಸಿದ್ದಿಲ್ಲ .... 4
(c) ಇತರ ಅಧಿರಾಜರಿಗೆ ಅಧೀನರಾಗಿದ್ದವರು ಪಾಳಯಗಾರರೇ .... 7
(d) ಇಂಥಾ ಅಧೀನರಾಜರು ಉತ್ತರದಲ್ಲಿಯೂ ಇದ್ದರು. 8
3. ಬಂಗಾಳಾ ಪ್ರಾಂತದಲ್ಲಿರುವ ಜಮೀನ್ದಾರರು, ತಾಲ್ಲೋಕುದಾರರು, ಜಹಗೀರ್‌ದಾರರು, ದೇಶಾಯಿ, ಸರ್ ದೇಶಮುಖ ಅಥವಾ ದೇಶಪಾಂಡೆ .... 10—11
4. ಬಹಮನಿ, ಷಾಹಿ, ಮೊಗಲ್ ಮತ್ತು ವಿಜಯನಗರದ ಚಕ್ರವರ್ತಿಗಳು ನೇಮಿಸಿದ ಮುಖ್ಯಾಧಿಕಾರಿಗಳು .... 12—14
5. ಶಿವಾಜಿ, ಹೈದರಾಲಿ, ಟಿಪ್ಪುಸುಲ್ತಾನ್, ಮೈಸೂರು ದೊರೆಗಳು, ಹೈದರಾಬಾದು ಸರ್ಕಾರ ಮತ್ತು ಬ್ರಿಟಿಷ್ ಸರ್ಕಾರದವರು ಇವರಿಗೆ ಮಾಡಿದ ಹಾವಳಿ .... 15—18

## ಉಪನ್ಯಾಸ

## ೨.

1. ಯೂರೋಪಿನ ಫ್ಯೂಡಲ್ ಸಂಸ್ಥೆಗೂ ಪಾಳಯಗಾರರ ಸಂಸ್ಥೆಗೂ ಇದ್ದ ಹೋಲಿಕೆಗಳು .... 19—30
2. ದಖನ್ನಿನಲ್ಲಿಯೂ, ದಕ್ಷಿಣ ಇಂಡಿಯಾದಲ್ಲೂ ಇದ್ದ ಕೆಲವು ಮುಖ್ಯ ಪಾಳಯ ಪಟ್ಟುಗಳು ಮತ್ತು ಚಿತ್ರದುರ್ಗ,

ಗುಮ್ಮನಾಯಕನ ಪಾಳಯ ಇವುಗಳ ಕೊನೆಗಾಲದಲ್ಲಿ ನಡೆದ ಕೆಲವು ಸ್ವಾರಸ್ಯವಾದ ವಿಷಯಗಳು .... 31—37

## ಉಪನ್ಯಾಸ

## ೩.

1. ಭಾರೀ ಪಾಳಯಗಾರರು ತಮ್ಮ ಸ್ವಂತ ಸಾಮರ್ಥ್ಯದಿಂದ ಪಾಳಯಪಟ್ಟುಗಳನ್ನು ಸ್ಥಾಪಿಸಿದ್ದು .... 38
2. ಅನೇಕ ಪಾಳಯಪಟ್ಟುಗಳ ಸ್ಥಾಪನೆ ಮತ್ತು ಅಭಿವೃದ್ಧಿಯು ಅಕಸ್ಮಾತ್ತಾಗಿ ದೊರಕಿದ ಧನ ಮತ್ತು ಅಮಾನುಷ ವ್ಯಾಪಾರದಿಂದಲೇ ಆಗಿರುತ್ತೆ .... 39—42
3. ಚಿತ್ರದುರ್ಗ ಮತ್ತು ವಾಕನಗೆರೆ ಪಾಳಯ ಪಟ್ಟುಗಳೇ ಅತ್ಯಂತ ಪ್ರಬಲವಾದವುಗಳು .... 43—44
4. (a) ಪಾಳಯಗಾರರ ಸೇನೆಯ ಏರ್ಪಾಡು .... 45
   (b) ಕೋಟೆಕೊತ್ತಲಗಳು .... 47
   (c) ಸೇನೆ .... 49
   (d) ನಾವೆ .... 50
5. ರಾಜ್ಯಭಾರಕ್ರಮ .... 51
   (a) ಮೇಲಿನ ಮುಖ್ಯಾಧಿಕಾರ .... 52
   (b) ಗಡಿಗಳ ಅಧಿಕಾರ .... 53
   (c) ವಿಚಾರಣೆ ಅಧಿಕಾರ .... 53
   (d) ಬೇಗಾರರು .... 55

## ಉಪನ್ಯಾಸ

## ೪.

1. ಚಿತ್ರದುರ್ಗದವರ ಪರಾಕ್ರಮ .... 58—60
2. ಚಿತ್ರದುರ್ಗದ ಓಬವ್ವ .... 61
3. ಗುಮ್ಮನಾಯಕನ ಪಾಳಯದವರ ಪರಾಕ್ರಮ .... 63—66
4. ನ್ಯಾಯಮೂರ್ತಿ ಅಗ್ಗಿ ತಿಮ್ಮನಾಯಕ .... 67
5. ರಾಮಕ್ಕನಾಯಿಕರಾಲು .... 70
6. ಅವರಮತವಗ್ಯೆರೆ .... 73

## ಉಪನ್ಯಾಸ

## ೫.


1. ಚಿತ್ರದುರ್ಗದ ಪಾಳಯಗಾರರು ಪ್ರಜೆಗಳ ಸೌಕರ್ಯಕ್ಕಾಗಿ ಮಾಡಿದ ಮಹತ್ಕಾರ್ಯಗಳೂ, *a*. ಕೆರೆಗಳು, *b*. ತೋಪುಗಳು, *c*. ದೇವಸ್ಥಾನದ ಕಟ್ಟಡಗಳು .... 76—78
2. ಗುಮ್ಮನಾಯಕನ ಪಾಳಯವನ್ನು ಪರಹಿಂಸೆ ಇಲ್ಲದೆ ಧರ್ಮದಿಂದ ಸಂಪಾದಿಸಿದ್ದು .... 79
3. ರಾಜವಂಶದವರಲ್ಲಿದ್ದ ಹಲವು ಜನ ಹೆಂಡಿರು, ಸಹಗಮನ ಇವೇ ಮೊದಲಾದ ಪದ್ಧತಿಗಳು .... 80—81
4. ಈ ಪಾಳಯಗಾರರಲ್ಲಿದ್ದ ವಿಚಿತ್ರ ಆಚರಣೆಗಳು .... 82—83
5. ದೊರೆಯನ್ನು ಚುನಾಯಿಸುವುದು .... 84
6. ದಂಡಿನ ಜನರ ಹಾವಳಿ .... 85
7. ಹಿಂದಿನವರ ಕಾರ್ಯವು ಮುಂದಿನವರ ಪಾಥೇಯ .... 86
8. ಸರ್ಕಾರದವರು ಇವರಿಗೆ ಬುದ್ಧಿ ಶಕ್ತಿಗೆ ತಕ್ಕ ವಿದ್ಯಾಭ್ಯಾಸವನ್ನು ಕೊಡಿಸಿ ಯೋಗ್ಯತಾನುಸಾರ ಉದ್ಯೋಗಗಳನ್ನು ಒದಗಿಸಿಕೊಡಬಹುದು .... 89

# ಪಾಳೆಯಗಾರರು.

## ೧ನೇ ಉಪನ್ಯಾಸ.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ತಲಕಾಡೆಂಬ ಒಂದು ಪುಣ್ಯಸ್ಥಳವಿದೆ. ಅದು ಕಾವೇರಿತೀರವಾಗಿದೆ. ತಿರಮುಕೂಡಲಲ್ಲಿ ಕಪಿಲಾ ಕಾವೇರಿ ಸಂಗಮವಾಗಿ ಅಖಂಡ ಕಾವೇರಿಯು ತಲಕಾಡಿಗೆ ಹರಿದುಹೋಗುವುದು. ಈ ನದೀತೀರದಲ್ಲಿ ನೀರಿನ ಅಲೆಯಿಂದ ಮರಳು ಬಂದುಬಿದ್ದು ಅದು ಗಾಳಿಯಿಂದ ತೂರಿಕೊಂಡುಬಂದು ಹಲವು ಮೈಲಿಗಳವರೆಗೂ ಮರಳೇ ಮುಚ್ಚಿಕೊಂಡುಹೋಗಿದೆ. ಒಂದೊಂದು ಕಡೆ ಆ ಮರಳು ದೊಡ್ಡ ಬೆಟ್ಟದ ಹಾಗೆ ರಾಸಿಯಾಗಿ ಅಲ್ಲಲ್ಲಿ ಬಿದ್ದಿದೆ. ಇದೆಲ್ಲಾ ಗಜಾರಣ್ಯಕ್ಷೇತ್ರವೆಂದು ಹೆಸರುಗೊಂಡಿರುವುದಾಗಿ ಸ್ಥಳಪುರಾಣವಿದೆ. ಈ ಪ್ರದೇಶದಲ್ಲಿ ಅನೇಕ ದೇವಸ್ಥಾನಗಳಿದ್ದವಂತೆ. ಅದೆಲ್ಲಾ ಮರಳಿನಲ್ಲಿ ಮುಚ್ಚಿಹೋಗಿರುವುದಾಗಿ ತಿಳಿಯಬರುವುದು. ಕೆಲವು ಮಾಸ ತಿಥಿ ವಾರ ನಕ್ಷತ್ರ ಮೊದಲಾದ ಸಂಯೋಗ ಸಂಭವಿಸಿದಾಗ ಅಲ್ಲಿರುವ ಪ್ರಸಿದ್ಧವಾದ ವೈದ್ಯೇಶ್ವರ, ಮರಳೇಶ್ವರ, ಪಾತಾಳೇಶ್ವರ, ಗೋಕರ್ಣೇಶ್ವರ, ಮಲ್ಲಿಕಾರ್ಜುನೇಶ್ವರ ಎಂಬ ಐದು ಲಿಂಗಗಳನ್ನು ದರ್ಶನಮಾಡಿದರೆ ಬಹಳ ಪುಣ್ಯ ಉಂಟೆಂದು ಹೇಳುತ್ತಾರೆ. ಇಂಥಾ ಸಂಯೋಗವು ೩ ವರುಷಕ್ಕೆ, ೫ ವರುಷಕ್ಕೆ, ೧೦ ವರುಷಕ್ಕೆ ಒಂದೊಂದು ಸಾರಿ ಹೀಗೆ ಬಿಟ್ಟುಬಿಟ್ಟು ಬರುವುದು. ಜನರು ಅಪಾರವಾಗಿ ಜಾತ್ರೆಗೆ ನೆರೆಯುವರು. ಮುವತ್ತು ನಲವತ್ತು ಸಾವಿರ ಜನದವರೆಗೂ ಸೇರುವುದು. ಈ ದೊಡ್ಡ ಜಾತ್ರೆಗೆ ಪಂಚಲಿಂಗದರ್ಶನವೆಂದು ಹೇಳುವರು. ಈ ಪುಣ್ಯಕ್ಷೇತ್ರದಲ್ಲಿ ಒಂದು ಐತಿಹ್ಯ ಉಂಟು. ಇಲ್ಲಿ ಅನೇಕ ಶಿವದೇವಾಲಯಗಳು ಇದ್ದು ಅವುಗಳೆಲ್ಲಾ ಮರಳು ಮುಚ್ಚಿಹೋಗಿವೆಯೆಂದು ಹೇಳುತ್ತಾರೆ. ಪೂರ್ವದಲ್ಲಿ ಒಬ್ಬ ವ್ಯಾಪಾರಿಯು ಒಂದು ಹೇರು ಕಡ

ಲೆಯನ್ನು ತಂದು ಆ ಪ್ರದೇಶದಲ್ಲಿ ಶಿವದೇವಾಲಯಗಳ ದೇವರ ಮುಂದೆ ಒಂದು ದೇವರಿಗೆ ಒಂದು ಕಡಲೆಯಂತೆ ಇಟ್ಟು ನಿವೇದನ ಮಾಡುತಾ ಹೋದನಂತೆ. ಕೊನೆಯಲ್ಲಿ ಮಲ್ಲಿಕಾರ್ಜುನೇಶ್ವರನ ಗುಡಿಯು ಬಳಿಗೆ ಬರುವಾಗ ಒಂದು ಕಡಲೆ ಸಾಲದೆಹೋಯಿತಂತೆ. ಆ ದೇವರು ಮುನಿಸಿಕೊಂಡು ನದಿಯ ಆಚೆಹೋಗಿ ವಿಜಾಪುರವೆಂಬ ಊರಲ್ಲಿ ಕೂತುಕೊಂಡಿತಂತೆ. ಆ ಹೇರಿನಲ್ಲಿ ಎಷ್ಟು ಕಡಲೇಕಾಳು ಇತ್ತೋ ಅಷ್ಟು ಲಿಂಗಗಳು ಅಲ್ಲಿ ಪ್ರತಿಷ್ಠೆಯಾಗಿದ್ದು ಈಗ ಅದೆಲ್ಲಾ ಮರಳಲ್ಲಿ ಮುಚ್ಚಿಹೋಗಿದೆ ಎಂದು ಹೇಳುತ್ತಾರೆ.

ಈ ಸ್ಥಳೀಯವಾದ ಒಂದು ಐತಿಹ್ಯವನ್ನು ಈ ನಮ್ಮ ಭರತಖಂಡವೆಂಬ ಮಹಾರಾಜ್ಯಕ್ಕೆ ಹೋಲಿಸಿ ಚರಿತ್ರೆ ಎಂಬ ದುರ್ಬೀನ್ ಅಥವಾ ನಾಳಿಕಾಯಂತ್ರದಿಂದ ಶೋಧಿಸಿ ನೋಡಿದರೆ, ಇಲ್ಲಿ ಆಳಿದ ದೊರೆಗಳಿಗೆ ಹೆಸರಿಗೊಂದು ಕಡಲೇಕಾಳನ್ನು ನಜರಾಗಿ ಹಾಕುತಾ ಬಂದಾಗ್ಯೂ ಅಂಥಾ ಕಡಲೆ ಹೇರು ಅನೇಕವಾಗಬಹುದು. ಅಷ್ಟೊಂದು ಜನ ರಾಜರು ಇಲ್ಲಿ ಆಳಿದರು. ಈ ರಾಜರುಗಳಲ್ಲಿ ಕೆಲವರು ದೊಡ್ಡದಾಗಿ ಸೀಮೆಯನ್ನು ಕಟ್ಟಿ ಚಕ್ರಾಧೀಶ್ವರರೆನ್ನಿಸಿಕೊಂಡರು. ಇನ್ನು ಕೆಲವರು ಚಿಕ್ಕ ಚಿಕ್ಕ ರಾಜ್ಯಗಳನ್ನು ಆಳುತಾ ಸ್ವತಂತ್ರರಾಗಿದ್ದರು. ಮತ್ತು ಅವರು ಒಂದೊಂದು ವೇಳೆ ಅಲ್ಲಲ್ಲಿ ಚಕ್ರಾಧೀಶ್ವರರೆನ್ನಿಸಿಕೊಂಡಿದ್ದವರಿಗೆ ವಶವರ್ತಿಗಳಾಗಿ ಆಳಿಕೊಂಡಿದ್ದರು. ಇಂಥಾ ಚಿಕ್ಕ ರಾಜ್ಯಾಧಿಪತಿಗಳಲ್ಲಿ ಹಲವರಿಗೆ ಈಚೆಗೆ ಪಾಳಯಗಾರರೆಂದು ಹೆಸರು ಬಂದಿದೆ. ಇಂಥಾ ಪಾಳಯಗಾರರ ಸಂಸ್ಥೆಯನ್ನು ಕುರಿತು ಕನ್ನಡಭಾಷೆಯಲ್ಲಿ ಉಪನ್ಯಾಸ ಮಾಡಬೇಕೆಂದು ಮೈಸೂರು ಯೂನಿವರ್ಸಿಟಿ ಎಂಬ ವಿದ್ಯಾನಿಲಯದವರು ನನ್ನನ್ನು ನೇಮಕಮಾಡಿದ ಕಾರಣ, ಈ ವಿಷಯದಲ್ಲಿ ನನಗೆ ತಿಳಿದ ಕೆಲವು ಸಂಗತಿಯನ್ನು ತಮಗೆ ಅರಿಕೆ ಮಾಡಿಕೊಳ್ಳುತ್ತೇನೆ, ಸಾವಧಾನಚಿತ್ತದಿಂದ ಲಾಲಿಸಬೇಕು.

ಪಾಳಯಗಾರ ಶಬ್ದದ ಸಾಧಾರಣಾರ್ಥ.

2 ಒಂದೊಂದು ಚಿಕ್ಕಚಿಕ್ಕ ಪ್ರಾಂತಗಳಲ್ಲಿ ದೊಡ್ಡ ಪ್ರಮುಖರಾಗಿ ದೊರೆಗಳಂತೆ ಆಳಿಕೊಂಡು ಜನರಿಂದ ಕಂದಾಯ ಕಾಣಿಕೆ ಮೊದಲಾದ ವರಿಗಳನ್ನು ತೆಗೆದುಕೊಳ್ಳುತಾ ದುಷ್ಟರನ್ನು ನಿಗ್ರಹಿಸುತಾ ಶಿಷ್ಟರನ್ನು ಕಾಪಾಡುತಾ

ಇದ್ದ ಮುಖಂಡರನ್ನು ಪಾಳಯಗಾರರು ಎಂಬ ಹೆಸರಿನಿಂದ ಕರೆಯುತಿದ್ದರು. ಆಯಾ ಸ್ಥಳದಲ್ಲಿ ಇವರಿಗೆ ಅಧೀನರಾದ ಜನರು ಇವರನ್ನು ದೊರೆಗಳು ಎಂತ ಕರೆಯುತಿದ್ದರು. ಇವರ ವಂಶೀಯರಿಗೆ ಈಗಲೂ ಆಯಾ ಪ್ರದೇಶಗಳಲ್ಲಿ ಗೌರವಾರ್ಥಕವಾಗಿ ದೊರೆಗಳು ಎಂಬುವುದೇ ರೂಢನಾಮವಾಗಿದೆ. ಆದರೆ ಈಚೀಚೆಗೆ ತಮಿಳು ದೇಶಗಳಲ್ಲಿ ಸಾಧಾರಣವಾಗಿ ಬಂದು ಟೋಪಿ ಎಂಬ ಕಿರೀಟವನ್ನು ಧರಿಸಿಕೊಂಡು ಬಂದ ಕರೀ ಸಾಹೇಬರಿಗೆಲ್ಲಾ ಈ ಗೌರವವಾದ ಬಿರುದು ಕೊಡಲ್ಪಟ್ಟಿದೆ. ನಮ್ಮ ಕನ್ನಡ ನಾಡುಗಳಲ್ಲಿ ಈ ಶಬ್ದದ ಪ್ರಯೋಗವು ಅಷ್ಟು ನೈಚ್ಯವನ್ನು ಹೊಂದದೆ 'ಪ್ರಸಿದ್ಧ' ಎಂಬ ಅರ್ಥವನ್ನೇ ಒಳಗೊಂಡಿದೆ. ಆದರೆ ದುಷ್ಟರಾಗಿದ್ದ ಕೆಲವು ಪಾಳಯಗಾರರು ಜನರಿಗೆ ಬಹಳವಾಗಿ ಹಿಂಸೆಮಾಡಿ ಮನಸ್ಸಿ ಅವರಿಗೆ ಬಾಧೆಯನ್ನು ಕೊಡುತಾ, ಇತರರ ಮನೆಗಳನ್ನು ಲೂಟಿ ಮಾಡಿ ಅವರ ಆಸ್ತಿಯನ್ನು ದೋಚಿಕೊಂಡು ಹೆಂಗಸರಿಗೆ ಅನೇಕ ಅವಮಾನಗಳನ್ನು ಮಾಡುತಾ, ದಿಂಡೆಯರಾಗಿದ್ದ ಕಾರಣ ಪಾಳಯಗಾರ ಎಂಬ ಶಬ್ದವು ದುಷ್ಟನಾದ ಪ್ರಮುಖ ಎಂಬದಾಗಿ ಪ್ರಯೋಗಿಸುವಷ್ಟು ನೀಚವಾದ ರೂಢಿಯನ್ನು ಸಹಾ ಒಳಗೊಂಡಿದೆ. "ಆ ಊರಲ್ಲಿ ಇವನು ಪಾಳಯಗಾರನಾಗಿದಾನೆ" ಎಂಬ ವಾಕ್ಯವು ಕೇವಲ ದುಷ್ಟರ ವಿಷಯದಲ್ಲಿ ಪ್ರಯೋಗವಿರತಕ್ಕದ್ದು ತಮಗಳಿಗೆ ಗೊತ್ತೇ ಇದೆ. ಇದು ಹೀಗಿರಲಿ. ಪಾಳಯಗಾರ ಎಂಬ ಶಬ್ದಕ್ಕೆ ನಿಜವಾದ ಅರ್ಥವನ್ನು ವಿಚಾರಮಾಡಿ ನೋಡೋಣ. ಸ್ವಲ್ಪಕಾಲ ಜನರು ತಂಗಿ ಇಳಿದುಕೊಳ್ಳುವ ಸ್ಥಳಕ್ಕೆ ಪಾಳಯವೆಂದು ಹೆಸರು.

ಪಾಳಯಗಾರರು ವಿಜಯ ನಗರಕ್ಕೆ ಅಧೀನ

(ಎ) ಚರಿತ್ರೆಗಳನ್ನು ಶೋಧಿಸಿ ನೋಡುವಲ್ಲಿ ವಿಜಯನಗರದ ಸಂಸ್ಥಾನವು ಪ್ರಬಲವಾದ ಸ್ಥಿತಿಯಲ್ಲಿದ್ದಾಗ ಈ ಶಬ್ದಪ್ರಯೋಗವು ರೂಢಿಗೆ ಬಂದಹಾಗೆ ತೋರಿಬರುತಿದೆ. ಅದಕ್ಕೆ ಹಿಂದೆ ಎಲ್ಲಿಯೂ ರೂಢಿಯಲ್ಲಿದ್ದಹಾಗೆ ತೋರಲಿಲ್ಲ. ಪಾಳಯಗಾರರೆಂಬ ಅಧಿಪತಿಗಳು ವಿಜಯನಗರದ ದೊರೆಗಳಿಗೆ ವಶವರ್ತಿಗಳಾಗಿ ಅವರಿಗೆ ಕಪ್ಪ ಮೊದಲಾದ್ದನ್ನು ಕೊಡುತಾ ಯುದ್ಧಪ್ರಸಕ್ತಿ ಬಂದಾಗಲೂ ಇತರ ಕಾಲಗಳಲ್ಲಿಯೂ ಅವರ ಸಹಾಯಕ್ಕೆ ತಮ್ಮ ದಂಡನ್ನು ಕಳುಹಿಸುತಾ ಇದ್ದ

ರೆಂದು ಗೊತ್ತಾಗಿದೆ. ಇಂಥಾ ತಮ್ಮ ಸೇನೆಗಳೊಡನೆ ಈ ಮುಖಂಡರು ವಿಜಯನಗರದ ಮಹಾರಾಜರ ದರ್ಶನಕ್ಕೆ ಹೋಗಿ ರಾಜಧಾನಿಯ ಹೊರ ಭಾಗದಲ್ಲಿ ಇಳಿದುಕೊಂಡು ಗುನಗುಬಜಾರ ಸಮೇತವಾಗಿ ಪಾಳಯ ಹಾಕಿ ಇರುತಿದ್ದಕಾರಣ, ಆಯಾ ಪ್ರಮುಖರಿಗೆ ಪಾಳಯಗಾರರೆಂದು ಹೆಸರು ಬಂತೋ; ಅಥವಾ ಈ ಪ್ರಮುಖರು ದೊಡ್ಡ ದೊಡ್ಡ ಪ್ರದೇಶಗಳನ್ನು ಆಕ್ರಮಿಸಿ ಅನುಕೂಲವಾದ ಒಂದುಕಡೆಯಲ್ಲಿ ಚಿಕ್ಕ ಊರಿನಂತೆ ಮಾಡಿಕೊಂಡು ಅಲ್ಲಿರುತಿದ್ದದರಿಂದ ಅಂಥಾ ಊರುಗಳಿಗೆ ಅಥವಾ ಪಾಳಯಗಳಿಗೆ ಯಜಮಾನರಾದವರಿಗೆ ಪಾಳಯಗಾರರೆಂದು ರೂಢಿಯಾಯಿತೋ; ಅಥವಾ ಒಂದು ಅನುಕೂಲವಾದ ಸ್ಥಳ ಗೊತ್ತಾಗಿ ಸಿಕ್ಕದೆ ಕಾಟಕಾಯಗಳು ಹೆಚ್ಚಾಗಿ ಶತ್ರುಗಳ ಬಾಧೆ ಅಧಿಕವಾಗಿದ್ದಾಗ ಸ್ವಲ್ಪ ಕಾಲ ದಂಡಿನೊಡನೆ ಪಾಳಯಕಟ್ಟಿ ಇಳಿದು ಕೊಳ್ಳುತಾ ಇದ್ದ ಪ್ರಬಲರಿಗೆ ಈ ಅಂಕಿತನಾಮವನಿಟ್ಟರೋ; ಅಥವಾ ವಿಜಯನಗರದ ಸಂಸ್ಥಾನದ ದಂಡು ಶತ್ರುಗಳ ಮೇಲೆ ಹೊರಟಾಗ ಈ ಪ್ರಭುಗಳು ತಮ್ಮ ದಂಡಿನೊಡನೆ ಅವರ ಸಹಾಯಕ್ಕೆ ಹೋಗಿ ಒಂದೊಂದು ಸ್ಥಳದಲ್ಲಿ ಇಳಿದುಕೊಳ್ಳುತಿದ್ದದರಿಂದ ಅವರಿಗೆ ಪಾಳಯಗಾರರೆಂದು ಅಭಿದಾವಾಯಿತೋ, ಖಂಡಿತವಾಗಿ ಯಾವ ಮೂಲವೂ ಗೊತ್ತಾಗಿಲ್ಲ. ಪಾಳಯಗಾರರೆಂಬ ಹೆಸರೇನೋ ರೂಢಿಗೆ ಬಂತು.

ವಿಜಯ ನಗರದವರು ಇವರನ್ನು ನೇಮಿಸಿದ್ದಲ್ಲ.

(ಬಿ) ವಿಜಯನಗರದ ಸಂಸ್ಥಾನದ ಏರ್ಪಾಡಿನಿಂದ ಈ ಪಾಳಯಗಾರ ಸಂಸ್ಥೆಯು ಈ ಹೆಸರನ್ನು ಹೊಂದಿ ಪ್ರಸಿದ್ಧಿಗೆ ಬಂತೆಂದು ತಿಳಿಯಬರುತ್ತಿದೆಯಷ್ಟೆ. ಆದರೆ ವಿಜಯನಗರದ ಸಂಸ್ಥಾನವು ಸ್ಥಾಪನೆಯಾದ್ದು ಕ್ರಿ. ಶ. ೧೩೩೫-೬ ರಲ್ಲಿ ಎಂದು ಚರಿತ್ರಕರ್ತರು ನಿಷ್ಕರ್ಷೆ ಮಾಡಿದಾರೆ. ಇಲ್ಲಿನ ಅರಸರ ಮೂಲವನ್ನು ವಿಚಾರಮಾಡುತಾ ಹೋದರೆ ಸಂಶಯವೆಂಬ ಸಮುದ್ರದಲ್ಲಿ ನಾನು ತೇಲಿಮುಳುಗುತಾ ಇರಬೇಕಾಗುವುದು. ಇದಕ್ಕೆ ಕೆಲವು ವರುಷಗಳ ಮುಂಚೆ ಗುಲಾಮಿ ಸಂತತಿಯ ದಿಳ್ಳೀಮುಸಲ್ಮಾನರು ಅಲ್ಲಾಉದೀನನ ಕಾಲದಲ್ಲಿ ಹಿಂದೂಸ್ಥಾನವನ್ನೆಲ್ಲಾ ಜೈಸುವುದಕ್ಕೆ ಹೊರಟರಷ್ಟೆ. ಪ್ರಬಲವಾದ ಇವರ ಹಾವಳಿಯಲ್ಲಿ, ಈಗ ಹೈದರಾಬಾದು ಪ್ರಾಂತಕ್ಕೆ ಸೇರಿರುವ ಓರಗಲ್ಲು ಸಂಸ್ಥಾನವು

ಅನ್ಯದೇಶೀಯರ ವಶವಾಯಿತು. ಅಲ್ಲಿದ್ದ ತೆಲಗುರಾಜರ ವಂಶೀಯರು ಕೆಲವರು ದಕ್ಷಿಣಕ್ಕೆ ಓಡಿಬಂದರು. ಇವರು ಆನೇಗೊಂದಿಯನ್ನು ಸೇರಿ ಬ್ರಾಹ್ಮಣರಾದ ಮಾಧವಾಚಾರ್ಯರೆಂಬ ಮಹಾಮಂತ್ರಿಯ ಸಹಾಯದಿಂದ ವಿಜಯನಗರವನ್ನು ಸ್ಥಾಪನೆಮಾಡಿದ ಹಾಗೆ ಸೂಚನೆ ಇದೆ. ಎಂತಾದರೂ ಇರಲಿ. ಈ ವಿಜಯನಗರದ ರಾಜರೇ ಮೊಟ್ಟಮೊದಲು ಈ ಸಂಸ್ಥೆಯನ್ನು ಏರ್ಪಡಿಸಿದ್ದರೆ ಅದು ೧೩೩೫-೬ ಕ್ಕೆ ಮುಂಚೆ ಇರಲಾರದು ಎಂದು ಹೇಳಬೇಕಾಗುವುದು.

ಕೆಲವು ಪಾಳಯಗಾರರು ಮುಂಚಿನಿಂದ ಇದ್ದರು.

ಆದರೆ ಗುಮ್ಮನಾಯಕನ ಪಾಳಯದ ಚರಿತ್ರೆಯನ್ನು ನೋಡುವಲ್ಲಿ, ಮದನಪಲ್ಲಿ ತಾಲ್ಲೋಕು ದೊಡ್ಡಪಾಳ್ಯದಲ್ಲಿ, ಒಬ್ಬ ಪ್ರಮುಖನು ಅಧಿಪತಿಯಾಗಿದ್ದನು. ಈತನ ತಮ್ಮಂದಿರಾದ ನಾರಸಿಂಹನಾಯಕ, ಖಾದ್ರಿಪತಿನಾಯಕ ಇವರಿಬ್ಬರೂ ಸೇರಿ ಪೂರ್ವದ ರಾಜ್ಯವನ್ನು ತಮ್ಮಣ್ಣನಿಗೆ ಬಿಟ್ಟು ತಾವು ಹೊಸದಾಗಿ ಸೀಮೆಯನ್ನು ಸಂಪಾದಿಸಬೇಕೆಂದು ಶಾ|| ವಾ|| ಶ. ೧೧೬೫ ನೇ ಶುಭಕೃತು ಸಂವತ್ಸರದಲ್ಲಿ ಹೊರಟರು. ಈ ವರುಷವು ಕ್ರಿ. ಶ. ೧೨೪೩ ಕ್ಕೆ ಸರಿಹೋಗುವುದು. ಈ ಹೆಗ್ಗಡಿಗಳ ವಂಶವು ಮುಂದೆ ಸಾಗುತಾ ಹೋಯಿತು. ಆದರೆ ಮೇಲಿನ ಸಂಗತಿಯನ್ನು ಶೋಧಿಸಿ ನೋಡಿದರೆ ಕ್ರಿ. ಶ. ೧೨೪೩ ಕ್ಕೆ ಮುಂಚೆನಿಂದಲೂ ಇವರ ವಂಶ ನಡೆಯುತಾ ಬಂದಹಾಗೆ ತೋರುವುದು. ಕ್ರಿ. ೧೩೩೬ರಲ್ಲಿ ವಿಜಯನಗರದ ಸಂಸ್ಥಾನ ಸ್ಥಾಪನೆಯಾದ್ದರಿಂದ ಇದಕ್ಕೆ ೯೦ ವರುಷಗಳಿಗೆ ಮುಂಚೆಯೇ ಈ ಪ್ರಮುಖರಾದ ಪಾಳಯಗಾರ ಅಧಿಕಾರಿಗಳು ಅನೇಕರು ಇದ್ದಂತೆ ಸ್ಪಷ್ಟವಾಗುವುದು.

ಆಳಿದ ರಾಜರ ವಿಷಯವಾದ ಕಾರಣ.

ಇದೂ ಅಲ್ಲದೆ ವಿಜಯನಗರದಲ್ಲಿ ಆಳಿದ ಮೊದಲನೇ ಸಂತತಿಗೆ ಮೂಲಪುರುಷನು ಸಂಗಮರಾಯ. ಈ ಸಂಗಮನ ಹಿರೀಮಗ ೧ನೇ ಹರಿಹರ. ಇವನು ಕ್ರಿ. ಶ. ೧೩೩೬ ರರಿಂದ ೧೩೫೪ ರ ವರೆಗೆ ಆಳಿದನು. ಇವನ ತರುವಾಯ ಇವನ ತಮ್ಮ ೧ನೇ ಬುಕ್ಕನಿಗೆ ೧೩೫೪ ರಲ್ಲಿ ಪಟ್ಟವಾಯಿತು. ಸಂಗಮನ ತಂದೆಯ ಹೆಸರು ಬುಕ್ಕನೆಂತಲೇ. ಇವನಿಗೆ ಎಲ್ಲಿಯೂ ದೊರೆತನವಿದ್ದಹಾಗೆ ತಿಳಿಯಬಂದಿಲ್ಲ. ಆದ್ದರಿಂದ

ಗುಮ್ಮನಾಯಕನ ಪಾಳಯದ ಚರಿತ್ರೆಯಲ್ಲಿ ದಂಡೆತ್ತಿ ಬಂದಂತೆ ಸೂಚಿಸಿರುವ ಬುಕ್ಕರಾಯನು ೧ ನೇ ಹರಿಹರನ ೨ನೇ ತಮ್ಮನಾದ ೧ ನೇ ಬುಕ್ಕರಾಯನೇ ಆಗಿರಬೇಕು. ಇವನು ಕ್ರಿ. ೧೩೫೪ ರಲ್ಲಿ ದೊರೆಯಾದ್ದೇನೋ ನಿಜ. ಅದಕ್ಕೆ ಮುಂಚಿನಿಂದ ದೇಶಗಳನ್ನು ಜೈಸುತಾ ಕಡೆಗೆ ಖ್ಯಾತಿಪಡೆದು ವಿಜಯನಗರದಲ್ಲಿ ೧೩೩೬ ರಲ್ಲಿ ಈ ಜನ ದೊರೆಯಾದರು. ೧ ನೇ ಹರಿಹರನ ಆಳಿಕೆಯಲ್ಲಿ ದೊರೆಯ ತಮ್ಮನಾದ ೧ನೇ ಬುಕ್ಕನು ವಿಶೇಷ ಸಮರ್ಥನಾದ್ದರಿಂದ ಅವನಿಗೆ ಯುವರಾಜ ಪದವಿಯನ್ನು ಕೊಟ್ಟಿದ್ದರು. ಇವನೂ ಇವನ ತಮ್ಮಂದಿರು ಮಾರಪ್ಪ ಮುದ್ದಪ್ಪ ಎಂಬುವರೂ ಸೇನಾನಾಯಕರಾಗಿ ನೇಮಕವಾದ ಹಾಗೂ ಇವರು ದಿಗ್ದೇಶಗಳನ್ನು ಜೈಸಲು ಹೊರಟಹಾಗೂ ತಿಳಿಯಬಂದಿದೆ. ಇವರುಗಳಲ್ಲಿ ಸಮರ್ಥನಾದ ಬುಕ್ಕನು ಯುವರಾಜನಾಗಿದ್ದದೂ ಅಲ್ಲದೆ ದಳವಾಯಿಯೂಗಿಯೂ ಇದ್ದ ಹಾಗೆ ಕಂಡುಬರುವುದು. ಬುಕ್ಕರಾಯನ ದಂಡು ಬಂತೆಂದು ಗುಮ್ಮನಾಯಕನ ಪಾಳಯದ ಚರಿತ್ರೆಯಲ್ಲಿದೆ. ಇವರು ಕಡಪ, ನೆಲ್ಲೂರು ಮೊದಲಾದ ಪ್ರದೇಶಗಳನ್ನು ಜೈಸಿದರು. ಇಂಥಾ ವಿಜಯ ಯಾತ್ರೆಯಲ್ಲಿ ಮಗ್ಗಲಸೀಮೆಯಾದ ಗುಮ್ಮನಾಯಕನ ಪಾಳಯದವರ ಮೇಲೂ ಇವರು ಕೈಮಾಡಿರಬಹುದೆನ್ನುವುದಕ್ಕೆ ಅನುಮಾನವಿಲ್ಲ. ಈ ಜಯವನ್ನು ಬುಕ್ಕನು ದಳಪತಿಯಾಗಿ ಹೊಂದಿರಬಹುದಲ್ಲದೆ ದೊರೆಯಾಗಿದ್ದುಕೊಂಡು ಹೊಂದಿದ ಹಾಗೆ ಕಾಣುವುದಿಲ್ಲ, ಅದುವರೆಗೆ ಹರಿಹರನ ಅಧಿಕಾರ ಸ್ಥಿರವಾಗಿಯೇ ಇರಲಿಲ್ಲ. ಇಂಥವರು ಪಾಳಯಗಾರರ ಸಂಸ್ಥೆಯನ್ನು ಏರ್ಪಡಿಸಲು ಅಧಿಕಾರವೆಲ್ಲಿಂದ ಬಂತು ?

ಗುಮ್ಮನಾಯಕನ ಪಾಳಯದ ದಾಖಲೆ.

ಮೇಲಾಗಿ ಆ ಕಾಲದಲ್ಲಿ ಗುಮ್ಮನಾಯಕನ ಪಾಳಯದಲ್ಲಿ ನಾಲ್ಕನೇ ತಲೆಯ ಪಾಳಯಗಾರ ಗುಮ್ಮನಾಯಕನು ಆಳುತ್ತಿದ್ದಾಗ ಮೊಲ್ಲಂಡ ಬುಕ್ಕರಾಯನು ಈ ಪಾಳಯಪಟ್ಟಿನ ಸೀಮೆಯನ್ನು ಜೈಸಿ ಸ್ವಾಧೀನ ಮಾಡಿಕೊಳ್ಳಲು ಬಂದನು. ಗುಮ್ಮನಾಯಕನು ವಿಜಯನಗರದ ಅರಸರಿಗೆ ಪೊಗದಿಯನ್ನು ಕೊಡುತಾ ತನ್ನ ಸೇನೆಯನ್ನು ಅವರ ಸಹಾಯಕ್ಕೆ ಕಳುಹಿಸುತಾ ಅವರಿಗೆ ವಶವರ್ತಿಯಾಗಿರುವಂತೆ ಒಪ್ಪ ಕೌಲು ಮಾಡಿಕೊಂಡನು. ಈ ಒಪ್ಪಂದ ನಡೆದದ್ದು ಇಂಥಾ ಸಂವತ್ಸರದಲ್ಲಿಯೇ

ಎಂದು ನನಗೆ ದೊರೆತ ಪುರಾತನ ಲೇಖನಗಳಿಂದ ತಿಳಿದುಬರಲಿಲ್ಲ. ಆದರೆ ಮೇಲೆ ಕಂಡ ಪಾಳಯಗಾರ ಗುಮ್ಮನಾಯಕನು ಕ್ರಿ. ೧೨೯೬ ನೇ ಮನ್ಮಥ ಸಂ॥ ದಿಂದ ೧೮ವರುಷ ಆಳಿ ಕ್ರಿ॥೧೩೧೪ ನೇ ಪ್ರಮಾದೀಚ ಸಂ॥ ದ ಜ್ಯೇಷ್ಠ ಮಾಸದಲ್ಲಿ ಮೃತಪಟ್ಟ ಹಾಗೆ ತಿಳಿಯಬಂದಿದೆ. ಆದಕಾರಣ ಬುಕ್ಕರಾಯನ ಸೇನೆಯು ಈ ಸೀಮೆಗೆ ಮುತ್ತಿಗೆ ಹಾಕಿದ್ದು ಮೇಲೆ ಹೇಳಿದ ೧೮ ವರುಷದೊಳಗಾಗಿ ನಡೆದಿರಬೇಕು. ಆಗ ಎಂದರೆ ಕ್ರಿ॥ ೧೩೧೪ ನೇ ಪ್ರಮಾದೀಚ ಸಂ॥ ದ ವರೆಗೆ ವಿಜಯನಗರದಲ್ಲಿ ನರಪತಿ ರಾಜರ ಸಂಸ್ಥಾನ ಇನ್ನೂ ಸ್ಥಾಪನೆಯೇ ಆಗಿರಲಿಲ್ಲವೆಂದು ತೋರಿಬರುವುದು. ಅದುವರೆಗೆ ಗುಮ್ಮನಾಯಕನ ಪಾಳ್ಯದ ದೊರೆಗಳ ವಂಶದಲ್ಲಿ ನಾಲ್ಕುತಲೆ ಕಳೆದುಹೋಗಿತ್ತು. ಹೀಗೆ ಇನ್ನೂ ತಮ್ಮ ಬುಡವನ್ನು ಭದ್ರಮಾಡಿಕೊಂಡು ವಿಜಯನಗರದಲ್ಲಿ ರೂಢಮೂಲರಾಗುವುದಕ್ಕೆ ಮುಂಚೆಯೇ ತಮ್ಮ ರಾಜ್ಯದಲ್ಲೆಲ್ಲಾ ಪಾಳಯಗಾರರನ್ನು ಏರ್ಪಡಿಸಿ ತಾವು ಚಕ್ರವರ್ತಿಗಳೆಂದು ಹೊಗಳಿಸಿಕೊಂಡರೆಂಬದಾಗಿ ಹೇಳಿದರೆ ಅಸಂಭವವಾಗುವುದು. ಆದಕಾರಣ ವಿಜಯನಗರದ ಸಂಸ್ಥಾನದವರು ಮೊಟ್ಟಮೊದಲು ಪಾಳಯಗಾರರ ಸಂಸ್ಥೆಯನ್ನು ಏರ್ಪಡಿಸಿದರೆಂಬ ಅಂಶ ಸಂಶಯಾಸ್ಪದವಾಗಿದೆ.

ಇತರ ಅಧಿರಾಜರಿಗೆ ಅಧೀನರಾಗಿದ್ದವರು ಪಾಳಯಗಾರರೇ.

(ಸಿ) ಇಲ್ಲಿ ಅರಿಕೆ ಮಾಡಬೇಕಾದ ಇನ್ನೊಂದು ವಿಷಯವಿದೆ. ಪುರಾತನ ಕಾಲದಲ್ಲಿ ಈ ಕರ್ಣಾಟಕ ರಾಜ್ಯವು ಆಗಾಗ್ಗೆ ಕೃಷ್ಣಾ ಮತ್ತು ಗೋದಾವರೀ ನದಿಗಳಿಗೆ ಉತ್ತರ ದಿಕ್ಕಿನಲ್ಲಿರುವ ಪ್ರಾಂತಗಳಿಂದ ಕನ್ಯಾಕುಮಾರಿವರೆಗೂ ವ್ಯಾಪಿಸುತ್ತಾ ಇದ್ದಹಾಗೆ ತಿಳಿಯಬರುವುದು. ಈ ದೊಡ್ಡ ವಿಸ್ತಾರವಾದ ಪ್ರದೇಶದಲ್ಲಿ ಹಿಂದಕ್ಕೆ ಗಂಗರಾಜರು, ತರುವಾಯ ಪಲ್ಲವರು, ಚಾಳುಕ್ಯರು, ಹೊಯಿಸಲ ಬಳ್ಳಾಳರು, ರಾಷ್ಟ್ರಕೂಟರು, ಕಾಲಭೂರ್ಯರು, ಇವರೇ ಮೊದಲಾದ ರಾಜವಂಶದ ದೊರೆಗಳು ಆಳುತಿದ್ದರು. ಈ ಸರಣಿಯಲ್ಲಿ ವಿಜಯನಗರದವರೇ ಕೊನೆಯವರಾಗಿದಾರೆ. ಈ ವಂಶದ ರಾಜರುಗಳೆಲ್ಲಾ ಚಕ್ರವರ್ತಿಗಳೆಂತಲೇ ಹೊಗಳಿಸಿಕೊಂಡಿದಾರೆ. ಇವರಲ್ಲಿ ಪುಲಕೇಶಿ ಮೊದಲಾದ ದೊರೆಗಳು ರಾಜಸೂಯಾಗವನ್ನೂ ಕೂಡ ಮಾಡಿ ಚಕ್ರಾಧಿಪತಿಗಳಾಗಿದಾರೆ. ಇವರು

ಗಳು ಹೀಗೆ ಚಕ್ರಾಧೀಶ್ವರರೆಂದು ಬಿರುದನ್ನು ಹೊಂದಬೇಕಾದರೆ, ಇವರಿಗೆ ಅಧೀನ ರಾಜರು ಅನೇಕರು ಇದ್ದೇ ಇರಬೇಕು. ಅಂಥಾ ಅಧೀನ ರಾಜರು ಈ ಪಾಳಯಗಾರಲ್ಲದೆ ಬೇರೆ ಯಾರು ಯಾರು, ಅವರುಗಳು ಎಲ್ಲೆಲ್ಲಿದ್ದರು, ಎನ್ನುವುದು ಎಲ್ಲಿಯೂ ವಿವರಿಸಲ್ಪಟ್ಟಿಲ್ಲ. ಆದರೆ ಅಂಥಾ ಮಹಾರಾಜರ ಅಧೀನದಲ್ಲಿ ಇತರ ಚಿಕ್ಕ ದೊರೆಗಳು ಯಾರೂ ಇಲ್ಲದಿದ್ದರೆ ಅವರು ಅಧಿರಾಜರು ಎಂತಲೂ, ಚಕ್ರವರ್ತಿಗಳು ಎಂತಲೂ ಹೊಗಳಿಸಿಕೊಳ್ಳುವುದಕ್ಕೆ ಆಗಲಾರದು.

ಈ ಸಂದರ್ಭವನ್ನೂ ಮತ್ತು ವಿಜಯನಗರದ ಸಂಸ್ಥಾನ ಸ್ಥಾಪನೆಯಾಗುವುದಕ್ಕೆ ಸುಮಾರು ಒಂದು ಶತಮಾನಕ್ಕೆ ಮುಂಚೆ ಗುಮ್ಮನಾಯಕನ ಪಾಳಯದ ಪಾಳಯಗಾರರೂ ಇತರ ಚಿಕ್ಕ ಪಾಳಯಗಾರರೂ ಅಲ್ಲಲ್ಲಿ ಆಳಿಕೊಂಡಿದ್ದದನ್ನೂ ಕಲೆಯಿಸಿಕೊಂಡು ಯೋಚಿಸಿದರೆ, ಅನೇಕಜನ ಚಿಕ್ಕ ಚಿಕ್ಕ ಸಾಮಂತ ರಾಜರು ಅಲ್ಲಲ್ಲಿ ಸಣ್ಣ ಸಣ್ಣ ಪ್ರಾಂತಗಳಿಗೆ ಅರಸರೆನ್ನಿಸಿಕೊಂಡು ಆಳುತ್ತಿದ್ದರೆಂತಲೂ, ಅವರುಗಳನ್ನು ಪ್ರಬಲರಾದ ಮಹಾರಾಜರು ಜೈಸಿ ರಾಜಾಧಿರಾಜರೆನ್ನಿಸಿಕೊಂಡರೆಂತಲೂ, ಅಂಥಾ ಸಾಮಂತ ನರಪತಿಗಳೇ ಪಾಳಯಗಾರರೆಂಬ ಹೆಸರಿನಿಂದ ವಿಜಯನಗರದ ಸಂಸ್ಥಾನ ಸ್ಥಾಪನೆಯಾಗುವುದಕ್ಕೆ ಮುಂಚೆನಿಂದಲೂ ದಕ್ಷಿಣ ದೇಶದಲ್ಲಿರಲೇಬೇಕೆಂತಲೂ ನಿರ್ಧರ ಮಾಡಬೇಕಾಗುವುದು. ವಿಜಯನಗರದವರು ಈ ಕ್ರಮ ಅನುಸರಿಸಿ ನೇಮಿಸಿದವರಿಗೂ ಈ ಹೆಸರನ್ನೇ ಇಟ್ಟಿರಬಹುದು.

ಇಂಥಾ ಅಧೀನರಾಜರು ಉತ್ತರದಲ್ಲಿಯೂ ಇದ್ದರು.

(ಡಿ) ಇಂಥಾ ಅಧೀನ ರಾಜರು ದಕ್ಷಿಣ ದೇಶದಲ್ಲಿ ಇದ್ದದಲ್ಲದೆ ಉತ್ತರ ದೇಶದಲ್ಲಿಯೂ ಹೇರಳವಾಗಿ ಇದ್ದರೇ? ವಿಚಾರ ಮಾಡಿ ನೋಡೋಣ. ಭೂಮಿಯ ಸ್ವಾಮ್ಯವನ್ನು ಕುರಿತು ಕಕ್ಷಿಣ ದೇಶದಲ್ಲಿ ಇರುವ ರೈತವಾರ್ ಸಿಸ್ತು ಪೂರ್ವದಲ್ಲಿ ವಿಶೇಷವಾಗಿರಲಿಲ್ಲ. ಅಲ್ಲಿದ್ದ ಪೂರ್ವ ಪದ್ಧತಿಗಳನ್ನು ಬದಲಾಯಿಸಲು ಹುಟ್ಟಿದ ಹಲವು ಅವಾಂತರಗಳನ್ನು ಮುಂದೆ ವಿವರಿಸುತೇನೆ. ಈ ಅಂಶದಲ್ಲಿ ಇಷ್ಟೊಂದು ಬದಲಾವಣೆಯು ಉತ್ತರ ದೇಶದಲ್ಲಿ ಆಗಲಿಲ್ಲ. ದಕ್ಷಿಣಕ್ಕಿಂತಲೂ ಉತ್ತರದಲ್ಲಿ ಮುಸಲ್ಮಾನರ ಪ್ರಾಬಲ್ಯ ಹೆಚ್ಚಾಗಿತ್ತು. ಅವರು ದೇಶವನ್ನು ಜೈಸಿ

ಸ್ವಾಧೀನ ಮಾಡಿಕೊಂಡು ಆಳುತಿದ್ದರೆಂದರೆ, ಊರುಗಳನ್ನು ಹಿಡಿದರು, ಸಿಕ್ಕಿದ ಜನರನ್ನು ಕೊಂದರು, ಕೊಳ್ಳೇಮಾಡಿದರು, ಬೇಕಾದ್ದನ್ನು ತೆಗೆದುಕೊಂಡು ಹೋದರು, ವಿಶೇಷವಾಗಿ ಸೇನೆಯನ್ನು ಕಟ್ಟಿದರು, ತಮ್ಮ ಪದವಿಯ ಅಟ್ಟಹಾಸವನ್ನು ತೋರಿಸಿದರು, ಇದ್ದ ಕಟ್ಟಡಗಳನ್ನು ಮುರಿದರು, ಬೇರೇ ಕಟ್ಟಡಗಳನ್ನು ಕಟ್ಟಿದರು, ಅನೇಕ ಸ್ತ್ರೀಯರಿಗೆ ಮಾನಭಂಗ ಮಾಡಿದರು, ಬೇಕಾದ ಆಹಾರಗಳನ್ನು ತಿಂದು ಪೇಯಗಳನ್ನು ಕುಡಿದು ಆನಂದವಾಗಿದ್ದರು, "ಖಾನ ಖಲಾನ ಪೀನ ಪಿಲಾನ" ಎಂದುಕೊಂಡು ಇದ್ದರು—ಎಂದು ಅರ್ಥವಾಗುವುದೇ ಹೊರತು, ಜನರ ಕ್ಷೇಮಕ್ಕೂ ಸರ್ಕಾರದ ಆದಾಯಕ್ಕೂ ಅನುಕೂಲವಾದ ಮಹಾಕಾರ್ಯಗಳನ್ನು ನಿರ್ವಹಿಸಿದರೆಂದು ಧಾರಾಳವಾಗಿ ನಿರ್ಧರಿಸತಕ್ಕದ್ದು ಕಷ್ಟವಾದ ಕೆಲಸವಾಗುವುದು. ಹೀಗಿದ್ದಾಗ್ಯೂ ಗುಲ್ಬರ್ಗಾ ಸಂಸ್ಥಾನದಲ್ಲಿದ್ದ ಮಹಮೂದ್ ಗವಾನನೂ, ಉತ್ತರದಲ್ಲಿ ಚಕ್ರವರ್ತಿಯಾದ ಫಿರೋಜ್ ತೊಗಲಕನೂ, ಮೊಗಲಾಯರ ಎರಡನೇ ದೊರೆಯಾದ ಹುಮಾಯೂನನನ್ನು ಈ ದೇಶದಿಂದ ಓಡಿಸಿ ತಾನೇ ದಿಳ್ಳೀಯಲ್ಲಿ ಚಕ್ರವರ್ತಿಯಾಗಿದ್ದ ಷೇರ್‌ಖಾ಼ಸೂರನೂ, ಅಕ್ಬರ್‌ಪಾದಷಹನಲ್ಲಿ ಸುವರ್ಣಾದಾಯದ ಬಾಬಿಗೆ ಮಂತ್ರಿಯಾಗಿದ್ದ ರಾಜಾ ತೋದರ್‌ಮುಲ್ ಎಂಬಾತನೂ, ಈ ಮಂತ್ರಿಗಳು ಸರ್ಕಾರದ ಆದಾಯವನ್ನು ಕ್ರಮಪಡಿಸುವುದಕ್ಕೆ ಅಗತ್ಯವಾದ ಏರ್ಪಾಡುಗಳನ್ನು ಸ್ವಲ್ಪಮಟ್ಟಿಗೆ ಮಾಡಿದರು. ಆದರೆ ಇವರೂ ಕೂಡ ಈ ದೇಶದಲ್ಲಿ ಪೂರ್ವದಿಂದಲೂ ಇದ್ದ ಪದ್ಧತಿಯನ್ನು ಕೆಡಿಸಲಿಲ್ಲ. ಮೊದಲು ಈ ರಾಜ್ಯದಲ್ಲಿ ವಾಡಿಕೆಯಾಗಿದ್ದ ಸಿಸ್ತನ್ನೂ ಆಚರಣೆಯನ್ನೂ ಇಟ್ಟುಕೊಂಡು ಅದರಮೇಲೆ ಕಾಲೋಚಿತವಾಗಿ ತಮಗೆ ತೋರಿದ ಏರ್ಪಾಡನ್ನು ಮಾಡಿದರು. ಪೂರ್ವದಿಂದಲೂ ಭೂಸ್ವಾಮ್ಯವನ್ನು ಸ್ವತಂತ್ರವಾಗಿ ಅನುಭವಿಸುತಾ ಇದ್ದ ಮುಖಂಡರು ಪ್ರತ್ಯೇಕ ಪ್ರತ್ಯೇಕವಾಗಿ ತಮ್ಮ ಹಕ್ಕನ್ನು ಅನುಭವಿಸುತಾ ಇದ್ದರು. ಇಂಥವರು ಯಾರು ಯಾರು ಅವರುಗಳ ಹಕ್ಕಿನ ಸ್ವಭಾವ ಎಂಥಾದ್ದು ಅದನ್ನು ಕೂಡಿದ ಮಟ್ಟಿಗೂ ಇಲ್ಲಿ ವಿವರಿಸಬೇಕಾದ್ದು ಅಗತ್ಯವೆಂದು ತೋರುತಿದೆ; ಹೇಗೆಂದರೆ :—

## (1) ಬಂಗಾಳಾ ಪ್ರಾಂತದಲ್ಲಿರುವ ಜಮೀನ್ದಾರರು.

ಬಂಗಾಳ ಜಮೀನ್ದಾರರು.

ತುರುಕರು ಈ ಸೀಮೆಗೆ ಬರುವುದಕ್ಕೆ ಮುಂಚೆನಿಂದಲೂ ಗ್ರಾಮಗಳಲ್ಲಿ ಸೇರಿಕೊಂಡು ಅಲ್ಲಿನ ಭೂಮಿಗೆಲ್ಲಾ ಸ್ವಾಮಿತ್ವವನ್ನು ಹೇಗೆಯೋ ಸಂಪಾದಿಸಿ ಮುಖಂಡರಾಗಿ ಆಯಾಕಾಲಗಳಲ್ಲಿದ್ದ ಸರ್ಕಾರದವರಿಗೆ ಆಯಾ ಗ್ರಾಮಗಳಿಗಾಗಿ ನಿಗದಿಯಾದ ಹಣವನ್ನು ಕೊಡುತಾ ಸ್ವಾಮ್ಯವನ್ನು ಸಂಪಾದಿಸಿಕೊಂಡವರು ಜಮೀನ್ದಾರರೆನ್ನಿಸಿಕೊಳ್ಳುತಾ ಬಂದರು. ಬಂಗಾಳ ಪ್ರಾಂತದಲ್ಲೆಲ್ಲಾ ವಿಶೇಷವಾಗಿ ಇವರೇ ಆಗಿದಾರೆ. ಆಯಾ ಕಾಲಗಳಲ್ಲಿದ್ದ ಸರ್ಕಾರದವರ ವಿಷಯದಲ್ಲಿ ವಿಧೇಯತೆಯಿಂದಲೂ, ವಿಶ್ವಾಸದಿಂದಲೂ ನಡೆದುಕೊಳ್ಳುತಾ, ನಿಗದಿಯಾದ ಮೊತ್ತವನ್ನು ಪಾವತಿ ಮಾಡುತಾ ಇರುವ ತನಕ ಇವರ ಹಕ್ಕಿಗೆ ಚ್ಯುತಿ ಇಲ್ಲ. ಇವರಲ್ಲಿ ವಿಶೇಷವಾಗಿ ಪ್ರಬಲರಾದವರು ರಾಜರು ಮಹಾರಾಜರು ಎಂಬ ಹೆಸರುಗಳನ್ನು ಸಹ ಹೊಂದಿದಾರೆ. ಇವರು ವಿಶೇಷವಾಗಿ ಪ್ರಬಲಿಸಲು ಮತ್ತು ಶಿಕ್ಷರಕ್ಷಣಾಧಿಕಾರವನ್ನು ಹೊಂದಿ ಸೇನೆಯನ್ನಿಟ್ಟು ಸ್ವತಂತ್ರವಾದಂಥಾ ರಾಜಪದವಿಯನ್ನು ಹೊಂದಲು ತುರುಕರ ಹಾವಳಿಯಲ್ಲಿ ಆಸ್ಪದ ದೊರೆಯಲಿಲ್ಲ.

## (2) ತಾಲ್ಲೂಕುದಾರರು.

ತಾಲ್ಲೂಕ್‌ದಾರರು

ಇವರು ಅಯೋಧ್ಯಾ ಪ್ರಾಂತದಲ್ಲಿ ಹೇರಳವಾಗಿದಾರೆ. ಪುರಾತನ ಕಾಲದಿಂದಲೂ ಹೇಗೆಯೋ ಭೂಮಿಯನ್ನು ವಿಸ್ತಾರವಾಗಿ ಸಂಪಾದಿಸಿಕೊಂಡಿರತಕ್ಕವರು, ಆಯಾ ದೊರೆಗಳ ಆಳಿಕೆಗಳಲ್ಲಿ ಉಂಬಳಿಯಾಗಿಯೂ ಇನಾಮಾಗಿಯೂ ಹೆಚ್ಚಾದ ಭೂಪ್ರದೇಶವನ್ನು ಸಂಪಾದಿಸಿದವರು, ಕಾಲಾನುಕಾಲಗಳಲ್ಲಿ ದೊರೆತನ ಮಾಡುತಿದ್ದವರ ಕಿರೀ ಮಕ್ಕಳು ಮತ್ತು ಅವರ ಸಂತತಿಗೆ ಸೇರಿದವರು, ಇಂಥವರೆಲ್ಲಾ ಈ ವರ್ಗಕ್ಕೆ ಸೇರುತಾರೆ. ಇವರಲ್ಲಿ ಬಹು ಮಂದಿಯು ಜಮೀನ್ದಾರರು ತೆರುವಂತೆಯೇ ಆಯಾ ಕಾಲದ ದೊರೆಗಳಿಗೆ ಗೊತ್ತಾದ ಮೊತ್ತವನ್ನು ತೆರುತಾ ಇರುತಾರೆ. ಆದರೆ ಇವರು ಜಮೀನ್ದಾರರಷ್ಟು ಪ್ರಬಲರಲ್ಲ, ಅವರ ದರ್ಜೆಗೆ ಯಡಗೈಯ್ಯಾಗಿದಾರೆ.

(3) ಜಹಗೀರ್‌ದಾರರು.

ಆಯಾ ಸರ್ಕಾರಗಳಿಗೆ ಸೇರಿ ದೂರವಾಗಿರತಕ್ಕ ಪ್ರದೇಶಗಳಲ್ಲಿ ಅಧಿಕಾರ ಮಾಡುತಾ ದುಷ್ಟರಾದವರನ್ನು ಅಡ ಗುಮೆಟ್ಟುತಾ ರಾಜ್ಯದ ಆಡಳಿತವನ್ನು ಬಿಗಿ ಯಾಗಿ ನೋಡಿಕೊಳ್ಳುತಾ ಅಗತ್ಯಬಿದ್ದಾಗ ಸರ್ಕಾರಕ್ಕೆ ಸೇನೆಯ ಸಹಾ ಯ ಕೊಡುವುದಕೊಸ್ಕರ ನೇಮಕವಾದವರು ಜಹಗೀರ್‌ದಾರರೆನಿಸಿ ಕೊಂಡರು. ಇವರು ಸರ್ಕಾರಕ್ಕೆ ಯಾವ ವಿಧವಾದ ತೆರಿಗೆಯನ್ನೂ ತೆರಬೇಕಾಗಿರಲಿಲ್ಲ. ಕೆಲವು ಪ್ರದೇಶಗಳಲ್ಲಿ ಮೊಗಲ್ ಚಕ್ರವರ್ತಿ ಗಳು ಇಂಥಾ ಜಹಗೀರುಗಳನ್ನು ಬಂದೊಂದು ತಲೆಯ ಅನುಭವದ ಮಟ್ಟಿಗೆ ಕೊಡುತಿದ್ದರು. ಈ ಜಹಗೀರ್‌ದಾರರು ಗುಜರಾತು ಮಧ್ಯ ದೇಶ ಮೊದಲಾದ ಪ್ರದೇಶಗಳಲ್ಲಿ ಹೆಚ್ಚಾಗಿದ್ದರು.

ಜಹಗೀರ್‌ದಾರರು.

### ದೇಶಾಯಿ ಮೊದಲಾದ ಚಿಲ್ಲರೆ ಇನಾಂದಾರರು.

(4) ದೇಶಾಯಿ ಅಥವಾ ದೇಶಮುಖ.

ಹತ್ತು ಅಥವಾ ಅದಕ್ಕೆ ಮೇಲ್ಪಟ್ಟ ಸಂಖ್ಯೆ ಗ್ರಾಮಗಳಿಗೆ ಒಂದು ಪ್ರಾಂತವೆಂದು ಹೆಸರಾಗಿತ್ತು. ಇಂಥಾ ಪ್ರಾಂತಗಳು ಹಲವು ಸೇರಿಕೊಂಡಿದ್ದರೆ ಆ ಪ್ರದೇಶಕ್ಕೆ ದೇಶವೆಂದು ರೂಢಿ. ಅಂಥಾ ದೇಶಕ್ಕೆ ಮುಖಂಡನಾದ ವನು ದೇಶಾಯಿ ಅಥವಾ ದೇಶಮುಖ. ಅದಕ್ಕೆ ಮುಖ್ಯ ಗಣಿಕನಾ ದವ ದೇಶಪಾಂಡೆ, ದೇಶಕುಲಕರಣಿ. ಇವನು ಗ್ರಾಮದ ಲೆಕ್ಕಪತ್ರ ಗಳನ್ನು ಇಟ್ಟು ಬರವಣಿಗೆ ಕೆಲಸ ಮಾಡತಕ್ಕವನು. ಇವನಿಗೆ ದೇಶ ಕುಲಕರಣಿ ಎಂತಲೂ ಹೆಸರು.

ದೇಶಾಯಿ ವಗೈರೆ.

### ಸರ್ ದೇಶಮುಖ ಅಥವಾ ದೇಶಪಾಂಡೆ.

ದೇಶಕ್ಕಿಂತಲೂ ದೊಡ್ಡದಾದ ಪ್ರದೇಶಕ್ಕೆ ಮುಖಂಡನಾದವನಿಗೆ ಸರ್ ದೇಶಮುಖ ಎಂತಲೂ ಆ ಸ್ಥಳಕ್ಕೆ ಕರಣೀಕನಾದವನಿಗೆ ಸರ್ ದೇಶಪಾಂಡೆ ಎಂತಲೂ ಹೆಸರು. ದೇಶಮುಖನು ಮೈಸೂರು ಸೀಮೆ ಯಲ್ಲಿ ಪಟೇಲನೆಂತಲೂ ದೇಶ ಪಾಂಡೆಯು ಶಾನುಭೋಗನೆಂತಲೂ ಹೆಸರು ಹೊಂದಿದಾರೆ.

ಅಂಥಾ ಒಂದು ದೊಡ್ಡ ಪ್ರದೇಶಕ್ಕೆ ಸರ್‌ಸುಭ ಎಂದು ಹೆಸರು. ಅಂಥಾ ಕಡೆ ಸರ್ವಾಧಿಕಾರ ಮಾಡತಕ್ಕ ಅಧಿಕಾರಿಯೇ ಸುಭದಾರ್; ಇದು ಕೆಟ್ಟು ಸುಬೇದಾರ್ ಎಂದಾಯಿತು. ಇದಕ್ಕಿಂತಲೂ ಸ್ವಲ್ಪ ಚಿಕ್ಕ ಪ್ರದೇಶವಾಗಿದ್ದರೆ ಅದನ್ನು ಸರ್ಕಾರವೆನ್ನುತಿದ್ದರು. ಇದಕ್ಕೆ ೧೦ ರಿಂದ ೪೦ ಡಿಸ್ಟ್ರಿಕ್ಟಿನವರೆಗೂ ಸೇರಿತ್ತು. ಇಂಥಾ ಒಂದು ಪ್ರದೇಶಕ್ಕೆ ಮಹಲ್ ಅಥವಾ ಪರ್‌ಗನ ಎಂದು ಹೆಸರು. ಒಂದು ಡಿಸ್ಟ್ರಿಕ್ಟಿನಲ್ಲಿ ೫೦ ರಿಂದ ೧೦೦ ಗ್ರಾಮದವರೆಗೂ ಸೇರಿತ್ತು. ಒಂದು ಡಿಸ್ಟ್ರಿಕ್ಟಿನಲ್ಲಿ ಕಾಯಿಸ್‌ದಾರ್ ಎಂಬ ಅಧಿಕಾರಿ ಇರುತಿದ್ದನು. ಇವನು ಅಲ್ಲಿನ ಸುವರ್ಣಾದಾಯವನ್ನು ವಸೂಲ್ಮಾಡುತಿದ್ದನು. ದೇಶಾಯಿಗೂ ದೇಶಮುಖನಿಗೂ ಹಣ ವಸೂಲ್ಮಾಡುವುದಕ್ಕಾಗಿ ನಾನ್‌ಕಾರ್ ಎಂದು ಭತ್ಯವೂ ಮತ್ತು ವಸೂಲಾದ ಹಣದ ಮೇಲೆ ಪ್ರತಿ ಗ್ರಾಮಕ್ಕೂ ಒಂದೆರಡು ರೂಪಾಯಿಯೂ ಸಲ್ಲುತಿತ್ತು. ಇದಕ್ಕೆ ಲಾಣಿ (ಲಾವಣಿ) ಎಂದು ಹೆಸರು.

ದರಬಾರಿನ ಬಿಗಿ ಕಡಮೆಯಾದಾಗ ಈ ಅಧಿಕಾರಿಗಳು ವಿಶೇಷವಾಗಿ ಬಲಕಾಯಿಸಿಕೊಂಡು ಭೂಮಿಯನ್ನು ಹೆಚ್ಚಾಗಿ ಆಕ್ರಮಿಸಿ ಸರ್ಕಾರದ ಹಣವನ್ನೂ ಭಕ್ಷಿಸುತಾ ಇದ್ದರು.

ಇಂಥಾ ಅಧಿಕಾರಿಗಳು ಪ್ರಬಲರಾಗಿ ಭಾರಿಯಾದ ಭೂಪ್ರದೇಶಕ್ಕೆ ಅಧಿಪತಿಗಳಾಗುತಾ ಬಂದರು,

ಬಹಮನಿಯವರು ನೇಮಿಸಿದ ಪ್ರಮುಖರು.

ಮತ್ತು ಬಹಮನಿ ರಾಜ್ಯದ ತುರುಕ ದೊರೆಗಳೂ ಮತ್ತು ೫ ಷಾಹಿ ವಂಶದ ದೊರೆಗಳೂ ತಮ್ಮ ರಾಜ್ಯಗಳಲ್ಲಿ ಒಂದೊಂದು ಪ್ರದೇಶಕ್ಕೆ ಒಬ್ಬೊಬ್ಬ ದೊಡ್ಡ ಅಧಿಕಾರಿಯನ್ನು ನೇಮಿಸಿ ಅವನಿಗೆ ಆ ಮಂಡಲಿಯಲ್ಲಿ ಸರ್ವಾಧಿಕಾರವನ್ನೂ ಕೊಡುತಿದ್ದರು. ಇಂಥಾ ಅಧಿಕಾರಿಗಳು ಅಲ್ಲಿನ ಸುವರ್ಣಾದಾಯವನ್ನು ವಸೂಲ್ಮಾಡಿಕೊಂಡು ಭಾರಿಯಾಗಿ ಸೇನೆಯನ್ನೂ ರಾಜ್ಯವನ್ನೂ ಸಮಾಧಾನವಾಗಿಟ್ಟುಕೊಂಡು ಯುದ್ಧಪ್ರಸಕ್ತಿ ಬಂದಾಗ ದೊರೆಗೆ ಸಹಾಯವನ್ನು ಮಾಡಬೇಕೆಂದು ಗೊತ್ತಾಗಿತ್ತು. ಇಂಥಾ ಅಧಿಕಾರಿಗಳು ಒಂದೊಂದು ಸಮಯಬಂದಾಗ ವಿಶೇಷವಾಗಿ

ಪ್ರಬಲಸಿ ದೊರೆಯನ್ನು ಪ್ರತಿಭಟಿಸಿ ರಾಜ್ಯವನ್ನು ಆಕ್ರಮಿಸಿಕೊಳ್ಳು ತ್ತಲೂ ಇದ್ದರು. ಸನ್ ೧೪೮೯ ರಲ್ಲಿ ಬಹಮನಿ ರಾಜ್ಯವು ಬಿಡಿಯು ಬಿಜಾಪುರದಲ್ಲಿ ಅಡಿಲ್‌ಷಾಹಿ ಸಂತತಿಯವರೂ, ಅಹಮದ್ ನಗರದಲ್ಲಿ ನಿಸಾಂಷಾಹಿ ಸಂತತಿಯವರೂ, ಬೀದರ್ ಅಥವಾ ಬಿದರೆಯಲ್ಲಿ ಬಾರೀದ್ ಷಾಹಿ ಸಂತತಿಯವರೂ, ಗೋಲಕೊಂಡದಲ್ಲಿ ಹುಸೇನ್ ಷಾಹಿ ಸಂತ ತಿಯವರೂ, ಎಲಿಚ್‌ಪುರದಲ್ಲಿ ಇಮಾದ್‌ಷಾಹಿ ಸಂತತಿಯವರೂ ಸ್ವತಂ ತ್ರವಾಗಿ ದೌಲತ್ತು ಮಾಡುತಾ ಬೇರೇ ಬೇರೇ ಸಂಸ್ಥಾನಗಳನ್ನು ಸ್ಥಾಪಿ ಸಿಕೊಂಡರಷ್ಟೆ. ಇವರುಗಳೂ ಕೂಡ ಕೆಲವು ಅಧೀನ ರಾಜರನ್ನು ಮಾಡಿಕೊಂಡು ಅವರಿಂದ ಕಪ್ಪ ಮೊದಲಾದ್ದನ್ನು ತೆಗೆದುಕೊಳ್ಳುತಾ ಇದ್ದರು. ಆಗಲೂ ಅದಕ್ಕೆ ಮುಂಚಿನಿಂದಲೂ ಸ್ವತಂತ್ರವಾಗಿ ಇದ್ದ ಗದ್ದವಾಲ, ವನಪರ್ತಿ, ಆತ್ಮಕೂರು, ಮೊದಲಾದ ಅನೇಕ ಚಿಕ್ಕ ಸಂಸ್ಥಾನಗಳು ಈ ಷಾಹಿ ದೊರೆಗಳಿಗೆ ಅಧೀನವಾದವು. ಮೊದಲು ಇದ್ದ ಸಂಸ್ಥಾನಗಳ ಜೊತೆಗೆ ಈ ಪ್ರಕಾರ ಹಲವು ಹೊಸ ಸಂಸ್ಥಾನ ಗಳು ಹುಟ್ಟಿದವು.

ಪಶ್ಚಿಮ ಸಮುದ್ರ ತೀರದ ಹೆಗ್ಗಡಿಗಳು.

ಇದೂ ಅಲ್ಲದೆ ಪಶ್ಚಿಮ ಸಮುದ್ರ ತೀರದ ಪ್ರಾಂತದಲ್ಲಿ ಅನೇಕ ಚಿಲ್ಲರೆ ರಾಜರುಗಳಿದ್ದರು. ಮೈಸೂರು ದಕ್ಷಿಣ ದೇಶ ಮೊದಲಾದ ಪ್ರದೇಶಗಳಲ್ಲಂತೂ ಲೆಕ್ಕ ವಿಲ್ಲದಷ್ಟು ಜನ ಅಧಿಪತಿಗಳಿದ್ದರು. ಇವರಲ್ಲಿ ಅನೇಕರು ಸ್ವತಂತ್ರವಾಗಿ ರಾಜರೆಂದು ಆಳುತಾ ಆಯಾ ಕಾಲದಲ್ಲಿ ರಾಜಾಧಿರಾಜರೆನಿಸಿಕೊಂಡವರಿಗೆ ಸಾಮಂತನರಪತಿಗಳಾಗಿದ್ದರು. ವಿಜ ಯನಗರದ ಸಂಸ್ಥಾನದ ರಾಯರುಗಳು ಇವರೆಲ್ಲರನ್ನೂ ಜೈಸಿ ಚಕ್ರ ವರ್ತಿಗಳೆನ್ನಿಸಿಕೊಂಡಿದ್ದದೂ ಅಲ್ಲದೆ ಕೆಲವು ಹೊಸ ಪ್ರಾಂತಗಳನ್ನು ಕೊಟ್ಟು ಹೊಸದಾಗಿ ಕೆಲವು ಅಧೀನ ರಾಜ್ಯಗಳನ್ನು ಸ್ಥಾಪನೆ ಮಾಡಿದರು.

ಇದೇ ಪಾಳಯಗಾರರ ಸಂಸ್ಥೆ ಎನ್ನಿಸಿಕೊಂಡಿತು. ಇವರಲ್ಲಿ ಪ್ರಬಲರಾದವರು ಸ್ವತಂತ್ರರಾಗಿ ದೊರೆಗಳಂತೆ ಆಳುತಿದ್ದರು. ಇನ್ನು ಕೆಲವರು ಅಧೀನರಾಗಿದ್ದುಕೊಂಡು ತಂತಮ್ಮ ಸೀಮೆಗಳ ಸುವ ರ್ಣಾದಾಯವನ್ನು ವಸೂಲ್ಮಾಡಿಕೊಂಡು ನಿಗದಿಯಾದ ಮೊಬಲಗನ್ನು

ಖಾಯಂಗುತ್ತಿಗೆಯಂತೆ ಚಕ್ರವರ್ತಿಗಳ ಸರ್ಕ್ಕಾರಕ್ಕೆ ತೆರುತಾ ಉಳಿದ ದಂಡನಾದಿ ಇತರ ಅಧಿಕಾರಗಳನ್ನು ಆ ಸರ್ಕಾರಕ್ಕೆ ಬಿಟ್ಟು ಬಿಟ್ಟಿದ್ದರು.

4 ಕೆಲವರು ಹೆಚ್ಚಾಗಿಯೂ ಕೆಲವರು ಕಡಮೆಯಾಗಿಯೂ ದೇಶವನ್ನು ಕಟ್ಟಿಕೊಂಡು ಆಯಾ ಕಾಲಗಳಲ್ಲಿ ಪ್ರಬಲರಾಗಿ ಬಂದ ದೇಶೀಯ ಮಹಾರಾಜರನ್ನೂ ಮುಸಲ್ಮಾನ್ ದೊರೆಗಳನ್ನೂ ಅನುಸರಿಸಿ ಕೊಂಡು ಇದ್ದರು. ಇಂಥಾ ಘೂಟು ದೊರೆಗಳು ಜರುಗಿಸುತಿದ್ದ ಅಧಿ ಕಾರವು ಅಲ್ಲಲ್ಲಿ ವಿಶೇಷವಾಗಿ ಭಿನ್ನಿಸಿದ್ದಾಗ್ಯೂ ನಮ್ಮ ಭರತಖಂಡದಲ್ಲಿ ಇಂಥವರು ಹೆಚ್ಚಾಗಿದ್ದಂತೆ ತಿಳಿಯಬಂದಿದೆ. ಹೆಸರೂ ಅಧಿಕಾರವೂ ಭೇದಿಸಿರಬಹುದು. ಸಂಸ್ಥೆಯೇನೋ ಇದ್ದದು ನಿಜ. ಉತ್ತರ ದೇಶ ದಲ್ಲಿ ಗುಲಾಮಿ ದೊರೆಗಳೂ ಮೊಗಲಾಯಿ ಚಕ್ರವರ್ತಿಗಳೂ ಇವರಕಡೆ ದಂಡಿನ ಸರದರರೂ ಸಹಾ ಈ ಅಧ್ಯಕ್ಷರ ಅಧಿಕಾರವನ್ನು ಕಡಮೆ ಮಾಡಿ ಅವರನ್ನು ಆಗಾಗ್ಗೆ ಬಾಧಿಸುತಾ ಅವರಿಂದ ವರ್ಷೆ ವರ್ಷೆ ನಿಗದಿ ಯಾದ ಹಣವನ್ನು ವಸೂಲ್ಮಾಡಿಕೊಳ್ಳುತಿದ್ದರು. ಈ ಮೊಬಲಗಿನ ಜೊ ತೆಗೆ ಸಮಯಬಿದ್ದಾಗ ನಜರಾಣಿ ಎಂಬ ಹೆಸರಿನಿಂದ ಬೇಕಾದ್ದನ್ನು ದೋ ಚಿಕೊಳ್ಳುತಾ ಇದ್ದರು. ಅವರಲ್ಲಿ ಪ್ರಬಲರಾದವರಿಂದ ಸಮಯದಲ್ಲಿ ಸೇನೆಯ ಸಹಾಯವನ್ನೂ ಹೊಂದುತಾ ಇದ್ದರು. ಇಷ್ಟು ಹೊರತು ದಕ್ಷಿಣ ದೇಶದಲ್ಲಿ ಇಂಥಾ ಸಂಸ್ಥಾನೀಕರಾದ ಪಾಳಯಗಾರರು ಪ್ರಬ ಲಿಸಿ ಮಾಡಿದ ಕೆಲಸಗಳನ್ನು ಅಂಥವರು ಉತ್ತರದಲ್ಲಿಯೂ ಮಾಡು ವುದಕ್ಕೆ ಮೊಗಲಾಯರ ಮತ್ತು ಇತರ ಮುಸಲ್ಮಾನರ ಹಾವಳಿಯು ಆಸ್ಪದ ಕೊಡುತಿರಲಿಲ್ಲ. ದಕ್ಷಿಣ ದೇಶದ ಸ್ಥಿತಿ ವ್ಯತ್ಯಸ್ತವಾಗಿತ್ತು. ಇಲ್ಲಿ ದಖನಿ ತುರುಕರು ರಾಜ್ಯದ ಆಡಳತ ನಡೆಯುವುದಕ್ಕೆ ಅಲ್ಲಲ್ಲಿ ಇಂಥಾ ಸಂಸ್ಥಾನೀಕರನ್ನು ತಾವೇ ನೇಮಕ ಮಾಡಿದ್ದೂ ಅಲ್ಲದೆ ತಮಗೆ ವಿಧೇಯರಾದವರನ್ನು ಆಯಾ ಸ್ಥಳದಲ್ಲಿಯೇ ಅಧಿಕಾರ ಮಾಡಿಕೊಂಡಿರಲು ಬಿಟ್ಟಿದ್ದರು. ವಿಜಯನಗರದ ಚಕ್ರವರ್ತಿ ಗಳಂತೂ ಇಂಥಾ ಪಾಳಯಪಟ್ಟುಗಳಿಗೆ ಉತ್ತೇಜನಕೊಟ್ಟರು. ಇದ ರಿಂದ ದಕ್ಷಿಣದಲ್ಲಿ ಇವುಗಳು ಅತ್ಯಂತ ಪ್ರಾಬಲ್ಯಕ್ಕೆ ಬರಲು ಆಕರ ವಾಯಿತು.

ಮೊಗಲಾಯರಾಗಲಿ ದಕ್ಷಿಣದ ಬಹಮನಿ ತುರುಕರಾಗಲಿ ಈ ಭಿನ್ನ ಸಂಸ್ಥಾನೀಕರ ದೆಸೆಯಿಂದ ಯಾವ ಭೀತಿಯನ್ನೂ ಎದುರುನೋಡುವ ಸಂದರ್ಭವಿರಲಿಲ್ಲವಾದ ಕಾರಣ, ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಇವರನ್ನು ಉಪಯೋಗಿಸಿಕೊಳ್ಳಬೇಕೆಂದು ಬಿಟ್ಟಿದ್ದರೇ ಅಲ್ಲದೆ ಇವರನ್ನು ನಿರ್ಮೂಲ ಮಾಡಲಿಲ್ಲ. ಆದರೆ ರಾಜಕೀಯ ವ್ಯಾಪಾರದಲ್ಲಿ ಔರಂಗಜೇಬನು ನಮ್ಮ ದೇಶೀಯರ ಮೇಲೆಯೇ ಅಲ್ಲದೆ ಮುಸಲ್ಮಾನರ ಗುಂಪಿಗೆ ಸೇರಿದ ಷಾಹಿ ದೊದಲಾದ ದೊರೆಗಳ ಮೇಲೆಯೂ ತೋರಿಸಿದ ಅಂಧಕ ವ್ಯಾಪಾರದ ರಾಜತಂತ್ರವು ಮೊಗಲರ ಆಳಿಕೆಗೆ ಇದ್ದ ಅಲ್ಪ ಸ್ವಲ್ಪ ಪ್ರಜಾನುರಾಗವನ್ನೂ ಕೆಡಿಸಿ ಸಾತ್ವಿಕರು ಸಂಕಟಪಡುವುದಕ್ಕೂ, ಧೈರ್ಯಶಾಲಿಗಳು ತಿರುಗಿಬಿದ್ದು ಕೈಮಾಡುವುದಕ್ಕೂ ಕಾರಣವಾಯಿತು. ಇಂಥಾ ದೇಶೀಯ ಶೂರರ ಪಟ್ಟಿಯಲ್ಲಿ ಶಿವಾಜಿಯೇ ಮೊದಲನೆಯವನಾಗಿದಾನೆ. ಈ ಶಿವಾಜಿಯು ಆದಿಭಾಗದಲ್ಲಿ ಗರಿ ಗಟ್ಟಿಕೊಳ್ಳುವುದಕ್ಕೆ ತಕ್ಕ ಪ್ರಯತ್ನ ಮಾಡಿ ಮಹಾರಾಷ್ಟ್ರ ದೇಶದಲ್ಲಿಯೂ, ಕೊಂಕಣ ದೇಶದಲ್ಲಿಯೂ ಹಲವು ಪುರಾತನ ಪ್ರಮುಖರನ್ನೂ ಜಹಗೀರ್‌ದಾರರನ್ನೂ ನಾಶಮಾಡಿ ಅವರ ರಾಜ್ಯವನ್ನು ಆಕ್ರಮಿಸಿದನು. ಪಾಳಯಪಟ್ಟಿಗೆ ಸಮಾನವಾದ ಕೆಲವು ಸಂಸ್ಥಾನಗಳು ಇದರಿಂದ ನಾಶವಾದವು.

ಹೈದರನೆಂಬ ಬಿರುಗಾಳಿ.

ಆ ಸುಮಾರು ಕಾಲದಲ್ಲಿ ತಲೆ ಎತ್ತಿ ಪ್ರಬಲಕ್ಕೆ ಬರುತಾ ಇದ್ದ ಮೈಸೂರು ದೊರೆಗಳು ಆದಿಭಾಗದಲ್ಲಿ ಇಂಥಾ ಪಾಳಯಗಾರರಂತೆಯೇ ಸಾಧಾರಣವಾಗಿದ್ದಗ್ಯೂ, ಇವರ ಸಂತತಿಯಲ್ಲಿ ವಿಶೇಷವಾಗಿ ಶೂರರಾದವರೂ ದಳವಾಯಿ ದೇವರಾಜೈಯ್ಯಾ ನಂಜರಾಜೈಯ್ಯಾ ಮುಂತಾದವರೂ ಕೆಲವು ಪಾಳಯಪಟ್ಟುಗಳನ್ನು ಜೈಸಿ ರಾಜ್ಯವನ್ನು ವಿಸ್ತರಿಸುತಾ ಬಂದರು. ಈ ಮೈಸೂರ ಸೀಮೆಯಲ್ಲಿಯೂ ದಕ್ಷಿಣ ದೇಶದಲ್ಲಿಯೂ ಅತಿ ಪ್ರಬಲವಾಗಿದ್ದ ಪಾಳಯಪಟ್ಟುಗಳೆಂಬ ಸಂಸ್ಥೆಗೆ ಇನ್ನೊಂದು ದೊಡ್ಡ ವಿಷದಗಾಳಿ ಬೀಸಿತು. ದಳವಾಯಿ ದೇವರಾಜೈಯ್ಯಾ ನಂಜರಾಜೈಯ್ಯಾ ಇವರ ಆಶ್ರಯದಿಂದ ಮುಂದಕ್ಕೆ ಬಂದು ಹೆಚ್ಚಿನ ಪ್ರಾಬಲ್ಯವನ್ನು ಹೊಂದಿದ ಹೈದರಲ್ಲಿಖಾನನು ಈ ಪಾಳಯಪಟ್ಟುಗಳ ಮೇಲೆ ಬಿದ್ದು ಹಾವಳಿ ಮಾ

ಡುತಾ ಬಂಧನು. ಲೂಟಿಯಲ್ಲಿ ಸಿಕ್ಕಿದ ಹಣವೂ ಚಿನ್ನ ಬೆಳ್ಳಿಯೂ ಸ್ವಂತಕ್ಕಾಯಿತು. ಜೈಸಿಕೊಂಡ ಸೀಮೆ ದೇಶ ವಿಸ್ತಾರಕ್ಕಾಯಿತು.

ಮೈಸೂರದೊರೆಗಳು ಜೈಸಿದ ಪಾಳಯ ಪಟ್ಟುಗಳು.

ಮೈಸೂರ ದೊರೆಗಳೂ ಹೈದರಲ್ಲಿ ಸಹಾ ಆಗಾಗ್ಯೆ ಜೈಸಿ ಶ್ರೀರಂಗಪಟ್ಟಣಕ್ಕೆ ಸೇರಿಸಿಕೊಂಡ ಪಾಳಯಪಟ್ಟಿನ ಸೀಮೆಗಳಲ್ಲಿ ಕೆಲವು ಮುಖ್ಯವಾದವುಗಳನ್ನು ಈ ಕೆಳಗೆ ಸೂಚಿಸಿದೇನೆ :—

| ದೊರೆಯ ಹೆಸರು. | ಪಾಳಯಪಟ್ಟಿನ ಹೆಸರು. |
|---|---|
| ಬೆಟ್ಟದ ಚಾಮರಾಜ ಒಡೆಯರು | ಶ್ರೀರಂಗಪಟ್ಟಣ |
| ಚಾಮರಾಜ ಒಡೆಯರು | ಚನ್ನಪಟ್ಟಣ |
| ಕಂಠೀರವ ನರಸರಾಜ ಒಡೆಯರು | ಅರಕಲಗೂಡು, ಬೆಟ್ಟದಪುರ, ಹೊಸೂರು. |
| ದೊಡ್ಡದೇವರಾಜ ಒಡೆಯರು | ಚಿಕ್ಕನಾಯಕನಹಳ್ಳಿ, ಹುಲಿಯೂರುದುರ್ಗ, ಕುಣಿಗಲು, ಸಕ್ಕರೇಪಟ್ಟಣ. |
| ಚಿಕ್ಕದೇವರಾಜ ಒಡೆಯರು | ಮದ್ದಗಿರಿ, ಮಿಡಿಗೇಸಿ. |
| ಚಿಕ್ಕಕೃಷ್ಣರಾಜ ಒಡೆಯರು | ಕೈಲಂಚ, ದೇವನಹಳ್ಳಿ, ಕಣಮೆ ಕೆಳಗಿನ ರಾಜ್ಯ. |

ಹೈದರಲ್ಲಿ—ದೇವನಹಳ್ಳಿ, ಆನೆಕಲ್ಲು ಹರಪನಹಳ್ಳಿ, ಚಿತ್ರದುರ್ಗ, ಬಿದನೂರು, ಇಕ್ಕೇರಿ, ಧಾರಾಪುರ, ಬೆಳಗುತ್ತಿ, ಮಂಜರಾಬಾದು, ಕಡಪ, ಹಾಗಲವಾಡಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಕೊಚ್ಚಿ, ಪಾಲಘಾಟು, ಗುತ್ತಿ, ಸಿದ್ಧೌಟ, ಹಾವನೂರು, ಗುಡೇಕೋಟೆ, ಜರಿಮಲೆ, ತರೀಕೆರೆ, ರಾಯದುರ್ಗ, ನಿಡಗಲ್ಲು, ರತ್ನಗಿರಿ, ಸೀರ್ಯ, ಆನೇಗೊಂದಿ, ಸವಣೂರು, ಮುಂತಾದವು.

ಟಿಪ್ಪುಸುಲ್ತಾನ—ಕೊಡಗು, ಗುಮ್ಮನಾಯಕನ ಪಾಳ್ಯ, ಅನಂತ ಪುರ, ಕೌಲೇದುರ್ಗ.

ಇವೇ ಮೊದಲಾದ ಪಾಳಯಪಟ್ಟುಗಳು ಜೈಸಲ್ಪಟ್ಟವು. ಅಲ್ಲಿನ ರಾಜರು ಅಥವಾ ಪಾಳಯಗಾರರನ್ನು ಕೈಸೆರೆ ಹಿಡಿದು ಶ್ರೀರಂಗ ಪಟ್ಟಣಕ್ಕೆ ತಂದು ಹಾಕಿಕೊಂಡರು.

ದಖನ್ನಿನ ಸ್ಥಿತಿ.

ಹೈದರಾಬಾದ್ ಸರ್ಕಾರದವರು ಆ ಪ್ರಾಂತದಲ್ಲಿದ್ದ ಕೆಲವು ಮುಖಂಡರನ್ನು ಮುರಿದರು. ಬಹಮನಿ ರಾಜ್ಯವು ಪ್ರಬಲದಶೆಯಲ್ಲಿದ್ದಾಗ್ಯೆ, ಬಂದೊಂದು ಪ್ರದೇಶವನ್ನು ಬಬ್ಬೊಬ್ಬ ಸರದಾರನಿಗೆ ಕೊಟ್ಟು ಅಂಥವರಿಂದ ಖಾಯಂ ಗುತ್ತಾ ಎಂಬದಾಗಿ ನಿಗದಿಯಾಗಿ ವಸೂಲ್ಮಾಡಿಕೊಳ್ಳುತಿದ್ದರು, ಮತ್ತು ಯುದ್ಧಪ್ರಸಕ್ತಿ ಬಿದ್ದ ಕಾಲದಲ್ಲಿ ಅಂಥಾ ಮುಖಂಡರಿಂದ ದಂಡಿನ ಸಹಾಯವನ್ನು ಹೊಂದುತಿದ್ದರು. ಇಂಥಾ ಮುಖಂಡರಿಗೆ ಫೌಜುದಾರರು ಎಂತಲೂ ಹೆಸರಿತ್ತು. ಇವರಲ್ಲಿ ಕೆಲವರು ತಿರುಗಿಬಿದ್ದು ಸ್ವತಂತ್ರರಾಗುತಲೂ, ಇನ್ನು ಕೆಲವರು ಬಹಮನಿ ನವಾಬರ ವಿಚಾರದಲ್ಲಿ ವಿಧೇಯವಾಗಿ ನಡೆದುಕೊಳ್ಳುತಲೂ ಇದ್ದರು. ಆ ರಾಜ್ಯ, ಅದರಿಂದ ಹುಟ್ಟಿದ ಷಾಹಿ ಸಂಸ್ಥಾನಗಳೂ ನಾಶವಾದವು. ಮೊಗಲಾಯರ ಕಡೆಯಿಂದ ದಖ್ಖ್ಖ ಸುಬೇದಾರಿಗೆ ನಿಜಾಮುಲ್ ಮುಲ್ಕನು ನೇಮಕವಾದನು. ಅವನ ಸಂತತಿಯವರು ಅಲ್ಲಿ ಆಳುತಾ ಇರುವಾಗ ತುಂಟರಾದ ಕೆಲವು ಫೌಜುದಾರರ ಸೀಮೆಯನ್ನೂ ಕಿತ್ತುಕೊಂಡು, ಸಭ್ಯರಾದವರನ್ನು ಅವರವರ ಸೀಮೆಯಲ್ಲಿ ಅಧಿಕಾರಮಾಡಿಕೊಂಡಿರಲೆಂದು ಬಿಟ್ಟಿದ್ದರು. ಈ ಪ್ರಕಾರ ಕೆಲವು ಹಂಗಾಮಿ ಪಾಳಯಪಟ್ಟಗಳಾಗಿದ್ದ ಫೌಜುದಾರಿ ಸೀಮೆಗಳು ಹೈದರಾಬಾದಿಗೆ ಸೇರಿಹೋದವು. ಅವುಗಳಲ್ಲಿ ಕೆಲವು ಚಿಕ್ಕ ಸಂಸ್ಥಾನಗಳು ಇನ್ನೂ ಉಳಿದುಕೊಂಡಿವೆ. ಅವುಗಳೇ ವನಪರ್ತಿ, ಗದ್ದವಾಲ, ಆತ್ಮಕೂರು ಮೊದಲಾದ ಕೆಲವು ಚಿಕ್ಕದೇಶೀಯ ರಾಜರ ಸಂಸ್ಥಾನಗಳು. ಇವುಗಳ ಜೊತೆಗೆ ಹೈದರಾಬಾದು ಸರ್ಕಾರದವರು ಕೆಲವು ಮುಸಲ್ಮಾನ ಉಂದಾಗಳಿಗೆ ಕೊಟ್ಟಿರುವ ಚಿಕ್ಕ ಸಂಸ್ಥಾನಗಳೂ ಜಹಗೀರುಗಳೂ ಸಹಾ ಇವೆ. ಈ ಚಿಕ್ಕ ಸಂಸ್ಥಾನೀಕರು ನಿಜಾಮನ

ಸರ್ಕಾರಕ್ಕೆ ಅಧೀನರಾಗಿ ಆಳಿಕೊಂಡಿದಾರೆ. ಇವರಲ್ಲಿ ಕೆಲವರು ಸ್ವತಂತ್ರವಾಗಿ ನಾಣ್ಯವನ್ನು ಸಹಾ ಹಾಕಿಸಿ ಕೋರ್ಟು ಮೊದಲಾದ ನ್ಯಾಯಸ್ಥಾನಗಳನ್ನೂ ಏರ್ಪಡಿಸಿದಾರೆ. ಆದ್ದರಿಂದ ಪಾಳಯಗಾರರ ಸಂಸ್ಥೆಯು ಇನ್ನೂ ಹತಶೇಷವಾಗಿ ಅಲ್ಲಿ ಉಳಿದಿದ್ದಂತೆಯೇ ಆಯಿತು.

ಬ್ರಿಟಿಷರ ಸೀಮೆಯಲ್ಲಿ ಪಾಳಯಪಟ್ಟುಗಳು ಉಳಿದದ್ದು.

ಬ್ರಿಟಿಷರ ಸೀಮೆಯಲ್ಲಿ ತುಂಟತನಮಾಡಿ ಸರ್ಕಾರಕ್ಕೆ ವಿರೋಧ ಕಕ್ಷಿಯವರಾಗಿ ನಿಂತವರ ರಾಜ್ಯವನ್ನು ಮಾತ್ರ ಇಂಡಿಯಾ ರಾಜ್ಯಕ್ಕೆ ಸೇರಿಸಿಕೊಂಡು ಬಿಟ್ಟರು. ಆದರೆ ಆ ಸರ್ಕಾರಕ್ಕೆ ವಿಧೇಯರಾಗಿದ್ದವರು ಅನೇಕರನ್ನು ಉಳಿಸಿದಾರೆ. ಬಂಗಾಳಾ ಮೊದಲಾದ ಉತ್ತರ ದೇಶವಲ್ಲಿ ಜಮೀನ್ದಾರರು ತಾಲ್ಲೋಕುದಾರರು ಜಹಗೀರ್‌ದಾರರು ಇತರ ಚಿಕ್ಕ ರಾಜವಾಡೆಯವರೂ ಇಂಗ್ಲೀಷರಿಗೆ ವಶವರ್ತಿಗಳಾಗಿ ಇನ್ನೂ ಇದಾರೆ. ಬೊಂಬಾಯಿ ಕೋರಿನ ಮರಾಟಾ ಜಹಗೀರ್‌ದಾರರು ಕಠಿಯಾವಾಡ ಜಹಗೀರ್‌ದಾರರು ಮೊದಲಾದವರೆಲ್ಲಾ ಇದೇ ವರ್ಗಕ್ಕೆ ಸೇರತಕ್ಕವರು. ಮದರಾಸಿನಲ್ಲಿ ತೆಲಗು ದೇಶದ ದೊರೆಗಳು ಚಿನ್ನ ಕಿಮಿಡಿ, ಪೆದ್ದಕಿಮಿಡಿ, ವಿಜಯನಗರ, ಇವೇ ಮೊದಲಾದವು, ಮದರಾಸಿಗೆ ದಕ್ಷಿಣ ಪ್ರಾಂತದಲ್ಲಿ ಶಿವಗಂಗೆ, ರಾಮನಾಡು, ಪುದಿಕೋಟೆ, ವೆಂಕಟಗಿರಿ ಇನ್ನೂ ಕೆಲವು ಮಿಟ್ಟಾದಾರಿಗಳು ಇವುಗಳೆಲ್ಲಾ ಉಳಿದೇ ಇವೆ.

ಮೈಸೂರು ಸೀಮೆಯಲ್ಲಿ ನಿರ್ಮೂಲವಾದದ್ದು.

ಇದೆಲ್ಲವನ್ನೂ ನೋಡಿದರೆ ಮೈಸೂರು ಸೀಮೆಯಲ್ಲಿ ಮಾತ್ರ ಹೈದರಲ್ಲಿ ಮೊದಲಾದವರ ಹಾವಳಿಯಿಂದ ಪಾಳಯಗಾರ ಸಂಸ್ಥೆಯು ಪೂರ್ತಿಯಾಗಿ ನಾಶವನ್ನು ಹೊಂದಿತೇ ಅಲ್ಲದೆ, ಹಿಂದುಸ್ಥಾನದ ಉಳಿದ ಎಲ್ಲಾ ಕಡೆಯಲ್ಲಿಯೂ ಇಂಥಾ ಚಿಕ್ಕ ಸಂಸ್ಥಾನಗಳು ಒಂದು ರೂಪದಲ್ಲಿ ಅಲ್ಲದಿದ್ದರೆ ಇನ್ನೊಂದು ರೂಪದಲ್ಲಿ ಕಾಲೋಚಿತವಾಗಿ ಉಳಿದೇ ಉಳಿದುಕೊಂಡವು ಎಂದು ಹೇಳಬೇಕು.

# ಪಾಳಯಗಾರರು.

---

## ೨ನೇ ಉಪನ್ಯಾಸ.

ಯೂರೋಪಿನ ಫ್ಯೂಡಲ್ ಸಂಸ್ಥೆ.

ಪಾಳಯಪಟ್ಟುಗಳು ಹುಟ್ಟುವುದಕ್ಕೆ ಮೂಲವನ್ನು ಕುರಿತೂ, ಈ ಸಂಸ್ಥೆಗೆ ಸೇರಿದ ಪ್ರಮುಖರು ನಮ್ಮ ಭರತ ಖಂಡದಲ್ಲೆಲ್ಲಾ ಸ್ವಲ್ಪ ಹೆಚ್ಚುಕಡಮೆಯಾಗಿ ಹರಡಿಕೊಂಡು ಒಂದೊಂದು ಪ್ರದೇಶದಲ್ಲಿ ಒಂದೊಂದು ಹೆಸರಿನಿಂದ ಅದ್ಯಾಪಿ ಇರುವ ಅಂಶವನ್ನು ಕುರಿತೂ, ಹಿಂದಿನ ಉಪನ್ಯಾಸದಲ್ಲಿ ನನಗೆ ತಿಳಿದ ಮಟ್ಟಿಗೆ ಅರಿಕೆಮಾಡಿದೇನಷ್ಟೆ. ವಿಚಾರಮಾಡಿಕೊಂಡುಹೋದರೆ, ಯೂರೋಪ್ ಖಂಡದಲ್ಲಿಯೂ ಇಂಥಾ ಪಾಳಯಗಾರರ ತೆರದ ಸಂಸ್ಥೆ ಇದ್ದಂತೆ ಚನ್ನಾಗಿ ಹೇಳಬಹುದು. ಇದನ್ನು ಫ್ಯೂಡಲ್ ಸಂಸ್ಥೆ ಎಂದು ಕರೆಯುತ್ತಾರೆ. ಯೂರೊಪ್ ಖಂಡದಲ್ಲಿ ವಿಶೇಷ ಉತ್ತರಭಾಗದ ಕೆಲವು ಪ್ರದೇಶ ಹೊರತು ಉಳಿದ ದೇಶಗಳೆಲ್ಲಾ ರೋಮ್ ಚಕ್ರವರ್ತಿಗಳ ಆಳಿಕೆಗೆ ಸೇರಿದ್ದವು. ಇದು ಸುಮಾರು ಕ್ರಿ॥ ಶ॥ ೮ನೇ ಶತಮಾನದಲ್ಲಿ ಪೂರ್ವಚಕ್ರಾಧಿಪತ್ಯ, ಪಶ್ಚಿಮ ಚಕ್ರಾಧಿಪತ್ಯವೆಂದು ಎರಡು ಭಾಗವಾಯಿತು. ಪೂರ್ವಚಕ್ರಾಧಿಪತ್ಯಕ್ಕೆ ಕುಸ್ತುಂತನಿಯ (Constantinople) ಎಂಬ ಪಟ್ಟಣವು ರಾಜಧಾನಿಯಾಯಿತು. ಪಶ್ಚಿಮ ಚಕ್ರಾಧಿಪತ್ಯಕ್ಕೆ ಈಗಿನ ಜರ್ಮನಿಯು ಮೂಲಸ್ಥಾನವಾಯಿತು. ಫ್ಯೂಡಲ್ ಸಂಸ್ಥೆಯು ಕ್ರಿ॥ ಶ॥ ಐದನೇ ಶತಮಾನದಲ್ಲಿ ಫ್ರಾನ್ಸ್ ದೇಶದೊಳು ಪ್ರಚಾರಕ್ಕೆ ಬಂತು ಎಂದು ಹೇಳುತ್ತಾರೆ. ಕೆಲವರು ರೊಮಾಯ ಜನರ ಧರ್ಮಶಾಸ್ತ್ರದಲ್ಲಿ ಇದಕ್ಕೆ ಮೂಲವಿತ್ತು, ತರುವಾಯ ಕಾಲಕ್ರಮೇಣ ಇದು ವೃದ್ಧಿಯಾಯಿತು ಎನ್ನುತ್ತಾರೆ. ಆದರೆ ಈಚೆಗೆ ಕೆಲವು ಶೋಧಕರು—ಈ ಪದ್ಧತಿಯೂ, ಈಗಿನ ಇಂಗ್ಲೀಷರು, ಜರ್ಮನಿ ಜನರು ಮುಂತಾದವರಲ್ಲಿದ್ದ ಪದ್ಧತಿಯೂ ಫ್ರೆಂಚ್ ಜನರ ಮೂಲಪುರುಷರಲ್ಲಿ ವೃದ್ಧಿಹೊಂದಿ,

ರೋಮಾಯಿ ಜನರ ಧರ್ಮಶಾಸ್ತ್ರವನ್ನು ಆಧಾರ ಮಾಡಿಕೊಂಡಿತು, ಎಂಬದಾಗಿ ಖಂಡಿತವಾದ ಅಭಿಪ್ರಾಯಪಟ್ಟಿದಾರೆ. ಎಂತಾದರೂ ಈ ಸಂಸ್ಥೆಯು ಹುಟ್ಟಿರಲಿ. ಇದೇನೋ ಯೂರೊಪ್ ಖಂಡದಲ್ಲಿ ಕ್ರಿ॥ ಶ॥ ೫ ರಿಂದ ೮ ನೇ ಶತಮಾನದ ವರೆಗೆ ಪ್ರಚಾರಕ್ಕೆ ಬಂತು.

ಯೂರೊಪ್ ಖಂಡದೊಳು ಫ್ರಾನ್ಸು, ಇಗ್ಲೆಂಡು, ಜರ್ಮನಿ ಮುಂತಾದ ದೇಶಗಳಲ್ಲಿ ಈ ಫ್ಯೂಡಲ್ ಸಂಸ್ಥೆಯು ಹುಟ್ಟಿದ್ದ ವಿಚಾರ ವಾಗಿ ಮೇಲಿನ ಅಂಶಕ್ಕೆ ಸ್ವಲ್ಪ ಭಿನ್ನಿಸಿದ ಅಭಿಪ್ರಾಯವನ್ನು ಕೆಲವರು ಹೇಳುತಾರೆ, ಹೇಗೆಂದರೆ:—

ರೋಮನ್ ಚಕ್ರಾಧಿಪತ್ಯದ ಅಂತ್ಯಭಾಗದಲ್ಲಿಯೂ ಆ ತರುವಾಯ ಮಧ್ಯಕಾಲ (Medieval) ದಲ್ಲಿಯೂ, ಪ್ರಜೆಗಳಿಗೆ ಯಾವ ಭೀತಿಯೂ ಇಲ್ಲದಹಾಗೆ ರಕ್ಷಣೆ ಮಾಡತಕ್ಕ ಪ್ರಭುತ್ವ ಅಗತ್ಯವಾಗಿತ್ತು. ಪರ ರಾಜರ ಕಾಟಕಾಯ, ಸ್ವರಾಜ್ಯದಲ್ಲಿ ರೈತರು ದಂಗೆ ಮೊದಲಾದ್ದನ್ನು ಮಾಡುವುದು, ಒಳದೇಶದಲ್ಲಿ ನೆರೆಹೊರೆಯವರೂ ಇತರ ಜನರೂ ಕೊಡು ವ ಹಿಂಸೆ, ಸರ್ಕಾರದ ಉದ್ಯೋಗಸ್ಥರು ಲಂಚ ಮೊದಲಾದ್ದನ್ನು ತೆಗೆದು ಕೊಳ್ಳುವುದು, ಧರ್ಮಶಾಸ್ತ್ರದ ವಿಧಾಯಕವೆಂದು ಹೇಳಿ ಕಾನೂನಿಗೆ ವಿರೋಧವಾಗಿ ಜನರಿಂದ ವರಿ ವಸೂಲ್ಮಾಡತಕ್ಕದ್ದು, ಇಂಥಾ ತೊಂದರೆ ಗಳನ್ನು ತಪ್ಪಿಸಿಕೊಳ್ಳಲು ಪ್ರಜೆಗಳು ಮಾರ್ಗವನ್ನು ಹುಡುಕಬೇಕಾದ್ದು ಅಗತ್ಯವಾಗಿತ್ತು. ರೋಂ ಚಕ್ರವರ್ತಿಗಳ ಅಧಿಕಾರ ಖಿಲವಾಗುತಾ ಜರ್ಮನಿ ದೇಶದಲ್ಲಿ ಸರಿಯಾದ ರಾಜ್ಯಭಾರ ಇನ್ನೂ ಸ್ಥಾಪನೆಯಾ ಗದೆ ಇರುವಂಥಾ ಗಲಭೆಯಾದ ಕಾಲದಲ್ಲಿ ಸಂಣ ಸಂಣ ರೈತರಿಗೆ ಯಾವ ಕಡೆ ನೋಡಿದಾಗ್ಯೂ ಹಿಂಸೆ ಹೆಚ್ಚಾಗಿತ್ತು. ಇಂಥಾ ಹಿಂಸೆ ಇಲ್ಲದ ಹಾಗೆ ಕಾಪಾಡತಕ್ಕ ಸಾಮರ್ಥ್ಯವುಳ್ಳ ಸರ್ಕಾರ ಸ್ಥಾಪನೆಯಾಗಿರಲಿಲ್ಲ. ಆದಕಾರಣ ಸರಿಯಾಗಿ ಸಂರಕ್ಷಣೆ ಮಾಡತಕ್ಕ ಪ್ರಭುವನ್ನು ರೈತರು ಹುಡುಕಿಕೊಳ್ಳಬೇಕಾಗಿ ಬಂತು. ಈ ಸಂರಕ್ಷಣೆಯು ಎರಡು ಬಗೆ ಯಾಗಿತ್ತು. ೧ ನೇದು ರೈತರಿಗೆ ಯಾವ ಹಿಂಸೆಯೂ ಇಲ್ಲದಹಾಗೆ ಅವ ರನ್ನು ಮಾತ್ರ ಕಾಪಾಡುವುದು, ೨ ನೇದು ಅವರ ಸ್ವತ್ತನ್ನು ಕಾಪಾ ಡುವುದು, ಈ ಎರಡು ಭಾಗ ಮುಖ್ಯವಾಗಿತ್ತು.

ಇಂಥಾ ಸಂದರ್ಭವು ಫ್ರಾನ್ಸ್ ದೇಶವನ್ನು ರೋಮಾಯರು ಬಂದು ಜೈಸಿ ಆಕ್ರಮಿಸಿಕೊಳ್ಳುವುದಕ್ಕೆ ಮುಂಚಿನಿಂದಲೂ ಇದ್ದಹಾಗೆ ತಿಳಿಯಬರುವುದು. ಭೂಮಿ ಇಲ್ಲದ ಬಡವನಾದ ಬಗರುಜಿರಾಯಿತು ಕುಳವು ಹೆಗ್ಗಡಿಯಾಗಿ ಬಲವಾಗಿರತಕ್ಕ ಪುರುಷನ ಸಹಾಯವನ್ನು ಪಡೆಯಬೇಕಾಗಿತ್ತು. ಈ ಸಂದರ್ಭದಲ್ಲಿ ಅನ್ಯೋನ್ಯ ಸಹಾಯವು ಮುಖ್ಯವಾದ ಸಮಯಬಂಧ. ಸಣ್ಣ ರೈತರಿಗೆ ಇತರರ ಭಾಧೆ ಇಲ್ಲದಹಾಗೆ ಕಾಪಾಡುವುದು ಹೆಗ್ಗಡಿಯ ಕೆಲಸ. ಹೆಗ್ಗಡಿ ಹೇಳಿದಹಾಗೆ ಅವನ ಪ್ರಯೋಜನವನ್ನು ನೋಡಿಕೊಳ್ಳುವುದ ರೈತನ ಕೆಲಸ. ಈ ಸಂಬಂಧಕ್ಕೆ ಕಮೆಂಡೇಷನ್ (Commendation) ಎನ್ನುತಾರೆ. ಈ ಸಂಬಂಧವನ್ನು ಉಭಯತ್ರರಿಗೂ ನಡೆದು ಬಂದು ಕರಾರಿನಂತೆ ಜರ್ಮನಿಯವರು ಭಾವಿಸುತಾ ಬಂದರು. ಇದಕ್ಕೂ ತಪ್ಪಿ ನಡೆದವರು ಬಂದು ವಿಧವಾದ ಶಿಕ್ಷೆಯನ್ನನುಭವಿಸಬೇಕೆಂದು ಗೊತ್ತಾಯಿತು. ಎರಡನೇ ವಿಧವಾದ ಸಂರಕ್ಷಣೆ ವಿಚಾರ ಭೂಸಂಬಂಧದಾಗಿತ್ತು. ಇದು ಒಂದು ಬಗೆಯಾದ ಹಿಡುವಳಿ. ಇದರ ಪ್ರಕಾರ ಭೂಮಿಯನ್ನು ರೈತನಿಗೆ ಇನಾಮಾಗಿ ಕೊಡುವುದು ಅಥವಾ ಕೊಟ್ಟಸಾಲಕ್ಕೆ ಆಧಾರವಾಗಿ ಭೋಗ್ಯವಾಗಿ ಕೊಡುವುದು ಇದರಲ್ಲಿ ಭೂಮಿಯ ಯಜಮಾನನಿಗೆ ಅನುಭವದಾರನು ಏನೂ ಕೊಡಬೇಕಾದ್ದಿಲ್ಲ. ಅನುಭವದಾರನಿಗೆ ಭೂಮಿಗೆ ಹಕ್ಕಿಲ್ಲ. ಉಳಿದ ಭಾಗದಲ್ಲಿ ಉಭಯಕಕ್ಷಿಯವರ ಅಭಿಪ್ರಾಯವೂ ಬಂದೇ. ಫ್ಯೂಡಲ್ ಸಂಸ್ಥೆಯ ಮೂಲದ ವಿಷಯದಲ್ಲಿ ಇದು ಬಂದು ಮತ.

ಇಂಥಾ ಫ್ಯೂಡಲ್ ಸಂಸ್ಥೆಯನ್ನು ಎರಡು ಭಾಗ ಮಾಡಿ ವಿಚಾರ ಮಾಡಬೇಕಾಗಿದೆ. (೧) ಭೂಮಿಯ ಹಿಡುವಳಿ ವಿಧಾನ, (೨) ರಾಜ್ಯಭಾರಕ್ರಮ.

## ೧. ಭೂಮಿಯ ಹಿಡುವಳಿ ವಿಧಾನ.

ಭೂಮಿಯ ಹಿಡುವಳಿ.

ಯೂರೋಪ್ ಖಂಡದ ಫ್ಯೂಡಲ್ ಸಂಸ್ಥೆಯ ಹಿಡುವಳಿ ಸಿಸ್ಟು ಹೇಗೆ ಹುಟ್ಟಿತೋ ನಮ್ಮ ಭರತಖಂಡದಲ್ಲಿಯೂ ಹಾಗೆಯೇ ಹುಟ್ಟಿದಂತೆ ಇದೆ. ಫ್ರಾನ್ಸ್ ದೇಶದೊಳು ೫ನೇಶತಮಾನದಿಂದ ಎಂಟನೇ ಶತಮಾನದವರೆಗೆ ಆಳಿದ

ದೊರೆಗಳ ಕಾಲದಲ್ಲಿ ಆಯಾ ದೊರೆಗಳು ತಮ್ಮ ಬಂಧುವರ್ಗದ ಜನರಿಗೂ, ಕೆಲವು ಮುಖಂಡರಿಗೂ ದೊಡ್ಡದಾದ ಭೂಪ್ರದೇಶಗಳನ್ನು ಮಾನ್ಯವಾಗಿ ಕೊಡುತಾ ಬಂದರು. ಹಾಗೆ ತೆಗೆದುಕೊಂಡವರು ದೊರೆಯ ವಿಷೆಯದಲ್ಲಿ ಭಯಭಕ್ತಿಯಿಂದ ನಡೆದುಕೊಳ್ಳುತ್ತಿರಬೇಕೆಂಬುದು ವಿಧಿಯಾಗಿತ್ತು. ಮೊದಲು ಮೊದಲು ಬಂದೊಂದು ತಲೆಯ ವರೆಗೆ ಮಾತ್ರ ಕೊಡುತಾ ಇದ್ದ ಈ ಇನಾಮು ದಿನಕ್ರಮೇಣ ಸಂತತಿ ಪರಂಪರೆಯಾಗಿ ಅನುಭವಿಸುವ ಹಾಗೆ ಆಗುತಾ ಬಂತು. ದೊರೆಗೆ ತನ್ನ ಪ್ರೀತಿಪಾತ್ರರ ಮೇಲೆ ಅಭಿಮಾನ ಹೆಚ್ಚಿದಹಾಗೆಲ್ಲಾ ಇನಾಂದಾರರು ವಂಶಪಾರಂಪರ್ಯವಾಗಿ ಅಂಥಾ ಇನಾಮನ್ನು ಅನುಭವಿಸುವ ಹಕ್ಕು ದೊರೆಯುತಾ ಬಂತು. ಇದೂ ಅಲ್ಲದೆ ದೊರೆಯ ದರ್ಪ ಕಡಮೆಯಾಗುತಾ ಬಂದಹಾಗೆ ಈ ಇನಾಂದಾರರು ಅರಸನನ್ನು ಧಿಕ್ಕರಿಸಿ, ಸ್ವತಂತ್ರರಾಗುತಾ, ವಂಶಪಾರಂಪರ್ಯವಾದ ಹಕ್ಕನ್ನು ಸಂಪಾದಿಸಿಕೊಳ್ಳುತಾ ಬಂದರು.

ಬೆನಿಫಿಸಿಯರಿ, ಖಾಯಂಗುತ್ತಾ.

ಇದೂ ಅಲ್ಲದೆ ಹೀಗೆ ಸ್ವತಂತ್ರರಾದ ಇನಾಂದಾರರೂ ಕೂಡ ಕೆಲವರು ಶತ್ರುಗಳ ಬಾಧೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ದಿನಕ್ರಮೇಣ ಒಬ್ಬ ಪ್ರಬಲವಾದ ದೊರೆಯನ್ನೋ ಚರ್ಚು ಎಂಬ ಗುಡಿ ಅಧಿಕಾರಗಳನ್ನೋ* ಅನುಸರಿಸಿಕೊಂಡು ಅವರಿಗೆ ಅಧೀನರಾಗಿ ಕಂದಾಯ ಕೊಡುತಾ ಮತ್ತು ಇತರರ ಸೇವೆಯನ್ನು ಸಮಯ ಬಿದ್ದಾಗ ಅವರಿಗೋಸ್ಕರ ಮಾಡುತಾ ಇದ್ದರು. ಈ ಬಗೆ ಭೂಸಾಗುವಳಿ ಸಿಸ್ತಿಗೆ "ಬೆನಿಫಿಸಿಯರಿ" ಎಂದು ಹೆಸರು. ಇದರ ಅರ್ಥಕ್ಕೆ ಸಮೀಪವಾದ ಶಬ್ದವನ್ನು ನಾವು ಹುಡುಕಿ ನೋಡಿದರೆ "ಖಾಯಂಗುತ್ತಾ" ಎಂಬ ಶಬ್ದವನ್ನು ಭಾಷಾಂತರವಾಗಿ ಇಟ್ಟುಕೊಳ್ಳಬಹುದು. ಈ ಖಾಯಂಗುತ್ತಾ ಏರ್ಪಾಡಿನಿಂದ ಜಮೀನ್ದಾರನಿಗೂ, ರೈತನಿಗೂ ಇರುವ ಸಂಬಂಧವೇ ಯೂರೋಪಿನಲ್ಲಿಯೂ ಇದ್ದಹಾಗಾಯಿತು.

* ಈಗ್ಗೆ ಐನೂರು ಆರುನೂರು ವರ್ಷಗಳ ಹಿಂದೆ ಕ್ರಿ|| ಶಕೆ ಆದಿಭಾಗದಿಂದಲೂ ಕ್ರಿಸ್ತ ಗುಡಿಯ ಪಾದ್ರಿಗಳು ದೊರೆಗಳಂತೆ ವಿಶೇಷ ಪ್ರಬಲರಾಗಿದ್ದರು.

ಸಾಗುವಳಿ ವಿಷಯ.

ಭೂಸಾಗುವಳಿ, ಅದರ ಆದಾಯ, ಇದನ್ನು ಕುರಿತು ಯೋಚಿಸ ಲಾಗಿ, ಭೂಮಿಯನ್ನು ಗೇಮೆಮಾಡುವುದು, ರಾಜ ಪಾಲನ್ನು ಕೊಟ್ಟು ಕುಳಪಾಲನ್ನು ಅನುಭವಿಸಿ ಕೊಳ್ಳುವುದು, ಎಷ್ಟೋ ಅಷ್ಟೆ. ಇದಕ್ಕಿಂತಲೂ ಹೆಚ್ಚಾದ ಸಂಬಂಧವು ಸ್ವಾಮಿಗೂ, ಕುಳಕ್ಕೂ ಇಲ್ಲವೇ ಇಲ್ಲವೆಂಬುವುದು ಕೆಲವರ ಮತವಾ ಗಿತ್ತು. ಇಷ್ಟು ಹೊರತು ರೈತನು ಯಜಮಾನನಿಗೆ ಮತ್ತೆ ಯಾವ ಭಾಗ ದಲ್ಲಿಯೂ ಅಧೀನನಲ್ಲವೆಂದು ಕೆಲವು ಪರವಾದಿಗಳು ವಾದಿಸಲು ಮಾರ್ಗ ವಿತ್ತು. ಈಗಲೂ ನಮ್ಮದೇಶದಲ್ಲಿ ಕೂಡ ಇನಾಂದಾರರಿಗೂ, ರೈತರಿಗೂ ಈ ವಿಧವಾದ ಚರ್ಚೆಯೂ, ತೀಯಾಟವೂ ಇದ್ದೇ ಇರುವುದು. ಇನಾಂ ಗ್ರಾಮಗಳಲ್ಲಿ ರೈತರಿಗೆ ಖಾಯಂ ಕಂದಾಯಕ್ಕೆ ಭೂಮಿಯನ್ನು ಕೊಡು ತ್ತಾರೆ. ಅಂಥಾ ರೈತರು ಸರ್ವಮಾನ್ಯ ಅಥವಾ ಜೋಡಿದಾರರಿಗೋ ಸ್ಕರ ಇತರ ಚಿಲ್ಲರೆ ಕೆಲಸವನ್ನು ಮಾಡಿಕೊಡಬೇಕೆಂತಲೂ, ಎಲ್ಲಾ ಭಾಗದಲ್ಲಿಯೂ ಸಮಯ ಬಂದಾಗ ಆ ರೈತನು ಸರ್ವಮಾನ್ಯದಾರನ ಆಳನಂತೆ ಭಾವಿಸಿಕೊಂಡಿರಬೇಕೆಂತಲೂ, ಕೆಲವು ಗ್ರಾಮಗಳಲ್ಲಿ ಆಚ ರಣೆಯುಂಟು. ಆದರೆ ಕೆಲವು ರೈತರು ಸರ್ವಮಾನ್ಯದಾರನ ಮೇಲೆ ಕೈಮಾಡುತ್ತಾ, "ಭೂಮಿ ಕೊಟ್ಟದ್ದಕ್ಕೆ ಕಂದಾಯ ತೆಗೆದುಕೊಳ್ಳು ತ್ತೀರಿ, ಉಳಿದ ಚಾಕರಿ ಮಾಡುವುದಕ್ಕೆ ನಾವು ಬದ್ಧರಲ್ಲ" ಎನ್ನುತಾ ಇದಾರಷ್ಟೆ. ಇದೇವಿಧವಾದ ರೈತರು ಪೂರ್ವಕಾಲದಲ್ಲಿಯೂ ಇದ್ದರು. ದೇಶಾಂತರಗಳಲ್ಲಿಯೂ ಇದ್ದರು. ಈ ಕಾರಣದಿಂದ ರೈತರೆಲ್ಲಾ ಆದ್ಯಂತವಾಗಿ ಇನಾಂದಾರರ ವಶವೇ ಆಗಿರಬೇಕೆಂದು ಯೂರೋ ಪ್ ಖಂಡದಲ್ಲಿ ವ್ಯವಸ್ಥೆ ಮಾಡಿಕೊಂಡು, ಅದಕ್ಕಾಗಿ ಭೂಮಿ ಯಲ್ಲಿ ನಿರುಪಾಧಿಕವಾಗಿ ಸ್ವಾಮ್ಯವುಳ್ಳ ಇನಾಂದಾರರಾದ ಯಜಮಾನ ರುಗಳು ಇನ್ನೊಂದು ಏರ್ಪಾಡನ್ನು ಮಾಡಿಕೊಂಡರು. ಪ್ರತಿ ರೈತನೂ ಇನಾಂದಾರ ಅಥವಾ ಸ್ವಾಮಿಗೆ ಆದ್ಯಂತ ಭೃತ್ಯ

ಭೃತ್ಯನು ಪ್ರಮಾಣ ಮಾಡು ವುದು.

ಎಂದು ತೋರಿಸಲು, ಅಂಥಾ ರೈತನು ಬೋ ಳುತಲೆಯಲ್ಲಿ ಸೊಂಟಕ್ಕೆ ಏನೂ ಕಟ್ಟಿಕೊ ಳ್ಳದೆ, ಕತ್ತಿಯನ್ನು ಕಟ್ಟಿಕೊಳ್ಳದೆ ವೀರಮಂಡಿ ಹೂಡಿ ಕೂತು, ಸ್ವಾಮಿಯ ಕೈಯನ್ನು ಹಿಡಿದು ಸ್ವಾಮಿಗೆ ತಾನು ಆದ್ಯಂತ

ಭೃತ್ಯನೆಂದು ಪ್ರಮಾಣಮಾಡಿಕೊಡಬೇಕು, ಎಂದು ವಾಗ್ದಾನದ ಪದ್ಧತಿಯನ್ನು ಏರ್ಪಾಡು ಮಾಡಿದರು. ಈ ಏರ್ಪಾಡಿಗೆ "ಕಮೆಂಡೇಷನ್" ಎಂದು ಹೆಸರು. ಇದಕ್ಕೆ "ವಶವರ್ತಿ" ಎಂದು ಅರ್ಥಮಾಡಬಹುದು. ಹೀಗೆಂದರೆ ಆ ಆದ್ಯಂತ ಭೃತ್ಯನು ಸ್ವಾಮಿಯ ವಶವಾದನೆಂದು ಅರ್ಥ ಮಾಡಬಹುದು.

"ಕಮೆಂಡೇಷನ್" ಏರ್ಪಾಡು.

ಈ ಪದ್ಧತಿಯು ದಿನಕ್ರಮೇಣ ವ್ಯತ್ಯಾಸ ಹೊಂದಿತು. ಈ ವಿಧವಾದ ಸ್ವಾಮಿಭೃತ್ಯರ ಸಂಬಂಧದಲ್ಲಿ ಭೂಸಂಬಂಧ ಹೋಯಿತು. ಬರೀ ಸ್ವಾಮಿಭೃತ್ಯ ಸಂಬಂಧ ಮಾತ್ರ ಉಳಿಯಿತು. ಆದರೆ ಭೃತ್ಯನು ಬೇರೆ ಭೂಮಿಯನ್ನು ಸಾಗುವಳಿ ಮಾಡಿಸುವ ವಿಚಾರದಲ್ಲಿ ನಿರ್ಬಂಧವೇನೂ ಇರಲಿಲ್ಲ. ಕೆಲವು ಸಂದರ್ಭದಲ್ಲಿ ಯುದ್ಧಪ್ರಸಕ್ತಿ ಬಿದ್ದಾಗ, ಸ್ವಾಮಿಗೆ ಉಪಜಮೀನ್‌ದಾರನು ಸೇನೆ ಸೇರಿಸಿಕೊಂಡು ಸೇವೆ ಮಾಡುವುದೂ ಕೂಡ ಉಂಟು. ಇದಕ್ಕೆ ಪ್ರತಿಯಾಗಿ ಸ್ವಾಮಿಯು ಭೃತ್ಯನನ್ನು ಎಲ್ಲಾ ಭಾಗದಲ್ಲಿಯೂ ಕಾಪಾಡಬೇಕಾದ್ದು ಒಂದು ವಿಧಿಯಾಗಿತ್ತು.

## (೨) ರಾಜ್ಯ ಭಾರಕ್ರಮ.

ಇದುವರೆಗೆ ಭೂಸಂಬಂಧ ಸ್ವಾಮಿ ಭೃತ್ಯಸಂಬಂಧ ಇವುಗಳನ್ನು ಮಾತ್ರ ಹೇಳಿದಂತಾಯಿತು. ಹೀಗೆ ಭೂಮಿಯನ್ನು ವಿಸ್ತಾರವಾಗಿ ದೊರೆಯಿಂದ ಇನಾಂ ಪಡೆದುಕೊಂಡವರೆಲ್ಲಾ ಬಲಕಾಯಿಸಿಕೊಂಡು, ದೊರೆಯ ಅಧಿಕಾರವನ್ನು ಹೆಚ್ಚು ಕಡಮೆಯಾಗಿ ನಿರಾಕರಿಸುತ್ತಾ, ಆದಾಯವೂ, ಖರ್ಚೂ ಹೋಗುತ್ತಾ ಉಳಿಯುವ ಶೇಖರವಾದ ದ್ರವ್ಯವೂ ಹೆಚ್ಚಿದಹಾಗೆಲ್ಲಾ ಸ್ವತಂತ್ರಾಧಿಕಾರ ಮಾಡುವವರ ಡಂಭವನ್ನು ವಿಶೇಷವಾಗಿ ವಹಿಸಿ, ರಾಜಠೀವಿಯನ್ನು ಹೊಂದಿ ಬೇರೇ ಸೇನೆ,

ರಾಜಪದವಿ ಹೊಂದಿದ್ದು.

ಬೇರೇ ನಾಣ್ಯ, ಬೇರೆ ಕಾನೂನುಗಳು, ಸ್ವತಂತ್ರವಾಗಿ ಯುದ್ಧವನ್ನು ಮಾಡುವುದು, ಈ ಆಯಕಟ್ಟುಗಳನ್ನೆಲ್ಲಾ ಇಟ್ಟುಕೊಳ್ಳುತ್ತಾ ಬಂದರು. ಸಮಯ ತಪ್ಪಿದರೆ ಧೊರೆಯನ್ನು ಎದುರಿಸುತ್ತಲೂ ಇದ್ದರು. ಇಂಥಾ ಚಿಕ್ಕ ಸಂಸ್ಥಾನದವರು ಡ್ಯೂಕು, ಮಾರ್ಕ್ವಿಸ್, ಕೌಂಟು ಎಂದು ಬಿರುದಿನ ಹೆಸರನ್ನು

ಹೊಂದಿ ದರ್ಬಾರು ಮಾಡುತ್ತಿದ್ದರು. ದೇಶವನ್ನೂ, ಅಧಿಕಾರವನ್ನೂ ದೊರೆಯಿಂದ ಹೊಂದವುದು, ಪೂರ್ವದಿಂದ ತಮಗಿದ್ದ ಅಧಿಕಾರವನ್ನು ದೊರೆಯ ಪೋಷ್ಯವರ್ಗಕ್ಕೆ ಸೇರಿ ಕಾಪಾಡಿಕೊಳ್ಳುವುದು, ಈ ಎರಡು ವಿಧದಲ್ಲಿಯೂ ಈ ಫ್ಯೂಡಲ್ ಪ್ರಮುಖರು ವೃದ್ಧಿಯಾದರು. ಇಂಥಾ ಚಿಕ್ಕ ಪ್ರಮುಖರು ದೊರೆಗೆ ಅಧೀನ ರಾಜರಂತಾದರು. ಈ ಪ್ರತಿ ಅಧೀನರಾಜನಾದ ಜಮೀನ್ದಾರನೂ ಒಂದೊಂದು ನ್ಯಾಯಸ್ಥಾನವನ್ನು ಇಟ್ಟುಕೊಂಡಿದ್ದನು. ಇಂಥವರು ನಮ್ಮ ಸೀಮೆಯ ಪಾಳಯಗಾರರನ್ನು ಚನ್ನಾಗಿ ಹೋಲುತ್ತಾರೆ.

ಉಪಜಮೀನ್ದಾರರು.

ದೊರೆಯ ಅಧೀನದಲ್ಲಿ ಜಮೀನ್ದಾರ ಹೇಗೆ ಇದ್ದನೋ ಹಾಗೆಯೇ ಜಮೀನ್ದಾರನ ಅಧೀನದಲ್ಲಿ ಉಪಜಮೀನ್ದಾರನೂ, ಉಪಜಮೀನ್ದಾರನ ಕೈಕೆಳಗೆ ರೈತನೂ ಇರುತಿದ್ದರು. ಜಮೀನ್ದಾರನು ಸ್ವತಂತ್ರವಾಗಿ ಒಂದು ನ್ಯಾಯಸ್ಥಾನವನ್ನು ಕಲ್ಪಿಸಿಕೊಂಡಿದ್ದನು. ಉಪಜಮೀನ್ದಾರರಿಗೆ ಪರಸ್ಪರ ವಿವಾದ ಹುಟ್ಟಿದರೂ, ಉಪಜಮೀನ್ದಾರರಿಗೂ ರೈತರಿಗೂ ಪರಸ್ಪರವಾಗಿ ಯಾವ ವಿವಾದ ಹುಟ್ಟಿದರೂ ಈ ನ್ಯಾಯಸ್ಥಾನದಲ್ಲಿ ವ್ಯವಸ್ಥೆಯಾಗಬೇಕಾಗಿತ್ತು. ಈ ನ್ಯಾಯಸ್ಥಾನದಲ್ಲಿಯಾದ ತೀರ್ಮಾನದ ಮೇಲೆ ದೊರೆಯ ಸರ್ಕಾರಿ ನ್ಯಾಯಸ್ಥಾನಕ್ಕೆ ಅಪ್ಪೀಲು ಹೋಗುತಿತ್ತು. ವ್ಯಾಜ್ಯವನ್ನು ವ್ಯವಸ್ಥೆ ಮಾಡುವುದರಲ್ಲಿ ವಿಲಕ್ಷಣವಾದ ಒರಟು ಪದ್ಧತಿಯನ್ನು ಅನುಸರಿಸುತಿದ್ದರು. ಫಿರ್ಯಾದಿ ಅಪರಾಧಿಗಳಿಬ್ಬರೂ ದೇವರ ಮೇಲೆ ಭಾರ ಹಾಕಿ, ಕತ್ತಿ ಹಿಡಿದು ಒಂಟಿ ವೀರರಾಗಿ ಇಬ್ಬರೇ ಹೊಡದಾಡುತಿದ್ದರು. ಈ ಮೂಲಕ ವ್ಯಾಜ್ಯ ಫೈಸಲಾಗಬೇಕಾಗಿತ್ತು. ಹಣ ಸಾಲ ಕೊಡುವುದು ತೆಗೆದುಕೊಳ್ಳುವುದು, ಈ ವಿಷಯದಲ್ಲಿ ವಿವಾದ ಹುಟ್ಟಿದರೆ, ಸೋತವನು ತನ್ನ ಹಕ್ಕನ್ನೂ, ವಾದವನ್ನೂ ಬಿಟ್ಟು ದಂಡವನ್ನು ಸಹಾ ತೆರಬೇಕಾಗಿತ್ತು. ಬದಲಿ ಇಟ್ಟು ವ್ಯಾಜ್ಯವನ್ನು ನಡೆಸಿದರೆ, ಆ ಬದಲಿಯವನು ಸೋತುಹೋದಲ್ಲಿ, ಅವನು ತನ್ನ ಕೈಯನ್ನು ಕತ್ತರಿಸಿಕೊಳ್ಳಬೇಕಾಗಿತ್ತು. ಅಪರಾಧ ಜರುಗಿದ ಮೊಕದ್ದಮೆಗಳಲ್ಲಿ ಅಪರಾಧಿಯು ತಪ್ಪನ್ನು ಋಜುವಾತು ಮಾಡಿಕೊಡೆಂದು

ಫಿರ್ಯಾದಿಯನ್ನು ಅಥವಾ ನ್ಯಾಯಾಧಿಪತಿಗಳನ್ನು ಧೈರ್ಯವಾಗಿ ಪಂಥ ಕಟ್ಟಿಕೊಂಡು ಕೇಳಬಹುದು. ರುಜುವಾತು ಯಾವುದೂ ಇಲ್ಲದೆ ಎದುರು ಕಕ್ಷಿಯು ಸೋತುಹೋದರೆ ಅಪರಾಧಿಗೆ ಆಗಬೇಕಾಗಿದ್ದ ಶಿಕ್ಷೆಯನ್ನು ಫಿರ್ಯಾದಿಗೂ, ನ್ಯಾಯಾಧಿಪತಿಗಳಿಗೂ ವಿಧಿಸುತಿದ್ದರು.

ಜಮೀನ್ದಾರನ ಅಧಿಕಾರ.

ಉಪಜಮೀನ್ದಾರರುಗಳಿಂದ ವರಿಗಳನ್ನು ವಸೂಲ್ಮಾಡುವುದು, ಸಾಧಾರಣವಾದ ನಿಬಂಧನೆಗಳನ್ನು ಏರ್ಪಡಿಸುವುದು, ತಂತಮ್ಮೊಳಗೆ ವಿವಾದವಿದ್ದರೆ ಅದನ್ನು ತಂತಮ್ಮೊಳಗೆ ಯುದ್ಧಮಾಡಿ ವ್ಯವಸ್ಥೆಮಾಡಿಕೊಳ್ಳುವುದು, ಒಂದೊಂದು ಪ್ರಾಂತದಲ್ಲಿ ಹೊಸ ನಾಣ್ಯಗಳನ್ನು ಟೆಂಕಸಾಲೆ ಇಟ್ಟು ಹಾಕಿಸುವುದು, ಇದೆಲ್ಲಾ ಜಮೀನ್ದಾರರ ಹಕ್ಕಿಗೆ ಸೇರಿತ್ತು.

ಉಪಜಮೀನ್ದಾರನ ಹಕ್ಕು

ಉಪಜಮೀನ್ದಾರರಿಗೇ ಅಲ್ಲದೆ ಇತರ ಹಿಡುವಳಿದಾರರಿಗೂ ಭೂಮಿಯನ್ನು ಸಾಗುವಳಿಗೆ ಕೊಡುತಿದ್ದರು. ಇಂಥಾ ಹಿಡುವಳಿದಾರರು ಕಂದಾಯವನ್ನು ಮಾತ್ರ ಕೊಡುವುದಕ್ಕೆ ಬದ್ಧರೇ ಹೊರತು, ಇನ್ನು ಯಾವ ಅಡ್ಡವಿಡ್ಡೂರಗಳನ್ನೂ ಅವರು ತೆರಬೇಕಾದ ನಿಮಿತ್ತವಿರಲಿಲ್ಲ. ಇವರು ಮಾನ್ಯದ ಒಕ್ಕಲಾಗಿದ್ದರು.

ಸ್ವಾಮಿ ಭೃತ್ಯರ ಹಕ್ಕು.

ಪಾಳಯಗಾರರ ವಿಚಾರವನ್ನು ಹೇಳುವುದರಲ್ಲಿ ಹೋಲಿಕೆಗಾಗಿ ಫ್ಯೂಡಲ್ ಸಂಸ್ಥೆಯನ್ನು ಇಷ್ಟರಮಟ್ಟಿಗೆ ವಿವರಿಸಿದ್ದೇ ಸಾಕಾಗಿದೆ. ಮುಂದೆ ಅದರ ವಿವರವನ್ನೆಲ್ಲಾ ಅರಿಕೆಮಾಡತಕ್ಕದ್ದು ಅನಾವಶ್ಯವಾಗಿ ತೋರುವುದು. ಆದರೆ ಭೂಸಂಬಂಧದಲ್ಲಿ ಒಂದೆರಡು ಬೇರೆ ಸಂಗತಿಗಳನ್ನು ಅರಿಕೆ ಮಾಡಿ ಅಲ್ಲಿಗೆ ಬಿಟ್ಟುಬಿಡುತೇನೆ. ಮಾನ್ಯದ ಹಿಡುವಳಿದಾರರ ತರುವಾಯ "ವಿಲೆ್ಣ" ಎಂಬ ಒಂದು ವರ್ಗದವರಿದ್ದರು. ಇವರಿಗೂ, ಭೂಮಿಗೂ ಗಂಟಾಗಿತ್ತು. ಇವರು ತಂತಮ್ಮ ಹೊಲಗಳನ್ನು ಸಾಗುವಳಿ ಮಾಡಿಕೊಂಡು ಫಸಲನ್ನು ಅನುಭವಿಸುತ್ತಾ, ಜಮೀನ್ದಾರನ ಸೇವಾವೃತ್ತಿಯಲ್ಲಿರುತಿದ್ದರು. ಭೂಮಿಯನ್ನು ಸಾಗುವಳಿ ಮಾಡದೆ ಬಿಟ್ಟುಬಿಡುವುದಕ್ಕೆ ಅವರಿಗೆ ಹಕ್ಕಿಲ್ಲ, ಭೂಮಿಯನ್ನು ಅವರ ಕೈ ತಪ್ಪಿಸುವುದಕ್ಕೆ

ಜಮೀನ್ದಾರನಿಗೆ ಹಕ್ಕಿಲ್ಲ. ವಿಲೇಗಳ ದರ್ಜೆಗಿಂತಲೂ ಕೀಳ್‍ಪಟ್ಟವರು ಹುಟ್ಟುಜೀತಗಾರರಾಗಿದ್ದರು. ಇವರು ಜಮೀನ್ದಾರನ ಸೇವೆ ವಿಶಿಷ್ಟವನ್ನೂ ಮಾಡಬೇಕಾಗಿತ್ತು. ಸ್ವತಂತ್ರವಾಗಿ ಆಸ್ತಿಯನ್ನು ಸಂಪಾದಿಸುವುದಕ್ಕೆ ವಿಲೇ ಎಂಬ ಬಡಜನರಿಗೆ ಹಕ್ಕಿಲ್ಲ. ಜಮೀನ್ದಾರ ಯಾವ ಹಿಂಸೆಯನ್ನು ಮಾಡಿದಾಗ್ಯೂ, ಇವರು ಸಹಿಸಿಕೊಂಡಿರಬೇಕೇ ಹೊರತು, ಇವರ ದೂರನ್ನು ಕೇಳುವುದಕ್ಕೆ ಯಾವ ಅಧಿಕಾರಸ್ಥಾನವೂ ಇರಲಿಲ್ಲ. ಗುಲಾಮರು ಎಂಬ ಮುಸಲ್ಮಾನರ ಸಂಸ್ಥೆಯನ್ನೂ ಸ್ಲೇವ್ಸ್ ಎಂಬ ಪಾಶ್ಚಾತ್ಯರ ಸಂಸ್ಥೆಯನ್ನೂ ಇದು ಹೋಲುವುದು. ಈ ಫ್ಯೂಡಲ್ ಸಂಸ್ಥೆಯನ್ನು ಕುರಿತು ಹೇಳತಕ್ಕ ಬೇರೆ ವಿಷಯಗಳು ಇನ್ನೂ ಇದ್ದಾಗ್ಯೂ, ಪ್ರಕೃತ ಸಂದರ್ಭದಲ್ಲಿ ಇಷ್ಟು ಹೇಳ ತಮುಗಳಿಗೆಲ್ಲಾ ತೊಂದರೆ ಕೊಟ್ಟು ಅಸಹ್ಯ ಹಿಡಿಸಿದ್ದೇ ಸಾಕಾಗಿದೆ.

ಪಾಳಯಗಾರ, ಅಧೀನರಾಜ.

ನಮ್ಮ ಭರತಖಂಡದಲ್ಲಿ ಎಲ್ಲಾ ಕಡೆಯಲ್ಲಿಯೂ ಪೂರ್ವದಿಂದಲೂ ಇದ್ದ ಜಮೀನ್ದಾರ್, ತಾಲ್ಲೂಕುದಾರ್, ಜಹಗೀರ್‍ದಾರ್, ಮಿಟ್ಟಾದಾರ್, ಮೊದಲಾದ ಸಂಸ್ಥೆಗಳನ್ನು ಫ್ಯೂಡಲ್ ಸಂಸ್ಥೆಯು ಹೋಲುವುದು. ಇವುಗಳೇ ಪಾಳಯಗಾರ ಸಂಸ್ಥೆಗೆ ಮೂಲವಾದವು. ಆದರೆ ಸ್ವತಂತ್ರನಾದ ಒಬ್ಬ ದೊರೆಗೆ ಇರುವ ಅಧಿಕಾರವೆಲ್ಲಾ ಪಾಳಯಗಾರನಿಗೆ ಅವನ ಸೀಮೆಯಲ್ಲಿರುತ್ತಿತ್ತು. ಪಾಳಯಗಾರನು ಒಬ್ಬ ಚಿಕ್ಕ ಅಧೀನರಾಜನಾಗಿಯೇ ಇರುತ್ತಿದ್ದನು. ಈ ಭಾಗದಲ್ಲಿ ಜಮೀನ್ದಾರರು, ತಾಲ್ಲೂಕುದಾರರು, ಮೊದಲಾದ ಮೇಲೆ ಹೇಳಿದ ಅಧಿಪತಿಗಳಿಗಿಂತಲೂ ಪಾಳಯಗಾರ ಹೆಚ್ಚಾದ ದರ್ಜೆಯನ್ನೂ ಅಟ್ಟಹಾಸವನ್ನೂ ಸಹಾ ಉಳ್ಳವನು.

ಒಬ್ಬ ಪುರುಷ ಯಾವ ಕಾರ್ಯ ಮಾಡಿದರೂ, ಅದನ್ನು ಪೂರೈಸುವ ಯೋಚನೆಯನ್ನು ಮಾಡಬೇಕು. ಆದ್ದರಿಂದ ಮೊದಲು ತಮುಗೆ ಮುಕ್ಕಾಲುಪಾಲು ಬೇಜಾರನ್ನು ಹುಟ್ಟಿಸಿ, ಅದನ್ನು ಅರ್ಧಾಂತಕವಾಗಿ ಬಿಟ್ಟುಬಿಡುವುದು ನನಗೆ ಧರ್ಮವಲ್ಲ. ಬೇಜಾರು ಮಾಡುವುದನ್ನು ಪೂರೈಸಿಬಿಡುತೇನೆ. ಪ್ರಪಂಚದೊಳಗೆಲ್ಲಾ ಭಾರಿ ಜಮೀನ್ದಾರರು ವಿಶೇಷವಾಗಿದ್ದರೆಂದು ಮೇಳೆ ಅರಿಕೆಮಾಡಿದಂತಾಯಿತು. ಆದರೆ

ಯೂರೋಪ್ ಖಂಡದಲ್ಲಿದ್ದ ಫ್ಯೂಡಲ್ ಸಂಸ್ಥೆಗೂ, ಭರತಖಂಡದ ಜಮೀನ್ದಾರಿ ಸಿಸ್ಟಿಗೂ ಇರುವ ಹೋಲಿಕೆಯನ್ನೂ, ಭೇದವನ್ನೂ, ಹೆದ್ದಟ್ಟಾಗಿ ಈ ಕೆಳಗೆ ತೋರಿಸಿದೇನೆ.

## ಯೂರೋಪಿನ ಫ್ಯೂಡಲ್ ಸಂಸ್ಥೆ.

(1) ಧೊರೆಯಿಂದ ರಾಜಬಂಧುಗಳಿಗೂ ಇತರ ಮುಖಂಡರಿಗೂ ಗ್ರಾಮ ಭೂಮಾನ್ಯವಾಗಿ ದೊರೆಯಿತು.

(2) ಜಮೀನ್ದಾರರು ಯುದ್ಧಪ್ರಸಕ್ತಿ ಬಂದಾಗ ದೊರೆಗೆ ಸೇನೆಯನ್ನು ಕಳುಹಿಸಿ ತಾವೂ ಕದನಕ್ಕೆ ಹೋಗುತಿದ್ದರು.

(3) ಜಮೀನ್ದಾರರು ದೊರೆಗೆ ಆಗಾಗ್ಗೆ ನಿಗದಿಯಾದ ಮೊಬಲಗನ್ನು ಕೊಡುತಿದ್ದರು.

(4) ಜಮೀನ್ದಾರರು ವ್ಯಾಸಲ್ ಅಥವಾ ಉಪಜಮೀನ್ದಾರರಿಗೆ ಭೂಮಿಯನ್ನು ಕೊಟ್ಟು ಕೆಲವರಿಂದ ಗೊತ್ತಾದ ಹಣವನ್ನು ವಸೂಲ್ಮಾಡುತಿದ್ದರು. ಈ ಒಳ ಜಮೀನ್ದರರು ಧಣಿಯ ವಿಷಯದಲ್ಲಿ ಭಕ್ತಿಯಿಂದಲೂ, ನಂಬಿಕೆಯಿಂದಲೂ ನಡೆದುಕೊಳ್ಳಬೇಕಾಗಿತ್ತು.

(5) ಸಾಗುವಳಿ ಮಾಡುವ ಖಾಯಂ ಕುಳಗಳೂ ಗುಲಾಮರೂ ಸಹಾ ಇದ್ದರು. ಗುಲಾಮರಿಗೆ ಯಾವಾಗಲೂ ಅಧೀನವೃತ್ತಿಯೇ, ವಿಮೋಚನೆಯೇ ಇಲ್ಲ.

(6) ಕಾಲಾನುಕಾಲದಲ್ಲಿ ಜಮೀನ್ದಾರರು ದೊರೆಯನ್ನು ಎದುರಿಸಿ ಸ್ವತಂತ್ರವಾಗಿ ರಾಜ್ಯಸ್ಥಾಪನೆ ಮಾಡಿಕೊಳ್ಳುತಿದ್ದರು.

(7) ಪೂರ್ವದಿಂದ ಹಕ್ಕುಳ್ಳ ಜಮೀನ್ದಾರರಾದಾಗ್ಯೂ, ಕೆಲವರು ತಾವಾಗಿ ದೊರೆಯ ಪೋಷ್ಯವರ್ಗಕ್ಕೆ ಸೇರಿಕೊಂಡು ಅವನಿಗೆ ಅಧೀನರಾಗುತಿದ್ದರು.

## ಭರತಖಂಡದ ಜಮೀನ್ದಾರರ ಸಂಸ್ಥೆ.

(1) ದೊರೆಯಿಂದ ರಾಜಬಂಧುಗಳಿಗೂ, ಇತರ ಮುಖಂಡರಿಗೂ ಗ್ರಾಮ ಭೂಮಿ ಮಾನ್ಯವಾಗಿ ದೊರೆಯಿತು. ಕೆಲವು ಜಮೀನ್ದಾರರು

ಮುಂತಾದವರು ಅನಾದಿಯಾಗಿ ಬಂದರು, ಕೆಲವರು ಸ್ವಂತವಾಗಿ ರೊಕ್ಕ ಸಂಪಾದನೆ ಮಾಡಿಕೊಂಡು ಸೀಮೆಯನ್ನು ಕಟ್ಟಿದರು.

(2) ಯುದ್ಧಕಾಲದಲ್ಲಿ ದೊರೆಯ ಪಕ್ಷವಾಗಿ ಸೇನೆಯನ್ನು ತೆಗೆದುಕೊಂಡು ಹೋಗಿ ಸಹಾಯ ಮಾಡುತಿದ್ದರು.

(3) ಪ್ರತಿ ವರ್ಷವೂ ನಿಗದಿಯಾದ ಹಣವನ್ನು ಖಾಯಂಗುತ್ತಿಗೆಯಾಗಿ ದೊರೆಗೆ ಕೊಡುತಿದ್ದರು.

(4) ಒಳ ಜಮೀನ್ದಾರರು ಅಥವಾ ವ್ಯಾಸಲ್‌ಗಳು ಎಂಬ ಜನ ಯಾರೂ ಇರಲಿಲ್ಲ.

(5) ಖದೀಂ ಹಿಡುವಳಿದಾರರು, ಅರೆಗೋರು ಹಿಡುವಳಿದಾರರು ಎಂದು ಖಾಯಂ ರೈತರು ಉಂಟು. ವಾರಕ್ಕೆ ಅಥವಾ ಗುತ್ತಿಗೆಗೆ ಸಾಗುವಳಿ ಮಾಡುವ ರೈತರೂ ಉಂಟು. ಜೀತಗಾರರೆಂಬ ಚಾಕರರೂ ಉಂಟು. ಸ್ವಾಮಿಯಿಂದ ಹಣ ಸಾಲಾ ತೆಗೆದುಕೊಂಡು ಅದು ತೀರುವವರೆಗೆ ಸ್ವಾಮಿಯ ಮನೆಯಲ್ಲಿ ದುಡಿಯುತ್ತಾ, ಅವನಿಂದ ಅನ್ನ ಬಟ್ಟೆ ತೆಗೆದುಕೊಂಡು ಜೀತಗಾರರು ಜೀವಿಸುತ್ತಾ, ದಿನಕ್ರಮೇಣ ಸಾಲವನ್ನು ತೀರಿಸಿಕೊಂಡು ಸ್ವಾತಂತ್ರ್ಯವನ್ನು ಹೊಂದಬಹುದು ಎಂದು ನೆಪಮಾತ್ರಕ್ಕೆ ಸಾಹುಕಾರರು ಹೇಳುತಿದ್ದರು. ಕಾರ್ಯತಃ ಆ ಬಡವರಿಗೆ ವಿಮೋಚನೆಯೇ ಇಲ್ಲ. ಜೀತಗಾರರು ಸ್ವಾಮಿಯ ಮನೆಯಲ್ಲಿ ಎಷ್ಟು ಗೆಯಿದರೂ, ಸಾಲಗಾರನಮನೆಗೆ ಸೌದೆ ಹೊತ್ತರೆ ಮೇಲಿನ ಬಡ್ಡಿಗೆ ಉತ್ತಾರವೆನ್ನುವ ಗುಲಾಮಗಿರಿಯು ಮೈಸೂರು ರಾಜ್ಯದ ಪಶ್ಚಿಮ ಪ್ರಾಂತದಲ್ಲಿ ಇನ್ನೂ ನಿರ್ಮೂಲವಾಗಿಲ್ಲವೆಂದು ತಿಳಿಯಬರುತ್ತಿದೆ.

ಕಾಲಾನುಕಾಲದಲ್ಲಿ ದೊರೆಯ ಅಧಿಕಾರ ದುರ್ಬಲವಾದಾಗ ಈ ಭಾರಿ ಜಮೀನ್ದಾರರು ಸ್ವತಂತ್ರರಾಗಿ ಆಳುತಿದ್ದರು. ಇವರೇ ಪಾಳಯಗಾರರೆಂದೂ ಅಧೀನರಾಜರು ಎಂದೂ ಹೆಸರನ್ನು ಪಡೆದರು.

ಸ್ವತಂತ್ರವಾಗಿ ರಾಜ್ಯವನ್ನು ಸಂಪಾದಿಸಿಕೊಂಡವರಾದಾಗ್ಯೂ, ಕೆಲವು ಪಾಳಯಗಾರರು ದೊರೆಯಿಂದ ಜೈಸಲ್ಪಟ್ಟೋ ಅಥವಾ ತಾವಾಗಿಯೇಯೋ ದೊರೆಯ ಸಾಮಂತನರಪತಿ ವರ್ಗಕ್ಕೆ ಸೇರಿಕೊಂಡು ಅವನಿಗೆ ಕಪ್ಪವನ್ನು ಕೊಡುತಿದ್ದರು.

ಹೆದ್ದಟ್ಟಾದ ಸಂಗತಿಗಳನ್ನು ಮಾತ್ರ ಇಲ್ಲಿ ತೋರಿಸಿದೆ. ಇನ್ನೂ ಚಿಕ್ಕವಿಷಯಗಳು ಎಷ್ಟೋ ಇವೆ.

ಶಿವಾಜಿ, ಮೈಸೂರು ದೊರೆಗಳು, ಹೈದರಲ್ಲಿ, ಟಿಪ್ಪೂ ಸುಲ್ತಾನ್ ಮೊದಲಾದವರು ಪಾಳೆಯಪಟ್ಟುಗಳನ್ನು ಗೆದ್ದು ನಾಶಮಾಡಿದರೆಂದು ಹಿಂದೆ ಹೇಳಿದ ಉಪನ್ಯಾಸದಲ್ಲಿ ಸೂಚಿಸಿದೆ. ಇವುಗಳಲ್ಲದೆ ಇಂಗ್ಲೀಷ್ ಸರ್ಕಾರದವರು ಇನ್ನೂ ಕೆಲವು ಸಂಸ್ಥಾನಗಳನ್ನೂ ಉಳಿಸಿ, ಅವುಗಳೊಡನೆ ಬೇರೆ ಕರಾರುಗಳನ್ನು ಮಾಡಿಕೊಂಡು, ಅವುಗಳಿಂದ ಪೇಷ್‌ಕಷ್ ಎಂಬ ಪೊಗದಿಯನ್ನು ತೆಗೆದುಕೊಳ್ಳುತಿದಾರೆ. ಇಂಥಾ ಸಂಸ್ಥಾನಗಳಲ್ಲಿ ರೈತರಿಂದ ಕಂದಾಯ ಮೊದಲಾದವುಗಳನ್ನು ವಸೂಲ್ಮಾಡಿಕೊಳ್ಳುವುದಕ್ಕೂ ಮತ್ತು ಇತರ ಚಿಲ್ಲರೇ ವಿಚಾರಗಳಲ್ಲಿ ಆಯಾ ಸ್ಥಳಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕೂ ಸಂಸ್ಥಾನೀಕರು ಬದ್ಧರು. ಆದರೆ ಇವರಿಗೆ ಸಿವಿಲ್ ಬಾಬುಗಳಲ್ಲಿ ಮೊಕದ್ದಮೆಗಳನ್ನು ಹಿಡಿದು ಫೈಸಲ್ ಕೊಡುವುದಕ್ಕೂ, ಕ್ರಿಮಿನಲ್ ಬಾಬುಗಳಲ್ಲಿ ಅಪರಾಧ ಮಾಡಿದವರನ್ನು ಈಗಿನ ಕಾನೂನು ಪ್ರಕಾರ ಶಿಕ್ಷಿಸುವುದಕ್ಕೂ ಅಧಿಕಾರವಿಲ್ಲ. ಈ ಅಧಿಕಾರಗಳನ್ನು ಆಯಾ ಸಂಸ್ಥಾನಗಳಲ್ಲಿ ಪಕ್ಕದ ಜಿಲ್ಲಾ ಕಲೆಕ್ಟರುಗಳೂ, ಮ್ಯಾಜಿಸ್ಟ್ರೇಟುಗಳೂ, ಡಿಸ್ಟ್ರಿಕ್ಟ್ ಜಡ್ಜಿಗಳೂ ಚಲಾಯಿಸುತ್ತಾರೆ. ಪುದಿಕೋಟೇ ದೊರೆ ಮಾತ್ರ ಈ ಭಾಗದಲ್ಲಿ ಸ್ವತಂತ್ರಾಧಿಕಾರವನ್ನು ಚಲಾಯಿಸುತ್ತಾನೆ. ದಕ್ಷಿಣದಲ್ಲಿ ಪುದಿಕೋಟೆ, ವೆಂಕಟಗಿರಿ, ಶಿವಗಂಗಾ, ರಾಮನಾಡು ಮುಂತಾದ ಕೆಲವು ಸಂಸ್ಥಾನಗಳು ಹತಶೇಷವಾಗಿ ಉಳಿದಿರುವ ದೊಡ್ಡ ಪಾಳಯಪಟ್ಟುಗಳಾಗಿವೆ. ದರ್ಖನಲ್ಲಿ ಬಹಮನಿ ದೊರೆಗಳೂ, ಅವರ ತರುವಾಯ ಷಾಹಿ ನವಾಬರುಗಳೂ ನಿರ್ಮಾಣ ಮಾಡಿದ ಫೌಜುದಾರರುಗಳಲ್ಲಿ ಹೋದ್ದು ಹೋಗುತಾ, ಈಗ ವನಪರ್ತಿ, ಆತ್ಮತೂರು, ಗದ್ದವಾಲ ಮತ್ತು ನಿಜಾಂ ಸರ್ಕಾರದವರು ತಮ್ಮ ನವಾಬರುಗಳಿಗೆ ಕೊಟ್ಟಿರುವ ಸೀಮೆಗಳು ಕೆಲವು, ಇವುಗಳೇ ಪಾಳಯಪಟ್ಟುಗಳ ಹತಶೇಷಗಳು. ಸ್ವತಂತ್ರವಾಗಿದ್ದ ಕೆಲವು ಪಾಳಯ ಪಟ್ಟುಗಳು ಕಡೆಕಡೆಯಲ್ಲಿ ಹೈದರಲ್ಲಿಯ ಆಶೆಗೆ ಆಹುತಿಯಾದ ರೀತಿಯನ್ನು ಇಲ್ಲಿ ಸ್ವಲ್ಪ ಸೂಚಿಸುತೇನೆ.

## ಚಿತ್ರದುರ್ಗ ಹೋಗಲು ಕಾರಣಗಳು.

ಈ ಪಾಳಯ ಪಟ್ಟುಗಳನ್ನು ವಿಶೇಷವಾಗಿ ಹೈದರಲ್ಲಿ, ಟಿಪ್ಪೂ ಸುಲ್ತಾನ್ ಮತ್ತು ಮೈಸೂರ ರಾಜರು ಸಹಾ ಜೈಸಿಕೊಂಡು ತಮ್ಮ ಸೀಮೆಗೆ ಸೇರಿಸಿಕೊಂಡರೆಂದು ಹಿಂದೆ ಹೇಳಿದೆ. ಇವುಗಳಲ್ಲಿ ಒಂದೊಂದು ಒಂದೊಂದು ತೀರಾಗಿ ಹಾಳಾಯಿತು. ಆದರೆ ಚಿತ್ರದುರ್ಗವನ್ನು ಹೈದರಲ್ಲಿ ಜೈಸಿಕೊಳ್ಳುವಾಗ ಕೊನೆಯಲ್ಲಿ ನಡೆದ ಕೃತ್ರಿಮವು ವಿಶೇಷ ಸಂಗತಿಯಾದ್ದರಿಂದ ಅದನ್ನು ಇಲ್ಲಿ ಶ್ರೋತೃಗಳ ತಿಳುವಳಿಕೆಗಾಗಿ ಸೂಚಿಸುತ್ತೇನೆ. ಹಾಗಿಲ್ಲದೆ ನ್ಯಾಯವಾಗಿ ಧರ್ಮಯುದ್ಧವೇ ನಡೆದಿದ್ದರೆ, ಜಯಾಪಜಯದ ತಕ್ಕಡಿಯ ದಂಡಿ ಯಾವ ಕಡೆಗೆ ತಗ್ಗುತ್ತಿತ್ತೋ ಈಗ ಹೇಳಲು ಸಾಧ್ಯವಿಲ್ಲ. ಇದು ಹಾಗಿರಲಿ, ಕ್ರೋಧಹೆಚ್ಚಿ, ನೀತಿಯ ಕಣ್ಣನ್ನು ಮುಚ್ಚಿಸುವಾಗ ಶತ್ರುವೆನ್ನಿಸಿಕೊಂಡವರೆಲ್ಲಾ ಏಕರೀತಿಯಾದ ನಡತೆಯನ್ನು ತೋರಿಸುತ್ತಾರೆ. ಮುಖ್ಯವಾಗಿ ವಿಶೇಷ ಪ್ರಬಲವಾಗಿದ್ದ ಚಿತ್ರದುರ್ಗದ ಸಂಸ್ಥಾನ ಹೋಗುವುದಕ್ಕೆ ಕೆಲವು ಚಿಲ್ಲರೆ ಕಾರಣಗಳನ್ನು ಬಿಟ್ಟು, ಮುಖ್ಯವಾದ ಕಾರಣಗಳನ್ನು ಇಲ್ಲಿ ತೋರಿಸುತ್ತೇನೆ.

### ೧. ಸ್ವಜನದ್ವೇಷ.

ಮತ್ತೋಡು ಹಾಲಪ್ಪನಾಯಕನೆಂಬುವನು ಚಿತ್ರದುರ್ಗದ ನಾಯಕರಿಗೆ ಭಾವಮೈದನ ವಾವೆಯಾಗಬೇಕು. ಇವನು ದುರ್ಗದ ದೊರೆಯ ಮೇಲೆ ಯಾವಾಗಲೂ ಹಗೆತನವನ್ನೇ ಸಾಧಿಸುತ್ತಾ, ದ್ವೇಷವನ್ನು ತೀರಿಸಿಕೊಳ್ಳುವುದಕ್ಕೆ ಸಮಯವನ್ನು ಹುಡುಕುತಾ ಇದ್ದನು. ಹೈದರಲ್ಲಿಯು ಕೇಳಿದ ಪ್ರಕಾರ ಖಂಡಣಿ ಹಣವನ್ನು ಮೆದಕೆರಿನಾಯಕ ಕೊಡುತ್ತೇನೆಂದು ಒಪ್ಪಿಕೊಂಡ ಮೇಲೆಯೂ ಈ ಹಾಲಪ್ಪನೇ ಮುಂದಾಗಿ ನಿಂತು ದುರ್ಗದ ಗೋವುಗಳನ್ನು ಹಿಡಿಸಿದನು. ಈ ಒಳಗಂಡ ಕಳ್ಳನ ಕೀಟಲೆಯಿಂದಲೇ ಹೈದರನಿಗೂ, ಮೆದಕೆರಿನಾಯಕನಿಗೂ ಜಗಳ ಹುಟ್ಟಿತು. ಸ್ವಜನ ದ್ವೇಷಕ್ಕಿಂತಲೂ ವೇಗವಾದ ವಿಷ ಬೇರೆ ಯಾವುದೂ ಇಲ್ಲ. ವಿರಾಟಪರ್ವದಲ್ಲಿ ಉತ್ತರಗೋಗ್ರಹಣ ದಕ್ಷಿಣಗೋಗ್ರಹಣವೆಂದು ಜರುಗಿ, ಯುದ್ಧಕ್ಕೆ ಮೂಲವಾದ ಹಾಗೆಯೇ

ಚಿತ್ರದುರ್ಗದಲ್ಲಿಯೂ, ಇನ್ನೂ ಇತರ ಕಡೆಗಳಲ್ಲಿಯೂ ನಡೆಯಿತು. ಜಗಳಕ್ಕೆ ಕಾಲ ಕೆರೆಯಲು ಶತ್ರುರಾಜರ ದನ ಮೆಯ್ಯುತ್ತಿರುಗುವಾಗ ಅವುಗಳನ್ನು ಹಿಡಿಯತಕ್ಕದ್ದು ಪುರಾತನ ಪದ್ಧತಿಯಾಗಿದೆ.

### ೨. ಸ್ವಯೂಥ ಕಲಹ, ಪಾಳಯದಲ್ಲಿ ತುಳಿದಾಟ.

ಆದಿಯಿಂದಲೂ ದುರ್ಗದ ಪಾಳಯಗಾರನ ಮಿತ್ರರಾಗಿ ಅವನಿಗೆ ಸಹಾಯ ಮಾಡುತಾ ಇದ್ದ ಜರಿಮಲೆ ಮೊದಲಾದ ಕೆಲವು ಚಿಲ್ಲರೇ ಪಾಳಯಗಾರರು ಮೊದಲಿನಿಂದಲೂ ದುರ್ಗದ ಕೋಟೆಯ ಮತ್ತು ಅಲ್ಲಿನ ರಾಜರ ಆಡಳತದ ಗುಟ್ಟನ್ನೆಲ್ಲಾ ತಿಳದುಕೊಂಡಿದ್ದರು. ಈ ಮಿತ್ರರು ಹೈದರನ ಕಡೆ ದಂಡು ಹಲ್ಲಾ ಹತ್ತಿ ಕೋಟೆಯೊಳಕ್ಕೆ ನುಗ್ಗುತ್ತಿರುವಾಗ ಚಿತ್ರದುರ್ಗದ ಕಡೆ ಯುದ್ಧಮಾಡುತಾ ಇದ್ದವರು ಯುದ್ಧರಂಗದಲ್ಲಿ ಮೆದಕೆರಿನಾಯಕನ ದಂಡನ್ನೇ ಹೊಡೆಯಲು ಆರಂಭ ಮಾಡಿದರು. ಇಂಥಾ ಒಳಗಂಡ ಕಳ್ಳರ ಮಿತ್ರದ್ರೋಹದಿಂದ ಒಳ್ಳೇ ಸಮಯದಲ್ಲಿ ವಿಪತ್ತು ಸಂಭವಿಸಿತು.

### ೩. ಸ್ವಾಮಿದ್ರೋಹಿತನ.

ಚಿತ್ರದುರ್ಗದ ಪಾಳಯಗಾರನು ಅನೇಕವಾಗಿ ಮುಸಲ್ಮಾನರನ್ನು ತನ್ನ ಸೇನೆಯಲ್ಲಿ ಚಾಕರಿಗೆ ಇರಿಸಿಕೊಂಡಿದ್ದನು. ಸಾಧಾರಣ ಸಿಪಾಯಿ ಮೊದಲಾದ ಕೆಲಸದಲ್ಲಿಯೂ ಅಲ್ಲದೆ ಕಾಲುಬಲ, ಕುದುರೆ ತುಕಡಿ, ಫಿರಂಗಿ ತುಕಡಿಗಳಲ್ಲಿಯೂ ಅನೇಕ ಜನ ಮುಸಲ್ಮಾನ ಸರದಾರರು ಮುಖಂಡರಾಗಿ ಹುದ್ದೇದಾರಿ ಮಾಡುತಾ ಇದ್ದರು. ಹೈದರಲ್ಲಿಯು ಎಷ್ಟು ಪ್ರಯತ್ನಮಾಡಿದಾಗ್ಯೂ, ದುರ್ಗದ ಕೋಟೆ ಸ್ವಾಧೀನವಾಗುವ ಸಂದರ್ಭವೇ ತೋರಲಿಲ್ಲ. ಆಗ ಹೈದರನು ಭೇದೋಪಾಯವನ್ನು ಮಾಡೆಂದು ತನ್ನ ಖಾಜಿ ಅಷರಫ್‌ಖಾ ಎಂಬುವನಿಗೆ ಪ್ರೇರೇಪಿಸಿದನು. ಈತನು ಪಾಳಯಗಾರನ ಬಳಿಯಲ್ಲಿ ಮುಖಂಡ ಸೇನಾನಾಯಕರಾಗಿದ್ದ ಕುತ್‌ಬಂದಿಖಾನ್, ಅಹಮದ್‌ಖಾನ್, ಜಮಾಲ್‌ಖಾನ್ ಇವರನ್ನು ಕರೆಯಿಸಿಕೊಂಡು, ಅವರನ್ನು ಕುರಿತು "ನಾವು ಅಹಲೆ ಇಸ್ಲಾಂಜನ, ಹಿಂದೂ ಮುಸಲ್ಮಾನರಿಗೆ ದ್ವೇಷವಿದ್ದೇ ಇದೆ. ಇನ್ನು ಎಲ್ಲಿಯೂ ಮಾರ್ಗವಿಲ್ಲದ್ದರಿಂದ ಈ ಪಾಳಯಗಾರನಲ್ಲಿ ಚಾಕರಿಗೆ ಸೇರಬೇಕಾ

ಯಿತು. ಮೊದಲಿಂದಲೂ ಹಿಂದುಗಳನ್ನು ಮುರಿದು ದೀಽದಾರ್ ಜನರು ಪ್ರಬಲರಾಗುತಾ ಬರುತಿದಾರೆ. ಹಿಂದೂ ಜನರ ಉಪ್ಪು ತಿಂದು ಷಹೀದ್ ಆದರೆ, ದೊಜಕ್ (ನರಕ) ಶಿವಾಯಿ ಅನ್ಯಥಾ ಇಲ್ಲ. ಈ ಗರೀಬ ಪಾಳಯಗಾರ ಏನಕೊಟ್ಟಾನು ? ನವಾಬ ಸಾಹೇಬರು ಜಹಗೀರ್ ಕೊಡುವ ಮಽಸಬ್ ಮಾಡಿದಾರೆ. ಈ ಸಂಸ್ಥಾನ ಬಂದು ಠಾಣೆ ಬಿದ್ದರೆ, ಮಕ್ಕ, ಮದೀನಾ, ಅರಬಸ್ಥಾಽ, ಕಾಬುಲ್, ಖಂದಾರೆ ಸೀಮೆಯೆಲ್ಲಾ ಮುಸಲ್ಮಾನರದಾಗುತ್ತೆ. ನೀವು ದೀಽದಾರರಾದರೆ ಇದಕ್ಕೆ ಒಪ್ಪಿ, ಕಾಫರರಾದರೆ ಆ ಜನರಲ್ಲಿ ಸೇರಿ." ಈ ಪ್ರಕಾರ ಆ ಖಾಜಿಯು ಆ ಸರದಾರರಿಗೆ ಬೋಧಿಸಿದನು. ಆಗ ದುರ್ಗದಲ್ಲಿದ್ದ ಮುಖಂಡರಾದ ತುರುಕರೆಲ್ಲಾ ಹೈದರನಿಗೆ ಸಹಾಯ ಮಾಡಲು ಒಪ್ಪಿದರು. ಆಗ ಮೊಹರಂ ಹಬ್ಬ ಬಂದಿತ್ತು. ಕಡೇ ದಿವಸ ಪಂಜೆ ತೊಳೆಯಲು ಹೋಗುವ ನೆವ ದೊರೆಯಿತು. ಮಲ್ಲಾಪುರದ ಕೆರೆಗೆ ಹತ್ತರವಾಗಿ ಡೇರೆ ಹಾಕಿಕೊಂಡಿದ್ದ ಹೈದರಲ್ಲಿಯ ಭೇಟಿ ಮಾಡಿಕೊಂಡು ಅವನಿಗೆ ಸಹಾಯ ಮಾಡುವುದಾಗಿಯೂ, ಪಾಳಯಗಾರನನ್ನು ಹಿಡಿದು ಕೊಡುವುದಾಗಿಯೂ ದುರ್ಗದ ದಂಡಿನ ತುರಕರು ಪ್ರಮಾಣಮಾಡಿ ಕೊಟ್ಟು ಹಿಂತಿರುಗಿ ದುರ್ಗಕ್ಕೆ ಬಂದರು. ತರುವಾಯ ಹೈದರನ ದಂಡು ಕೋಟೆ ಹಲ್ಲಾ ಮಾಡಿ, ಒಳಕ್ಕೆ ಬರುವಾಗ ಆ ತುರುಕರೆಲ್ಲಾ ಅವರ ಮೇಲೆ ಯುದ್ಧಮಾಡದೆ ದುರ್ಗದ ಸೇನೆಯು ಮೇಲೆಯೇ ತಿರುಗಿ ಬಿದ್ದು ಹೊಡೆಯಲು ಆರಂಭಿಸಿದರು.

## ೪. ಪೂನೆ ಮರಾಟಿಯವರ ಮೋಸ.

ಮದಕೆರಿನಾಯಕನು ಪೂನೇ ಶ್ರೀಮಂತ ಪೇಶ್ವೆಯವರಲ್ಲಿ ಕರಾರು ಮಾಡಿಕೊಂಡು ಹೈದರಲ್ಲಿಯನ್ನು ಅಡಗಿಸಲು ಸಹಾಯಕ್ಕಾಗಿ ಮರಾಟಿ ಸೇನೆಯನ್ನು ಕಳುಹಿಸತಕ್ಕದೆಂದು ಗೊತ್ತಾಗಿತ್ತು. ಅದೇ ಪ್ರಕಾರ ೩೦,೦೦೦ ಕುದುರೆ ದಂಡನ್ನು ಪೇಶ್ವೆಯು ಕಳುಹಿಸಿದನು. ಇಂಥಾ ಮರಾಟಿ ಸೇನೆ ಮದಕೆರಿನಾಯಕನ ಸಹಾಯಕ್ಕಾಗಿ ಎರಡು ಸಾರಿ ಬಂತು. ಎರಡುಸಾರಿಯೂ ಹೈದರನು ಮರಾಟಿ ಸೇನಾಪತಿಗಳಿಗೆ ಭಾರಿಯಾಗಿ ಲಂಚವನ್ನು ಕೊಟ್ಟು, ಅವರು ಸಮಯಕ್ಕೆ ಬಾರದಂತೆ

ಮಾಡಿದನು. ಈ ಮರಾಟೆಯವರ ದ್ರೋಹವು ತುರುಕ ಸೇನಾಪತಿಗಳು ಮಾಡಿದ ದ್ರೋಹಕ್ಕಿಂತಲೂ ಕೇಡಾಗಿತ್ತು.

ಇದೇ ಮೊದಲಾದ ಕಾರಣಗಳಿಂದ ದುರ್ಗದ ಸಂಸ್ಥಾನ ಹೋಯಿತು. ಆಗ ಸಮಯಕ್ಕೆ ಸರಿಯಾಗಿ ಮರಾಟೆ ದಂಡು ಮಾತ್ರ ಬಂದಿದ್ದರೆ, ಅದುವರೆಗೆ ಬಲವಾಗಿ ವಿಶೇಷ ನಷ್ಟವನ್ನು ಹೊಂದಿದ್ದ ಶ್ರೀರಂಗಪಟ್ಟಣದ ದಂಡಿಗೆ ಖಂಡಿತವಾಗಿಯೂ ಜಯವಾಗುತ್ತಿರಲಿಲ್ಲ. ಹೈದರನು ಪರಾಜಿತನಾಗಿ ಹೊರಟುಹೋಗಿದ್ದಾಗ್ಯೂ, ಕಡೆಗೆ ದುರ್ಗದವರಿಂದ ಖಂಡಣಿ ಮೊಬಲಗನ್ನು ತೆಗೆದುಕೊಂಡು ಹೊರಟು ಹೋಗಿದ್ದಾಗ್ಯೂ, ಹೈದರನು ಪುನಃ ದುರ್ಗದ ಕಡೆಗೆ ಬರುವ ಕೋರಿಕೆ ಇರುತ್ತಿರಲಿಲ್ಲ. ಅವನಿಗೆ ಇಂಗ್ಲೀಷರೊಡನೆ ಬಲವಾದ ಯುದ್ಧ ತೊಡಗಿತ್ತು. ಟೀಪುವು ಮಲೆಯಾಳ ಪ್ರಾಂತದಲ್ಲಿ ಭಾರಿ ದಂಡಿನೊಡನೆ ಇಂಗ್ಲೀಷರನ್ನೂ, ಇತರರನ್ನೂ ಎದುರಿಸುತಾ ಇದ್ದನು. ಅಂಥಾ ಅವಾಂತರದಲ್ಲಿ ದುರ್ಗವನ್ನು ಜೈಸುವಂಥಾ ಭಾರಿ ದಂಡು ದೊರೆಯುತ್ತಿರಲಿಲ್ಲ. ಈ ಮಧ್ಯೆ ಸುಮಾರು ಎರಡು ವರ್ಷ ದೊಳಗಾಗಿ ಹೈದರಲ್ಲಿಗೆ ಮರಣವುಂಟಾಯಿತು. ಅವನ ಮಗ ಟಿಪ್ಪೂಸುಲ್ತಾನನಲ್ಲಿ ಕ್ರೌರ್ಯ ಹೆಚ್ಚಾಗಿತ್ತೇ ಹೊರತು, ಚಿತ್ರದುರ್ಗದ ಮೇಲೆ ಕೈಮಾಡುವಷ್ಟು ಆನುಕೂಲ್ಯವೂ, ಸಾಮರ್ಥ್ಯವೂ ಇರಲಿಲ್ಲ. ಕ್ರಿ॥ ಶ॥ ೧೭೯೯ನೇ ಸಿದ್ಧಾರ್ಥಿ ಸಂವತ್ಸರದಲ್ಲಿ ಶ್ರೀರಂಗಪಟ್ಟಣವೇ ಹೋಯಿತು. ಆಗಿನ ಸಂದರ್ಭವನ್ನೆಲ್ಲಾ ಶೋಧಿಸಿ ನೋಡಲಾಗಿ, ಚಿತ್ರದುರ್ಗದ ಸಂಸ್ಥಾನವು ಒಂದು ಸ್ವತಂತ್ರ ರಾಜ್ಯವಾಗಿ ಉಳಿದುಕೊಳ್ಳುವ ಸಂಭವವಿತ್ತು. ಮೇಲೆ ಕಂಡ ಫಿತೂರಿಯಿಂದ ಅದು ತಪ್ಪಿಹೋಯಿತು.

### ಗುಮ್ಮನಾಯಕನ ಪಾಳಯದ ಸಂಸ್ಥಾನ ಹೋಗಲು ಕಾರಣಗಳು.

ಗುಮ್ಮನಾಯಕನ ಪಾಳಯದ ಪಾಳಯಗಾರರು ಆಯಾ ಕಾಲದಲ್ಲಿ ಪ್ರಬಲರಾಗಿ ಬಂದ ರಾಜರುಗಳನ್ನು ಅನುಸರಿಸಿಕೊಂಡು ಪೊಗದಿ ಮೊದಲಾದ ವರಿಯನ್ನು ಕೊಟ್ಟುಕೊಂಡು ವಿಹಿತವಾಗಿ ಬಾಳುತಿದ್ದರು. ಕೊನೆಯಲ್ಲಿ ಹೈದರಲ್ಲಿಯು ಪ್ರಬಲಕ್ಕೆ ಬಂದು, ಇವರಿಂದ ಖಂಡಣಿ ಹಣವನ್ನು ವಸೂಲ್ಮಾಡಿಕೊಂಡು ಹೋಗುತಿದ್ದನು. ಇಷ್ಟು ಹೊರತು

ಹೈದರನಿಂದ ಈ ಪಾಳಯಗಾರನಿಗೆ ಇನ್ನು ಯಾವ ಬಾಧೆಯೂ ಉಂಟಾಗಲಿಲ್ಲ.

ಮೀರ್‌ಸಾದಕ.

ಹೀಗಿರುವಲ್ಲಿ ಹೈದರನು ತನ್ನ ಭಾವಮೈದನಾದ ಮೀರ್‌ಸಾದಕ್ ಎಂಬುವನಿಗೆ ಗುರಂಕೊಂಡವನ್ನು ಜಹಗೀರಿಯಾಗಿ ಕೊಟ್ಟಿದ್ದನು. ಗುರುಂಕೊಂಡೆ ಸೀಮೆಗೆ ಗುಮ್ಮನಾಯಕನ ಪಾಳಯದ ಸೀಮೆಯು ಲಗತ್ತಾಗಿತ್ತು. ಇದನ್ನು ಹೇಗಾದರೂ ಹುಯಿಲಿನಲ್ಲಿ ಹುಯಿಲು ಎಂದು ತಾನು ಸ್ವೀಕರಿಸಿಕೊಂಡು ತನ್ನ ಜಹಗೀರಿಗೆ ಸೇರಿಸಿಕೊಳ್ಳಬೇಕೆಂದು ಮೀರಸಾದಕ್ಕನಿಗೆ ಬಹಳ ಆಶೆ ಇತ್ತು. ಹೈದರಲ್ಲಿ ತೀರಿಹೋಗಿ ಟಿಪ್ಪೂಸುಲ್ತಾನನಿಗೆ ದೌಲತ್ತು ಬಂದ ಸಂಧಿಕಾಲದಲ್ಲಿ ಪಾಳಯಗಾರರುಗಳಲ್ಲಿ ಪರಸ್ಪರ ಜಗಳ ಹುಟ್ಟಿತು ; ಇವರು ಒಬ್ಬರ ಸೀಮೆಯನ್ನು ಒಬ್ಬರು ಒತ್ತಿಕೊಂಡು ಪರಸ್ಪರ ಜಗಳವಾಡಲು ಆರಂಭಿಸಿದರು. ಇವರು ನಡಿಸಿದ ಹಾವಳಿ ಸಹಿಸಲು ಅಸಾಧ್ಯವಾಯಿತು. ಆಗ ಟಿಪ್ಪುವು ೨೦ ಸಾವಿರ ದಂಡನ್ನು ಸಹಾಯಕ್ಕೆ ಕಳುಹಿಸಿ, ಈ ಪಾಳಯಗಾರರ ಸೀಮೆಗಳು ವಿಶಿಷ್ಠವನ್ನೂ ಜಪ್ತಿಮಾಡಿ, ಶ್ರೀರಂಗಪಟ್ಟಣದ ರಾಜ್ಯಕ್ಕೆ ಸೇರಿಸಿಬಿಡುವುದೆಂದು ಬಟ್ಟಪ್ಪಣೆ ಕೊಟ್ಟನು. ಇಷ್ಟರಮಟ್ಟಿಗಾದೀತೇ ಎಂದು ಕಾದುಕೊಂಡಿದ್ದ ಮೀರಸಾದಕ್ಕನು ಇತರ ಪಾಳಯಪಟ್ಟುಗಳನ್ನು ಜಫ್ತಿಮಾಡಿದಹಾಗೆಯೇ ಗುಮ್ಮನಾಯಕನ ಪಾಳಯವನ್ನೂ ಜಫ್ತಿಮಾಡಿಕೊಳ್ಳುವುದಕ್ಕಾಗಿ ಅದಕ್ಕೆ ಮುತ್ತಿಗೆ ಹಾಕಿದನು.

ನರಸಿಂಹನಾಯಕನಿಗೂ, ಮೀರಸಾಬಿಗೂ ಜಗಳ.

ಆಗ ಗುಮ್ಮನಾಯಕನ ಪಾಳಯದಲ್ಲಿ ನಾರಸಿಂಹನಾಯಕನೆಂಬ ಪಾಳಯಗಾರನು ಆಳುತಿದ್ದನು. ಆಗ ಈ ನಾರಸಿಂಹನಾಯಕನು—ನಾವು ಟಿಪ್ಪುಸುಲ್ತಾನರ ಸರ್ಕಾರಕ್ಕೆ ವಿರೋಧವಾಗಿ ನಡೆದವರಲ್ಲ, ಖಂಡಣಿ ಹಣವನ್ನು ಸರಿಯಾಗಿ ಪಾವತಿ ಮಾಡುತಾ ಬರುತ್ತಲೂ ಇದೇವೆ, ನಮ್ಮ ಸೀಮೆಯನ್ನು ತೆಗೆದುಕೊಳ್ಳಕೂಡದು, ಈ ಸಂಗತಿಯನ್ನು ಕುರಿತು ಟಿಪ್ಪುಸುಲ್ತಾನರಿಗೆ ನೀವೂ ಬರೆಯಿರಿ, ನಾನೂ ಬರೆಯುತೇನೆ, ಅವರ ಅಪ್ಪಣೆಯಾದಂತೆ ನಡೆದುಕೊಳ್ಳೋಣವೆಂದು ಸಮಾಧಾನ ಹೇಳಿ,

ಇದೇ ಸಂಗತಿ ಕುರಿತು ಬೇರೇ ಕರೀತವನ್ನು ಬರೆದು ಕಾಲಾಡಿ ಬಂಟೆಯ ಸವಾರರ ಮೂಲಕ ಶ್ರೀರಂಗಪಟ್ಟಣಕ್ಕೆ ಕಳುಹಿಸಿದನು. ದಾರಿಯಲ್ಲಿ ಮೀರಸಾಬಿಯು ಈ ಬಂಟೆಸವಾರರನ್ನು ಹಿಡಿಯಿಸಿ ಕೊಲ್ಲಿಸಿದನು. ನಾರಸಿಂಹನಾಯಕನಿಗೆ ಇದು ತಿಳಿದ ಕೂಡಲೆ ಸಂಸಾರವನ್ನು ಕಂಪನಿ ಸೀಮೆಯಾದ ರಾಜವಟ್ಟೆ ತಾಲ್ಲೂಕು ದೊಣೇಬೈಲು ಎಂಬ ಸ್ಥಳಕ್ಕೆ ಕಳುಹಿಸಿ ತಾನು ಮುಂದಿನ ರಾಜಕಾರ್ಯವನ್ನು ನಡೆಯಿಸುತಾ ಇರುವಾಗ, ಕಂಪನಿ ಸರ್ಕಾರದವರು ಕ್ರಿ|| ಶ|| ೧೭೯೧—೨ ರಲ್ಲಿಯೂ, ಕಡೇಸಾರಿ ೧೭೯೯ ರಲ್ಲಿಯೂ ದಂಡೆತ್ತಿ ಬಂದು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದರಷ್ಟೆ. ಆಗ ಮದರಾಸಿನಿಂದ ಇಂಗ್ಲಿಷ್ ಸೇನೆ ಹೊರಟಿತು. ಆ ಸಮಯದಲ್ಲಿ ಬ್ರಿಟಿಷ್ ಸರ್ಕಾರದವರು—ಸೇನೆಗೆ ಬೇಕಾದ ಸರಬರಾಯನ್ನು ಒದಗಿಸಿಕೊಟ್ಟು, ಸಹಾಯ ಮಾಡುವ ಪ್ರಜೆಗಳೂ, ಪ್ರಮುಖರೂ, ಈ ವಿಶಿಷ್ಠ ಜನರಿಗೂ, ಮುಖಂಡರಿಗೂ ಅವರವರ ಹಕ್ಕನ್ನು ನಡೆಸಿಕೊಡುತ್ತೇವೆ ಎಂದು ಪ್ರಸಿದ್ಧಿಪತ್ರಿಕೆಯನ್ನು ಕೊಟ್ಟರು. ಇದರಂತೆ ನಾರಸಿಂಹನಾಯಕರು ಬ್ರಿಟಿಷ್ ಸರದಾರರನ್ನು ಭೇಟಿಮಾಡಿಕೊಳ್ಳಲಾಗಿ ಅಗಿದ್ದ ಸೇನಾಪತಿಗಳು ಮತ್ತು ಮದರಾಸು ಸರ್ಕಾರದವರು ಆ ಪಾಳಯಗಾರನನ್ನು ಮರ್ಯಾದೆಯಿಂದ ಕಂಡು, ಆತನು ಇಂಗ್ಲಿಷರಿಗೆ ಬೇಕಾದ ಸಹಾಯವನ್ನು ಮಾಡಬೇಕೆಂತಲೂ, ತಾವು ಶ್ರೀರಂಗಪಟ್ಟಣವನ್ನು ವಶಮಾಡಿಕೊಂಡಮೇಲೆ ಗುಮ್ಮನಾಯಕನ ಪಾಳಯದ ಸೀಮೆಯನ್ನು ಪೂರ್ತಿಯಾಗಿ ಹಿಂದಕ್ಕೆ ಕೊಡಿಸಿಬಿಡುವುದಾಗಿಯೂ ವಾಗ್ದಾನ ಮಾಡಿ ಕರಾರು ಮಾಡಿಕೊಂಡರು.

ಕಂಪನಿ ಸರದಾರರ ಭರವಸೆ.

ಕಡೆಗೆ ಬ್ರಿಟಿಷ್ ಸರ್ಕಾರಕ್ಕೆ ಜಯವಾಯಿತು. ಟಿಪ್ಪುಸುಲ್ತಾನನ ಸೀಮೆಗಳನ್ನು ಯುದ್ಧಕ್ಕೆ ಸೇರಿದ್ದ ಹೈದರಾಬಾದು, ಪೂನೆ, ಮತ್ತು ಇಂಗ್ಲಿಷ್ ಈ ಮೂರು ಸಂಸ್ಥಾನದವರೂ ಹಂಚಿಕೊಳ್ಳುವಾಗ ಈಗಿನ ಮೈಸೂರು ಸೀಮೆಯನ್ನು ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಕೊಟ್ಟು ಪಟ್ಟಾಭಿಷೇಕ ಮಾಡಿದರೆಂಬ ಸಂಗತಿ ಚರಿತ್ರೆಯಲ್ಲಿ ಹೊಗಳಲ್ಪಟ್ಟದೆ.

ಪಾಳಯಗಾರರ ಆಶಾ ಭಂಗ.

ಗುಮ್ಮನಾಯಕನ ಪಾಳಯದ ಸೀಮೆಯನ್ನೂ ಮೈಸೂರು ಮಹಾರಾಜರ ಸಂಸ್ಥಾನಕ್ಕೆ ಸೇರಿಸಿಕೊಟ್ಟುಬಿಟ್ಟರು. ತನ್ನ ಪಾಳಯಪಟ್ಟಿನ ಪ್ರದೇಶವನ್ನು ಮೊದಲು ಮದರಾಸು ಸರ್ಕಾರದವರು ಮಾಡಿಕೊಂಡಿದ್ದ ಕರಾರಿನ ಪ್ರಕಾರ ಕೊಡಿಸಬೇಕೆಂದು ನಾರಸಿಂಹನಾಯಕನು ಕೇಳಲಾಗಿ—ಗುಮ್ಮನಾಯಕನ ಪಾಳಯದ ಸೀಮೆಯು ಮೈಸೂರು ಸಂಸ್ಥಾನಕ್ಕೆ ಸೇರಿಹೋಗಿದೆ, ಅದನ್ನು ನಿಮಗೆ ಕೊಡಿಸುವ ಸಂಗತಿಯಲ್ಲಿ ನೀವು ದಿವಾನ್ ಪೂರ್ಣಯ್ಯನವರನ್ನು ಕೇಳಿಕೊಳ್ಳಬೇಕೆಂದು ಮದರಾಸಿನ ಇಂಗ್ಲೀಷ್ ಅಧಿಪತಿಗಳು ಉತ್ತರ ಕೊಟ್ಟರು. ರಾಜರ ಪ್ರತಿನಿಧಿ (Regent) ಆಗಿ ಆಳುತ್ತಿದ್ದ ದಿವಾನ್ ಪೂರ್ಣಯ್ಯನನ್ನು ಕಂಡು ಭೇಟಿ ಮಾಡಿಕೊಂಡು ಕೇಳುವಲ್ಲಿ, ಆ ದಿವಾನನು—ಇಂಗ್ಲೀಷ್ ಸರ್ಕಾರದವರೊಡನೆ ಮಾಡಿಕೊಂಡಿದ್ದ ಕರಾರಿನಂತೆ ನಡಿಸಿಕೊಡಬೇಕೆಂದು ಆ ಸರ್ಕಾರವನ್ನೇ ಕೇಳಿಕೊಳ್ಳಬೇಕೇ ಹೊರತು, ಮೈಸೂರು ದೊರೆಗಳಿಗೆ ಅದು ನಿಮಿತ್ತವಿಲ್ಲ; ಪಾಳಯಗಾರರು ಇಂಗ್ಲೀಷ್ ಸರ್ಕಾರದವರೊಡನೆ ಮಾಡಿಕೊಂಡ ಕರಾರಿಗೆ ಆ ಸರ್ಕಾರದವರು ಬದ್ಧರೇ ಹೊರತು, ಮೈಸೂರು ಸಂಸ್ಥಾನಕ್ಕೆ ಆ ಜವಾಬುದಾರಿ ಇಲ್ಲ ಎಂದುಬಿಟ್ಟನು. ಆ ಪಾಳಯಗಾರ ನಾರಸಿಂಹನಾಯಕನಿಗೆ ಉಭಯಭ್ರಷ್ಟತ್ವ ಬಂತು. ಸೀಮೆಯು ಮೈಸೂರು ಮಹಾರಾಜರಿಗೆ ಸೇರಿದೆಯಾದ್ದರಿಂದ ತಾವು ಅದನ್ನು ಕೊಡಿಸುವುದಕ್ಕಾಗುವುದಿಲ್ಲವೆಂದು ಬ್ರಿಟಿಷ್ ಸರ್ಕಾರದವರು ತಪ್ಪಿಸಿಕೊಂಡರು. ಸೀಮೆಯನ್ನು ಕೊಡುವುದಾಗಿ ಕರಾರು ಮಾಡಿಕೊಂಡವರು ಕಂಪನಿಯವರೇ ಹೊರತು ತಾವಲ್ಲವೆಂದು ದಿವಾನ್ ಪೂರ್ಣಯ್ಯನು ತಪ್ಪಿಸಿಕೊಂಡನು. ಇದರ ಮೇಲೆ ಶ್ರೀರಂಗಪಟ್ಟಣದ ಕರಾರಿಗೆ ಸೇರಿದ್ದ ಮರಾಟೆಯವರು ಹೈದರಾಬಾದು ನಿಸಾಮ ಇವರನ್ನು ಕೇಳುವುದಕ್ಕೆ ಕಾರಣವಿಲ್ಲವಾಯಿತು. ಈ ಮಧ್ಯೆ ಪಾಳಯಗಾರನಿಗೆ 'ದೇಶವೇನೋ ಹೋಯಿತು. ನೀತಿ ತಪ್ಪುಗಾಯಿತು. ಶಾಂತಿ ! ಶ್ಯಾಂತಿ ! ! ಶ್ಯಾಂತಿಃ ! ! ! ಸರ್ವಶಾಂತಿರಸ್ತು. ॥

# ಪಾಳಯಗಾರರು.

## ೩ನೇ ಉಪನ್ಯಾಸ.

ಭಾರೀ ಪಾಳಯಪಟ್ಟುಗಳೆಲ್ಲಾ ಸ್ವಯಾರ್ಜಿತ.

ಪೂರ್ವಕಾಲದಲ್ಲಿ ರಾಜಬಂಧುಗಳೂ, ದೊಡ್ಡ ಸರದಾರರೂ ದೊಡ್ಡ ವಿದ್ಯಾವಂತರೂ, ಲೋಕೋಪಕಾರಕ್ಕಾಗಿ ಶಾಶ್ವತವಾದ ಮಹತ್ಕಾರ್ಯಗಳನ್ನು ನಿರ್ವಹಿಸಿದವರೂ, ಈ ಮೊದಲಾದ ಪ್ರಮುಖರು ಆಯಾ ಕಾಲಗಳಲ್ಲಿ ಆಳುತ್ತಾ ಇದ್ದ ಚಕ್ರವರ್ತಿಗಳಿಂದ ಬಹುಮಾನವನ್ನೂ, ಜಹಗೀರುಗಳನ್ನೂ ಪಡೆದುಕೊಂಡು, ಕೆಲವರು ಶಾಶ್ವತವಾಗಿಯೂ, ಕೆಲವು ದಂಡಿನ ಸರದಾರರು ಮೊದಲಾದವರು ಸ್ವಲ್ಪ ಕಾಲದಮಟ್ಟಿಗೂ, ಅನುಭವಿಸುತಾ ಇದ್ದರು. ಇವರಲ್ಲಿ ಕೆಲವರು ದೊರೆಗೆ ದ್ರವ್ಯರೂಪವಾಗಿ ಮತ್ತು ಯುದ್ಧಪ್ರಸಕ್ತಿ ಬಂದಾಗ ಸೇನೆಯ ರೂಪವಾಗಿ ಸಹಾಯವನ್ನು ಕೊಟ್ಟುಕೊಂಡು ಸುಖವಾಗಿ ಬಾಳುತಿದ್ದರೆಂದು ಹಿಂದೆ ಅರಿಕೇ ಮಾಡಿದೆ. ಆದರೆ ಭಾರಿಯಾಗಿ ರಾಜ್ಯವನ್ನು ಕಟ್ಟಿ, ಸ್ವಸಾಮರ್ಥ್ಯದಿಂದ ಪ್ರಬಲಕ್ಕೆ ಬಂದು ಖ್ಯಾತಿವಂತರಾದ ಪಾಳಯಗಾರರು ಯಾರೂ ಆದಿಯಲ್ಲಿ ದೊರೆಯಿಂದ ಅಥವಾ ಚಕ್ರವರ್ತಿಯಿಂದ ರಾಜ್ಯವನ್ನು ಪಡೆದುಕೊಂಡವರಲ್ಲ. ಅವರು ಸ್ವತಂತ್ರವಾಗಿ ರಾಜ್ಯವನ್ನು ಕಟ್ಟಿದರು. ಅಂಥವರಲ್ಲಿ ಕೆಲವರನ್ನು ಮಾತ್ರ ಇಲ್ಲಿ ನಮೂದಿಸುತ್ತೇನೆ.

ಚಿತ್ರಕಲ್‌ದುರ್ಗ.

(೧) ಚಿತ್ರದುರ್ಗದ ಪಾಳಯಪಟ್ಟನ್ನು ಮೊದಲು ಸ್ಥಾಪಿಸಿದವನು ಮತ್ತಿ ತಿಮ್ಮಣ್ಣನಾಯಕ; ಈತನ ಪರಾಕ್ರಮವನ್ನೂ, ಧೈರ್ಯವನ್ನೂ ನೋಡಿ, ವಿಜಯನಗರದ ನರಪತಿಗಳು ಸುಮಾರು ಕ್ರಿ|| ಶ|| ೧೫೬೭ ನೇ ವಿಭವ ಸಂ|| ದಲ್ಲಿ ಅವನಿಗೆ ಚಿತ್ರದುರ್ಗದ ನಾಯಕತನವನ್ನು ಕೊಟ್ಟರು. ಈ ಬಹುಮಾನ ದೊರೆಯುವುದಕ್ಕೆ ಮುಂಚೆಯೇ ತಿಮ್ಮಣ್ಣನಾಯಕನು ಹಡವನ

ಹಾಳಿಗೆ ಬಂದು ರಾಜ್ಯವನ್ನು ಸ್ಥಾಪಿಸಿಕೊಂಡಿದ್ದನು. ಅದುವರೆಗೆ ವಿಜಯನಗರದ ಚಕ್ರವರ್ತಿಗಳ ಪ್ರಾಬಲ್ಯ ಕ್ರಿ॥ ಶ॥ ೧೫೬೫ ರಲ್ಲಿ ನಡೆದ ತಾಳೀಕೋಟೆ ಯುದ್ಧದಲ್ಲಿ ಪೂರ್ತಿಯಾಗಿ ಮುರಿದುಹೋಗಿತ್ತು. ಸ್ವತಃ ಶೂರನಾಗಿ ತಮ್ಮ ಯಾವ ಅಪ್ಪಣೆಯೂ ಇಲ್ಲದೆ, ಬಂದರಮೇಲೊಂದ್ಯ ಸೀಮೆಯನ್ನು ಕಟ್ಟುತಿದ್ದ ತಿಮ್ಮಣ್ಣನಾಯಕನ ಅಧಿಕಾರವನ್ನು ವಿಜಯನಗರದ ನಾಮಮಾತ್ರದ ದೊರೆಗಳು ಒಪ್ಪಿಕೊಳ್ಳದಿದ್ದರೆ, ಅವರ ಮಾನ ಉಳಿಯುತ್ತಿರಲಿಲ್ಲ. ತಿಮ್ಮಣ್ಣನಾಯಕನು ದುರ್ಗದ ಬೆಟ್ಟದ ಮೇಲೆ ಬಲವಾದ ಕೋಟೆಯನ್ನು ಕಟ್ಟಿಕೊಂಡು ಪ್ರಬಲಕ್ಕೆ ಬಂದನು. ತಮ್ಮ ಕಷ್ಟಕಾಲದಲ್ಲಿ ಇಂಥಾ ಶೂರರ ಸ್ನೇಹವಿರತಕ್ಕದ್ದು ಉತ್ತಮವೆಂದು ಯೋಚಿಸಿ, ಅನಿವಾರ್ಯಹಪಕ್ಷವಾದ ಕಾರಣ, ಅವನು ಸ್ವಯಂ ಸಂಪಾದಿಸಿಕೊಂಡ ಪ್ರಭುತ್ವವನ್ನು ವಿಜಯನಗರದವರು ಗುಟ್ಟಾಗಿ ಒಪ್ಪಿ ಅಂಗೀಕಾರಮಾಡಬೇಕಾಯಿತು. ತಿಮ್ಮಣ್ಣನಾಯಕನ ವಂಶೀಯರೆಲ್ಲಾ ಸ್ವತಂತ್ರವಾಗಿ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡರು. ಇದು ದುರ್ಗದ ಚರಿತ್ರೆಯಲ್ಲಿ ಸ್ಪಷ್ಟವಾಗಿ ಬರೆದಿದೆ.

ಗುಮ್ಮನಾಯಕನ ಪಾಳಯ

(೨) ಗುಮ್ಮನಾಯಕನ ಪಾಳಯದ ಸಂಸ್ಥಾನದವರ ವಿಚಾರವನ್ನು ಈ ಭಾಗದಲ್ಲಿ ಅಷ್ಟು ವಿಶದಮಾಡಬೇಕಾದ ಅಗತ್ಯವೇ ಕಾಣಲಿಲ್ಲ. ವಿಜಯನಗರದ ಸಂಸ್ಥಾನ ಸ್ಥಾಪನೆಯಾಗುವುದಕ್ಕೆ ಸುಮಾರು ನೂರು ವರ್ಷಕ್ಕೆ ಮುಂಚೆ ಗುಮ್ಮನಾಯಕನ ಪಾಳಯದ ಸಂಸ್ಥಾನ ಹುಟ್ಟಿತು. ಅಲ್ಲಿನ ಪಾಳಯಗಾರರ ಮೂಲಪುರಷರು ಯಾರನ್ನೂ ನೋಯಿಸದೆ, ಒಂದು ಪ್ರಾಣಿ ಕೂಡ ಹತವಾಗದೆ ರಾಜ್ಯವನ್ನು ಸಂಪಾದಿಸಿದರು. ಅಲ್ಲಲ್ಲಿ ಸ್ವತಃ ಕಾಡನ್ನು ಕಡಿಯಿಸಿ, ಗ್ರಾಮವನ್ನು ಕಟ್ಟುತ್ತಾ, ತರಗನ್ನು ಗುಡಿಸಿಸಿ ಮನೆಯನ್ನು ಕಟ್ಟಿಸುತ್ತಾ, ಅಲ್ಲಿಗೆ ರೈತರನ್ನು ತಂದು ಸೇರಿಸುತ್ತಾ, ಅವರಿಗೆ ಬೇಕಾದ ಅನುಕೂಲ್ಯಗಳನ್ನು ಕಲ್ಪಿಸಿ, ರಿಯಾಯತಿಗಳನ್ನು ತೋರಿಸುತಾ, ಗ್ರಾಮಗಳ ಪ್ರತಿಷ್ಠೆಯನ್ನು ಮಾಡುತಾ ಬಂದರು. ಇವರು ಆದಿಯಲ್ಲಿ ಯುದ್ಧಮಾಡಿ ತೆಗೆದುಕೊಂಡ ಗ್ರಾಮ ಯಾವುದೂ ಇಲ್ಲ. ಇವರ ಸೀಮೆ ಸ್ವಯಂ ಕಷ್ಟಾರ್ಜಿತವಾದ್ದು. ಈಚೆಗೆ ವಿಜಯನಗರದ ಸಂಸ್ಥಾನೀಕರು ವಿಶೇಷವಾಗಿ ಏಳಗೆಗೆ ಬಂದು, ತಿರುಮಲ

ರಾಯನೆಂಬ ಪ್ರಧಾನಿಯ ಕೈಕೆಳಗೆ ಗುಮ್ಮನಾಯಕನ ಪಾಳಯಕ್ಕೆ ಸೇನೆಯನ್ನು ಕಳುಹಿಸಿ, ಆ ಪಾಳೆಯಗಾರರು ಕಪ್ಪವನ್ನು ಕೊಡಬೇಕೆಂದು ಬಲವಂತ ಮಾಡಿದರು. ಇಲ್ಲಿನ ಪಾಳಯಗಾರರ ೪ ನೇ ತಲೆಯ ಗುಮ್ಮನಾಯಕನು ಅದಕ್ಕೆ ಅಂಗೀಕಾರ ಮಾಡಿ, ಈ ಸೀಮೆ ಅವರ ವಶವರ್ತಿಯಾಗಿರಲು ಒಪ್ಪಿಕೊಂಡನು.

**ಸ್ತ್ರೀ ಮೂಲವಾಗಿ ದ್ರವ್ಯ ದೊರೆತದ್ದು.**

ಗುಮ್ಮನಾಯಕನ ಪಾಳಯದ ಪಾಳಯಗಾರರ ಸಂತತಿಯಲ್ಲಿ ಎರಡನೆಯವನಾದ ಖಾದ್ರಿಪತಿನಾಯಕನು ತಮ್ಮ ಪೂರ್ವದ ಸ್ಥಳವಾದ ಮದನಪಲ್ಲಿ ತಾಲ್ಲೂಕು ದೊಡ್ಡಪಾಳ್ಯದಲ್ಲಿ ತಮ್ಮ ಅಣ್ಣ ನಾರಸಿಂಹನಾಯಕನನ್ನು ಬಿಟ್ಟು ಹೊಸದಾಗಿ ರಾಜ್ಯಸಂಪಾದನೆ ಮಾಡಬೇಕೆಂಬ ಅಭಿಲಾಷೆಯಿಂದ ಈಗಿನ ಬಾಗೇಪಲ್ಲಿ ತಾಲ್ಲೂಕು ಪಾತಪಾಳ್ಯದ ಸಮೀಪಕ್ಕೆ ಮಿತಪರಿವಾರದೊಡನೆ ಬಂದು, ಆ ಊರಿಗೂ, ಭೈರನಬೆಟ್ಟಕ್ಕೂ, ಮಧ್ಯೆ ಒಂದು ಕಡೆ ಇಳದುಕೊಂಡು ಅಲ್ಲಿದ್ದ ದುಷ್ಟಮೃಗಗಳನ್ನು ಸಂಹರಿಸುತ್ತಾ, ಅವುಗಳ ದೆಸೆಯಿಂದ ಅಲ್ಲಿನ ಜನರಿಗೆ ಬಾಧೆಯನ್ನು ತಪ್ಪಿಸುತ್ತಾ, ಎಂಟು ದಿವಸದ ಮಟ್ಟಿಗೆ ಅಲ್ಲಿದ್ದನು. ಆಗ ಪಾತಪಾಳಯ ಗ್ರಾಮದಲ್ಲಿ ಹೆಗ್ಗಡಿಗಳಾಗಿದ್ದ ಮೊರೆಸು ಒಕ್ಕಲಿಗರ ಜಾತಿ ಗುಮ್ಮರಡ್ಡಿ, ಲಕ್ಕರಡ್ಡಿ ಎಂಬ ಸಹೋದರರು ಖಾದ್ರಿಪತಿನಾಯಕನನ್ನು ತಕ್ಕ ಮರ್ಯಾದೆಯಿಂದ ತಮ್ಮೂರಿಗೆ ಕರೆದುತಂದು ಆತನಿಗೆ ಮಗಳನ್ನು ಕೊಟ್ಟು ಮದುವೇ ಮಾಡಿದ್ದೂ ಅಲ್ಲದೆ, ತಾವು ತಮ್ಮ ಮನೆಯಲ್ಲಿ ಸ್ಥಾಪನೆ ಮಾಡಿಟ್ಟಿದ್ದ ನಾಲ್ಕು ಬಿಂದಿಗೆ ತುಂಬಿದ ಭಾರಿ ನಿಕ್ಷೇಪವನ್ನು ಅಳಯನಿಗೆ ಕೊಟ್ಟು, ಅದನ್ನು ಸತ್ಕಾರ್ಯಕ್ಕೆ ಉಪಯೋಗಿಸಬೇಕೆಂದು ಹೇಳಕೊಂಡರು.

**ಅಮಾನುಷ ವ್ಯಾಪಾರ.**

ಇದೂ ಅಲ್ಲದೆ, ಪಾತಪಾಳ್ಯ ಗ್ರಾಮಕ್ಕೆ ವಾಯುವ್ಯ ದಿಕ್ಕಿನಲ್ಲಿರುವ ಬುರುಂಕೊಂಡವೆಂಬ ಸ್ಥಳದಲ್ಲಿ ಬೆಟ್ಟದ ಮೇಲೆ ಬೇಟೆಯಾಡುತ್ತಿರುವಾಗ ಒಂದು ಹುತ್ತದಿಂದ ಅಗ್ನಿಜ್ವಾಲೆ ಕಾಣಿಸಿತಂತೆ! ಅದನ್ನು ದೃಷ್ಟಿಸಿ ನೋಡುತ್ತಿರಲಾಗಿ, "ಅಲ್ಲಿ ದೇವಸ್ಥಾನವನ್ನು ಕಟ್ಟಿಸಿ, ತನ್ನನ್ನು ಪ್ರತಿಷ್ಠೆ ಮಾಡ

ಬೇಕು, ಸಮೀಪದಲ್ಲಿ ಎರಡು ಕೊಪ್ಪರಿಗೆ ಧನವಿದೆ, ಅದನ್ನು ತೆಗೆದು ಕೊಂಡು ಸತ್ಕಾರ್ಯಕ್ಕೆ ಉಪಯೋಗಿಸಬೇಕು" ಎಂದು ಅಲ್ಲಿ ಆವಿರ್ಭವಿಸಿದ್ದ ಸಿವಶಕ್ತಿಯ ಅಪ್ಪಣೆಯಾಯಿತಂತೆ! ಈ ಅಮಾನುಷ ವ್ಯಾಪಾರವನ್ನು ಕೆಲವರು ನಂಬುವುದಿಲ್ಲ. ದೈವಶಕ್ತಿಯನ್ನು ನಂಬದೇಹೋದಾಗ್ಯೂ ಆ ಸಂಬಂಧದಲ್ಲಿ ಸಿಕ್ಕಿತೆಂದು ಹೇಳುವ ಧನಶಕ್ತಿಯನ್ನಾದರೂ ನಂಬಬೇಕಾಗುವುದು. ಹಾಗಿಲ್ಲದಿದ್ದರೆ ಒಂದು ಸಂಸ್ಥಾನವನ್ನು ಸ್ಥಾಪನೆಮಾಡಿ, ಹೊಸದಾಗಿ ಗ್ರಾಮಗಳನ್ನೂ, ಕೆರೆಗಳನ್ನೂ ಕಟ್ಟಿಸಿ, ಅಲ್ಲಿಗೆ ರೈತರನ್ನು ತಂದಿಟ್ಟು, ರಾಜ್ಯವನ್ನು ವೃದ್ಧಿಗೆ ತರುವ ಕೆಲಸವು ಕಾಡಿನಲ್ಲಿ ಗಿಡಗಳು ತಾವಾಗಿಹುಟ್ಟುವ ಹಾಗೆ ಸ್ವಚ್ಛಂದವಾಗಿ ನಡೆಯಿತೆಂದು ಕೆಲವರು ಹೇಳಿದರೂ ಹೇಳಬಹುದು. ಇದನ್ನು ನಂಬುವರು ಮಾತ್ರ ದೊರೆಯುವುದು ಕಷ್ಟ.

ಸಿದ್ಧರ ದರ್ಶನ.

ಈ ಐತಿಹ್ಯವೂ ಹಾಗಿರಲಿ. ಈ ಸಂತತಿಯ ಮೂರನೇ ತಲೆಯವನಾದ ಚೆನ್ನಮನಾಯಕನ ಕಾಲದಲ್ಲಿ ನಡೆದ ಹಾಗೆ ಇನ್ನೊಂದು ಕಥೆಯನ್ನು ಹೇಳುತಾರೆ. ಈ ಚೆನ್ನಮನಾಯಕನು ತನ್ನ ಹೆಸರಿನ ಮೇಲೆ ಒಂದು ಕೆರೆಯನ್ನು ಕಟ್ಟಿಸಿ, ಭೂಮಿಯನ್ನು ಸಾಗುವಳಿಗೆ ತರುವ ಕೆಲಸವನ್ನು ದೇವರಾಜಪಲ್ಲಿ ಎಂಬ ಗ್ರಾಮದಲ್ಲಿ ಮಾಡಿಸುತಾ ಇರಲು, ದೊರೆಯ ಮನೆ ದನಾ ಕಾಯತಕ್ಕ ಒಬ್ಬ ಮನುಷ್ಯ ಬಂದು, ಮೆಯ್ಯುವುದಕ್ಕೆ ಕಾಡಿಗೆ ಪ್ರತಿ ನಿತ್ಯವೂ ಹೋಗುವ ದನಗಳಲ್ಲಿ ಒಂದು ಹಸುವು ಪ್ರತಿದಿನವೂ ಪಾತಪಾಳಯದ ಬೆಟ್ಟಕ್ಕೆ ಹೋಗಿ ಬಂದಮೇಲೆ ಒಂದು ತೊಟ್ಟು ಹಾಲನ್ನೂ ಕರೆಯುವುದಿಲ್ಲವೆಂದು ಚೆನ್ನಮನಾಯಕನಿಗೆ ಅರಿಕೆ ಮಾಡಿದನು. ಆ ದೊರೆಯು ಆಶ್ಚರ್ಯಪಟ್ಟು, ಮೂರನೇ ದಿವಸ ಹಸುವಿನ ಹಿಂದೆ ಹೋಗಿ ಮರೆಯಲ್ಲಿ ನಿಂತು ಪರೀಕ್ಷಿಸಿದನು. ಆ ಗೋವು ಒಂದು ಕಡೆ ನಿಂತುಕೊಂಡಿತು. ಎರಡು ಪುರುಷ ಪ್ರಮಾಣವುಳ್ಳ ಒಬ್ಬ ಮನುಷ್ಯನು ಅಲ್ಲಿಗೆ ಬಂದನು. ಆತನಿಗೆ ಆಪಾದಮಸ್ತಕವೂ ಜಟೆಯಿಂದ ಮುಚ್ಚಿಕೊಂಡಿತ್ತು. ಆತನು ಗೋವಿನ ಸಮೀಪಕ್ಕೆ ಬಂದು ಅದರ ಕೆಚ್ಚಲನ್ನುಂಡು, ಕಲ್ಲುದೊಣೆಯ ಬಳಿಯಲ್ಲಿ ನಿಂತುಕೊಂಡನು. ಚೆನ್ನಮನಾಯಕನು ಇದನ್ನು ಕಂಡು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ,

ಅನುಗ್ರಹವಾಗಬೇಕೆಂದು ಕೇಳಿಕೊಂಡನು. ಅದಕ್ಕೆ ಆ ಸಿದ್ಧರು— ದೋಣೆಯ ಸಮೀಪದಲ್ಲಿರುವ ಗುಹೆಯೊಳು ನಮ್ಮ ಗುರುಗಳು ಇದಾರೆ; ನೀನು ಒಂದು ದಿವಸ ಬಂದರೆ ಅವರ ದರ್ಶನ ಮಾಡಿಸುತೇನೆಂದು ಹೇಳಿ, ಅದೇ ಪ್ರಕಾರ ಬಂದೇ ಸಮನಾಗಿದ್ದ ಇಬ್ಬರು ಋಷಿಗಳ ದರ್ಶನವನ್ನು ಮಾಡಿಸಲು, ಆ ಋಷಿಗಳು ದೊರೆಯ ಭಕ್ತಿಗೆ ಮೆಚ್ಚಿ, ಆತನಿಗೆ ಒಂದು ಹಿಡಿ ಭಸ್ಮವನ್ನು ಕೊಟ್ಟು, ಒಂದು ಸೇರು ತಾಮ್ರಕ್ಕೆ ಒಂದು ಚಿಟಿಕಿ ಭಸ್ಮವನ್ನು ಹಾಕಿ ಕರಗಿಸಿದರೆ ಚಿನ್ನವಾಗುವದು, ಈ ಹಣವನ್ನು ಧರ್ಮಕಾರ್ಯಕ್ಕೆ ಉಪಯೋಗ ಮಾಡಬೇಕು, ನಾವು ಶಾಖಾಹಾರಿಗಳು, ಈ ಬೆಟ್ಟದಲ್ಲಿ ತಪಸ್ಸು ಮಾಡುತಾ ಕೆಲವು ದಿವಸ ಇದ್ದು ನಮ್ಮ ಗುರುಗಳಾದ ಅಗಸ್ತ್ಯರ ಆಶ್ರಮಕ್ಕೆ ಹೋಗುತೇವೆ ಎಂದು ಹೇಳಿದರು. ಶಾಖಾಹಾರಿಗಳಾದ ಈ ಮಹಾತ್ಮರ ಹೆಸರಿನ ಮೇಲೆ ಒಂದು ಗ್ರಾಮವನ್ನೂ ಕೂಡ ಚಿನ್ನಮನಾಯಕನು ಸ್ಥಾಪಿಸಿದನು. ಇದನ್ನು ಚಾಕಾರ್ಲುಪಲ್ಲಿ ಎಂದು ಈಗ ಕರೆಯುತಾರೆ. ಇದೊಂದುಕಥೆ.

ಹಾಗಲವಾಡಿ.

ಹಾಗಲವಾಡಿ ಪಾಳಯಗಾರರ ವಿಷಯದಲ್ಲಿಯೂ ಇಂಥಾ ಒಂದು ಇತಿಹಾಸವಿದೆ. ಅಲ್ಲಿದ್ದ ಪಾಳಯಗಾರರ ಮೂಲಪುರುಷ ಯರಿಮಾದನಾಯಕ. ಈತನು ಶ್ರೀ ತೀರ್ಥ ರಾಮೇಶ್ವರನ ಗುಡಿ ಬಳಿಯಣ ವನವಾಸ ದುರ್ಗವನ್ನು ಸೇರಿ ಅಲ್ಲಿದ್ದನು. ಅಲ್ಲಿಗೆ ಸಕುಟುಂಬವಾಗಿ ದಮ್ಮಳದ ದೇಶಾಯಿ ಬ್ರಾಹ್ಮಣ ಲಕ್ಷ್ಮೀನರಸಯ್ಯನೆಂಬುವನು ರಾಮೇಶ್ವರ ಯಾತ್ರೆಗಾಗಿ ಬಂದು ಈ ಪಾಳಯಗಾರನನ್ನು ನೋಡಿ ಲಕ್ಷ್ಮೀನಾರಾಯಣ ಮೂರ್ತಿ ಸಾಲಿಗ್ರಾಮವನ್ನು ಆತನಿಗೆ ಕೊಟ್ಟನೆಂತಲೂ, ಯರಿಮಾದನಾಯಕನು ಆ ಕಾಡಿನಲ್ಲಿ ಒಂದು ಬಂಡೆಯ ಮೇಲೆ ಆ ಸಾಲಿಗ್ರಾಮವನ್ನು ಇರಿಸಿ ಆಡಿನ ಹಾಲಿನಿಂದ ಕ್ಷೀರಾಭಿಷೇಕ ಮಾಡುವಾಗ ಅಲ್ಲಿ ಭೂಮಿ ಬಿರಿದು ದ್ರವ್ಯ ಸಿಕ್ಕಿತೆಂತಲೂ ಹೇಳುತಾರೆ. ಯರಿಮಾದನಾಯಕನ ಮಗ ಎರಡನೇ ತಲೆಯ ಸಾಲಿನಾಯಕನಿಗೆ ಸಿದ್ಧೇಶ್ವರ ಪ್ರತ್ಯಕ್ಷನಾಗಿ ವಿಭೂತಿ ಉಂಡೆಯನ್ನು ಕೊಟ್ಟನಂತೆ!

ಚಿತ್ರದುರ್ಗದ ಪಾಳಯಗಾರರ ಮೂಲಪುರುಷನಾದ ತಿಮ್ಮಣ್ಣನಾಯಕನಿಗೆ ಆ ದುರ್ಗದ ಮೇಲಿರುವ ಸಂಪಿಗೇ ಸಿದ್ಧೇಶ್ವರ ಪ್ರಸನ್ನನಾದ

ನಂತೆ! ಅಲ್ಲಿ ೭ ಜನ ಸಿದ್ಧಪುರುಷರು ಕಿನ್ನರಿ ಕಲ್ಲು ಎಂಬ ಕಡೆ ಇರಲು ತಿಮ್ಮಣ್ಣನಾಯಕನು ಅವರ ದರ್ಶನಮಾಡಿ ನಮಸ್ಕಾರಮಾಡ ಲಾಗಿ ಆ ಮಹಾತ್ಮರು "ಬಾರೈ ಮಗನೆ, ಮುಂದೆ ನಿನಗೆ ಈ ಸ್ಥಳದಲ್ಲಿ ಮಹಾ ಪದವಿ ಬರುವುದು. ಅರಿತುಮಾಡಿದರೆ ಆರುಪಟ್ಟ, ಮರೆತು ಮಾಡಿದರೆ ಮೂರುಪಟ್ಟ" ಎಂದು ಹೇಳಿ ತಿಮ್ಮಣ್ಣನಾಯಕನಿಗೆ ದೆಸೆ ಗಟ್ಟಿನ ದೂಳಿತ, ಸಿದ್ಧಮೂಲಿಕೆ, ಕೈ ಅಂಬು ಇವುಗಳನ್ನು ಕೊಟ್ಟು ಸಂಪಿಗೇ ಸಿದ್ಧೇಶ್ವರನಲ್ಲಿ ಭಕ್ತಿಯಾಗಿರು ಎಂದು ಹೇಳಿ ಹೊರಟು ಹೋದರಂತೆ!

ಪಾಳಯಗಾರರ ಮೂಲಪುರುಷರ ವಿಚಾರದಲ್ಲಿ ಇಂಥಾ ಐತಿಹ್ಯಗ ಳನ್ನೆಲ್ಲಾ ಹೇಳುವುದು ವಾಡಿಕೆಯಾಗಿದೆ.

ಪ್ರಬಲವಾದ ಚಿತ್ರಕಲ್ ದುರ್ಗವು.

೩. ಈ ಪಾಳಯಗಾರರ ಮಂಡಲಿಯೊಳು ಕೇವಲ ಪ್ರಬಲರಾ ಗಿದ್ದವರಲ್ಲಿ ಚಿತ್ರದುರ್ಗದವರು ಮೊದಲನೆಯವ ರೆಂದು ಹೇಳಬಹುದು. ಈ ಪಾಳಯಗಾರರೆಲ್ಲಾ ಸ್ವತಃ ಶೂರರು, ಎಂಥಾ ಖಾಡಾಖಾಡಿ ಯುದ್ಧ ಕ್ಕಾದರೂ ಹೋಗಿ ಜೈಸಿಕೊಂಡು ಬರುತಿದ್ದರು. ಪರಾಕ್ರಮದಲ್ಲಿ ಪ್ರತಿಯೊಬ್ಬನೂ ನಿಸ್ಸೀಮ; ಇವರ ಬಳಿಯಲ್ಲಿದ್ದ ಸೇನೆಯ ಜನರ ಶೌರ್ಯವು ಆ ದಣಿಗೆ ತಕ್ಕಹಾಗೆಯೇ ಇತ್ತು. ಹೈದರಲ್ಲಿಯು ಮೊದಲು ಇತರ ಪಾಳಯಗಾರರನ್ನು ಜೈಸುವಾಗ ಅವನಿಗೆ ಇವರ ಸಹಾಯ ಮುಖ್ಯವಾಗಿತ್ತು. ಶ್ರೀರಂಗಪಟ್ಟಣದ ಸೇನೆಯವರಿಗೆ ಕಷ್ಟವಾದ ಕಾರ್ಯಗಳನ್ನೆಲ್ಲಾ ಇವರು ಜೈಸಿಕೊಟ್ಟರು. ಇಕ್ಕೇರಿ ಸಂಸ್ಥಾನವನ್ನು ಅವನು ಜೈಸಿದಾಗ ಚಿತ್ರದುರ್ಗದವರ ಸಹಾಯವೇ ಮುಖ್ಯವಾಗಿತ್ತು. ಶ್ರೀಮಂತ ಮಾಧವರಾಯರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ ಹೈದರನ ಸಹಾಯಕ್ಕೆ ಹೋಗಿದ್ದು ಚಿನಕುರಳಿ ಹತ್ತಿರ ನಡೆದ ಯುದ್ಧ ದಲ್ಲಿ ದುರ್ಗದವರು ಜಯವನ್ನು ಹೊಂದಿದರು. ಪಾಳಯಗಾರ ಭರಮ ಪ್ಪನಾಯಕನ ಆಳಿಕೆಯಲ್ಲಿ ಬಾಗೂರ ಖಿಲ್ಲೇದಾರನು ೧೬೪೦ ನೇ ಶಾರ್ವರಿ ಸಂ|| ದಲ್ಲಿ ಮೊಗಲಾಯರ ಕಡೆ ಸುಬೇದಾರ ದರ್ಗಾಕೂಲಿಖಾ ನನಮೇಲೆ ತಿರುಗಿ ಬೀಳಲು, ಚಿತ್ರದುರ್ಗದ ಸೇನೆಯು ಹೋಗಿ ಆ ಖಿಲ್ಲೆ ದಾರನನ್ನು ಸೋಲಿಸಿ ಆ ಗಡಿಯನ್ನು ಮೊಗಲಾಯರ ವಶಮಾಡಿ

ಕೊಟ್ಟಿತು. ಇದಕ್ಕಾಗಿ ಮಾವಿನಕಟ್ಟೆ ಎಂಬ ಗ್ರಾಮವನ್ನು ಮೊಗಲಾಯರು ಈ ಪಾಳಯಗಾರನಿಗೆ ಕೊಟ್ಟರು. ಹೈದರಲ್ಲಿಯು ಎರಡು ಲಕ್ಷ ಸೇನೆಯೊಡನೆ ಎರಡು ಸಾರಿ ಬಂದು ಚಿತ್ರದುರ್ಗಕ್ಕೆ ಮುತ್ತಿಗೆ ಹಾಕಿ ಸೋತುಹೋದನು. ಕಡೆಗೆ ಭೇದೋಪಾಯದಿಂದ ಚಿತ್ರದುರ್ಗವನ್ನು ಸ್ವಾಧೀನಮಾಡಿಕೊಂಡನು. ಮದಕೆರಿನಾಯಕನ ಬಳಿ ಇದ್ದ ತುರುಕರು ಮತ್ತು ಅವನ ಸಹಾಯಕ್ಕಾಗಿ ಬಂದಿದ್ದ ಇತರ ಪಾಳಯಗಾರರು ಅವನಿಗೆ ವಿರೋಧಿಗಳಾಗಿ ದ್ರೋಹ ಮಾಡಿದರು. ಅವನಿಗೆ ಸಹಾಯ ಮಾಡುತೇವೆಂದು ಕರಾರು ಮಾಡಿಕೊಂಡಿದ್ದ ಮರಾಟೆಯವರು ಹೈದರನ ಲಂಚಕ್ಕೆ ಆಶೆಬಿದ್ದು ದುರ್ಗದವರೆಗೂ ತಮ್ಮ ಕುದುರೆಗಳನ್ನು ತೆಗೆದುಕೊಂಡು ಬಾರದೆ ಮೋಸಮಾಡಿದರು. ಈ ರೀತಿಯಲ್ಲಿ ದುರ್ಗವು ಕೃತ್ರಿಮದಿಂದ ಹೈದರನ ಸ್ವಾಧೀನವಾಯಿತೇ ಹೊರತು, ಪಾಳಯಗಾರರ ಪರಾಕ್ರಮವೂ, ಸಾಮರ್ಥ್ಯವೂ ಲೋಪವಾದ್ದರಿಂದಲ್ಲ.

**ವಾಕನಗೆರೆ**

ವಾಕನಗೆರೆ ಪಾಳಯಗಾರನ ವಿಷಯವು ಇದಕ್ಕೆ ಕಡಮೆಯಾದ್ದಲ್ಲ; ದಕ್ಷಿಣ ಮರಾಟೆ ಸೀಮೆಯಲ್ಲಿ ವಾಕನಗೆರೆ ಎಂಬ ಒಂದು ಕೋಟೆ ಇದೆ. ಅಲ್ಲಿ ಪೂರ್ವದಿಂದಲೂ ಒಂದು ಪಾಳಯಗಾರ ಸಂಸ್ಥಾನವಿತ್ತು. ಈ ಪಾಳಯಗಾರನು ಅತ್ಯಂತ ಶೂರನಾಗಿ ಬಹಮನಿ ತುರುಕರಿಗಾಗಲಿ, ಷಾಹಿ ಸಂಸ್ಥಾನಗಳವರಿಗಾಗಲಿ ಅಧೀನನಾಗದೆ ಸ್ವತಂತ್ರನಾಗಿರುತಿದ್ದನು. ಕಡೆಗೆ ಮೊಗಲಾಯರ ದಂಡು ಬಂದು ಔರಂಗಸೇಬನ ಕಾಲದಲ್ಲಿ ಈ ಕೋಟೆಗೆ ಮುತ್ತಿಗೆ ಹಾಕಿತು. ಆ ತುರುಕರು ಈ ವೂರನ್ನು ತೆಗೆದುಕೊಂಡು ಸಂಸ್ಥಾನವನ್ನು ನಾಶಮಾಡಲು ಎಷ್ಟು ಪ್ರಯತ್ನ ಮಾಡಿದಾಗ್ಯೂ, ಆ ಪಾಳಯಗಾರನ ಪರಾಕ್ರಮವೇ ಹೆಚ್ಚಿ ಬಂತು. ಈ ಸಂಗತಿಯನ್ನು ಕುರಿತು ಚಕ್ರವರ್ತಿಗೆ ಬರೆಯಲಾಗಿ, ಔರಂಗಸೇಬನಂಥಾ ಕ್ರೂರನಾದ ಮುಸಲ್ಮಾನ ಕೂಡ ಆ ಪಾಳೆಯಗಾರನ ಶೌರ್ಯವನ್ನು ಮೆಚ್ಚಿ ತನ್ನ ಸೇನೆ ಹಾಕಿದ್ದ ಮುತ್ತಿಗೆಯನ್ನು ಎಬ್ಬಿಸಿ ಆ ರಾಜನ ಪರಾಕ್ರಮವನ್ನು ಮೆಚ್ಚಿ, ಆತನನ್ನು ತನ್ನ ಮಿತ್ರನಂತೆ ಭಾವಿಸುತ್ತೇನೆಯೇ ಹೊರತು ತನ್ನ ಶತ್ರುವಿನಂತೆ ಭಾವಿಸುವುದಿಲ್ಲವೆಂದು ಮರ್ಯಾದೆಯಾಗಿ

ತನ್ನ ಸ್ವಹಸ್ತಾಕ್ಷರದಲ್ಲಿ ಕರೀತ ಬರೆದು ಕಳುಹಿಸಿದನು. ಇಂಥಾ ಘನತೆಯು ದೊಡ್ಡ ದೊಡ್ಡ ಮುಸಲ್ಮಾನ್ ರಾಜ್ಯದವರಾದ ಷಾಹಿ ದೊರೆಗಳಿಗೂ ಕೂಡ ದೊರೆಯಲಿಲ್ಲ.

## (*a*.) ಪಾಳಯಗಾರರ ಸೇನೆಯ ಏರ್ಪಾಡು.

ಸೇನೆಯ ಏರ್ಪಾಡು ಚಿತ್ರಕಲ್‌ದುರ್ಗ.

೪. ವಿಜಯನಗರದ ರಾಯರ ಪ್ರಾಬಲ್ಯದಲ್ಲಿ ಯಾವಾಗಲೂ ಯುದ್ಧಪ್ರಸಕ್ತಿ ಇದ್ದೇ ಇತ್ತು. ಅವರಿಗೆ ತಮ್ಮ ಸಹಾಯ ಸೇನೆಯನ್ನು ಕಳುಹಿಸುವುದಕ್ಕಾದರೂ ಸರಿಯೆ, ಪಾಳಯಗಾರರುಗಳಲ್ಲಿ ಒಬ್ಬರಿಗೊಬ್ಬರಿಗೆ ಸರಿಬೀಳದೆ ಮನಸ್ತಾಪ ಹುಟ್ಟಿ ಪರಸ್ಪರ ಜಗಳವಾಡಿದರೂ ಸರಿಯೆ, ಈಚೆಗೆ ಇತ್ತ ಷಾಹೀ ನವಾಬರ ಕಾಟ, ಅತ್ತ ದಿಳ್ಳೀದಂಡಿನವರ ಆಟೋಪ, ಒಂದು ಕಡೆಯಲ್ಲಿ ಮರಾಟೆಯವರ ದೊಂಬಿ, ಇನ್ನೊಂದು ಕಡೆಯಲ್ಲಿ ಇತರರ ಗಜಾಲು ಇದೆಲ್ಲಾ ಯಾವಾಗಲೂ ಇದ್ದುದರಿಂದ, ಪಾಳಯಗಾರರು ತಮ್ಮ ಚಿಕ್ಕ ರಾಜ್ಯಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ತಂತಮ್ಮ ಯೋಗ್ಯತಾನುಸಾರವಾಗಿ ಸೇನೆಯನ್ನು ಇಟ್ಟುಕೊಂಡಿರಬೇಕಾಗಿತ್ತು. ಆಗಿನ ಕಾಲಕ್ಕೆ ತಕ್ಕ ಹಾಗೆ ಆನೆ, ಕುದುರೆ, ಒಂಟೆ, ಕಾಲುಬಲ ಇರುತಿತ್ತು. ಸಾಧಾರಣವಾಗಿ ದೊರೆಗಳೂ ಅವರ ಮುಖ್ಯ ಸೇನಾಪತಿಗಳೂ ಆನೆಯ ಮೇಲೆ ಅಂಬಾರಿ ಹಾಕಿಕೊಂಡು ಯುದ್ಧಕ್ಕೆ ಹೊರಡುತಿದ್ದರು. ಕತ್ತಿ, ಕಠಾರಿ, ಭರ್ಜಿ, ಅಂಬು, ಬಿಲ್ಲು, ಕವಣೆ, ಕರ್ನಾಟಕ ಕೋವಿ, ಫಿರಂಗಿ, ಹರಪನಹಳ್ಳಿ ಬಾಣ, ಸುರಂಗ, ಸುಮಾರಾಗಿ ಇವುಗಳೇ ಯುದ್ಧದ ಆಯುಧಗಳು. ಕರ್ನಾಟಕ ಕೋವಿ ಉದ್ದವಾಗಿರುತಿತ್ತು. ಅದರ ಕೊಳವಿಯೊಳಕ್ಕೆ ಮದ್ದನ್ನೂ, ಗುಂಡನ್ನೂ ಹಾಕಿ ಗಜಕಡ್ಡಿಯಿಂದ ಜಡತಮಾಡಿ ಅದರ ಕಿವಿಗೆ ರಂಜಕದ ಮದ್ದನ್ನು ಹಾಕಿ ಜಾವಿಗೇ ಬತ್ತಿಯನ್ನು ತೋರಿಸಿ ತುಪಾಕಿಯನ್ನು ಹಾರಿಸುತಿದ್ದರು. ಫಿರಂಗಿಗೂ ಇದೇ ಕ್ರಮ ನಡೆಸುತಿದ್ದರು. ಹರಪನಹಳ್ಳಿ ಬಾಣವೆಂಬುವುದು ಪೂರ್ವದಲ್ಲಿ ಒಂದು ಯುದ್ಧಸಾಮಗ್ರಿಯಾಗಿತ್ತು. ಇದು ಸುಮಾರು ೧॥ ಅಥವಾ ೨ ಅಡಿ ಉದ್ದ ಒಂದಡಿ ಅಗಲ ಒಂದಡಿ ಗಾತ್ರವಾಗಿ ರಟ್ಟು ಬಟ್ಟೆ ಅಥವಾ ಚಕ್ಕಳವನ್ನು ಮೇಲೆ ಹಾಕಿ ಅದರ ಒಂದು ಕೊನೆಗೆ

ಸಣ್ಣ ಭರ್ಜಿ ಅಲಗನ್ನೂ ಬಾವಟವನ್ನೂ ತಗುಲಿಸಿರುತಿದ್ದರು. ಈ ಬಾಣಕ್ಕೆ ರಂಜಕ ಹತ್ತಿಸಿ ಬಿಟ್ಟುಬಿಟ್ಟರೆ ಬಾಣ ರಭಸದಿಂದ ಹೋಗು ವಾಗ ತಾನೇ ಅಲಗು ತಿವಿದುಕೊಂಡುಹೋಗುವುದು, ಮದ್ದು ಸುಟ್ಟು ಕೊಂಡು ಹೋಗುವುದು. ಈ ಬಾಣವನ್ನು ಸಾಲಾಗಿ ಹತ್ತಿಸಿ ಬಿಟ್ಟು ಬಿಟ್ಟರೆ ಎದುರು ಕಕ್ಷಿಯವರ ಸೇನೆ ಎಂಥಾ ಬಲವಾಗಿದ್ದರೂ ಚದರಿಸಿ ಹೋಗುವುದು. ಸಾಧಾರಣವಾಗಿ ಕರ್ನಾಟಕ ಕೋವಿಯಿಂದ ಹೊರ ಡುವ ಗುಂಡು ಬಹುದೂರ ಹೋಗುತಿತ್ತು. ಭೂಮಿಯೊಳಗೇ ಕೊರೆದು ಮದ್ದನ್ನೂ, ಗುಂಡನ್ನೂ ಹಾಕಿ ಬಲವಾಗಿ ನೆಲವನ್ನು ಗಟ್ಟಿಣೆ ಮಾಡಿ ರಂಜಕ ಹತ್ತಿಸುವುದಕ್ಕೆ ಒಂದು ಕಡೆಯಲ್ಲಿ ಮಾತ್ರ ಸ್ಥಳ ಗುರುತು ಮಾಡಿ, ಇರಸಿಕೊಂಡಿರುತಿದ್ದರು. ಇದಕ್ಕೆ ಬೆಂಕಿ ತಗಲಿಸಿದರೆ ಸುತ್ತಲ ನೆಲವೂ, ಕೋಟೆ ಗೋಡೆಯೂ, ಭಾರೀ ಕಟ್ಟಡಗಳೂ ಮೇಲ ಕ್ಕೆ ಹಾರಿ ಬಿದ್ದುಹೋಗುತಿದ್ದವು. ಇದರಿಂದ ಪ್ರಾಣಿ ವಧೆ ಬಹಳವಾ ಗುತಿತ್ತು. ಕುದುರೇ ಸೇನೆಯುವರು ಕತ್ತಿ ಭರ್ಜಿ ಇವುಗಳಲ್ಲಿ ಯುದ್ಧ ಮಾಡುತಿದ್ದರು. ಆನೆಯ ಮೇಲೆ ಕೂತವರು ಸಾಧಾರಣವಾಗಿ ಅಂಬು, ಬಿಲ್ಲು, ತುಪಾಕಿ, ಭರ್ಜಿ ಇವುಗಳಲ್ಲಿ ಕಾದಾಡುತಿದ್ದರು.

ಗುಮ್ಮನಾಯಕನ ಪಾಳಯದ ದೊರೆಗಳು ಸೇನೆಯ ವಿಚಾರದಲ್ಲಿ ಕೆಲವು ಹೊಸ ಏರ್ಪಾಡುಗಳನ್ನು ಮಾಡಿದ್ದರು. ಅವರ ಸೇವಕ ಮಂಡಲಿಗೆ ರಾಣ್ಯ * ವೆಂಬ ಹೆಸರು ಪ್ರಯೋಗಿಸಲ್ಪಟ್ಟದೆ. ಅಲ್ಲಿನ ಪಾಳಯಗಾರರ ವಂಶದಲ್ಲಿ ೨೦ ನೇ ತಲೆಯಾದ ನಾರಸಿಂಹನಾಯಕನ ಆಳಿಕೆಯಲ್ಲಿ ಕೆಲವು ಹೊಸ ಏರ್ಪಾಡನ್ನು ಮಾಡಿದರು. ಅದೇನಂದರೆ :-

ಕೆಲವರನ್ನು ಚಾಕರಿಯಲ್ಲಿ ನಿಲ್ಲಿಸಿಕೊಂಡು ಇನ್ನು ಕೆಲವರನ್ನು ಕೆಲಸದಿಂದ ತೆಗೆದುಬಿಟ್ಟರು. ಹೀಗೆ ಕೆಲಸ ತಪ್ಪಿದವರಿಗೆ ಹಂಸಾಯ ದರ ೧೯ ವರಹಕ್ಕೆ ಒಂದು ಹಣ ಕಮ್ಮಿ ಮಾಡಿ ಕಂದಾಯಕ್ಕೆ ಭೂಮಿ ಕೊಡಿಸಿ, ಅವರಿಗೆ ಮನೆ ತೆರಿಗೆ ಬಿಟ್ಟಿ ಬೇಗಾರಿ ಯಾವುದೂ ಇಲ್ಲದ

* ರಾಣ್ಯವೆಂದರೆ ಸೇನೆ ಎಂದು ಒಂದು ಕಡೆ, ಪೋಲೀಸ್ ಅಥವಾ ಕಂದಾಚಾರದ ಸಿಬ್ಬಂದಿ ಎಂದು ಒಂದು ಕಡೆ ಅರ್ಥವಾಗುವುದು. ಆ ಕಾಲದಲ್ಲಿ ಎರಡು ಚಾಕರಿಯೂ ವಿಂಗಡಿಸಲ್ಪಡದೇ ಒಟ್ಟಿಗೇ ಸೇರಿಕೊಂಡಿರಬಹುದು.

ಹಾಗೆ ನಡಿಸಿಕೊಂಡು ಬರಬೇಕೆಂತಲೂ, ಆ ಜನರು ತಂತಮ್ಮ ಆಯುಧಗಳನ್ನು ಸರಿಯಾಗಿ ಇಟ್ಟುಕೊಂಡಿದ್ದು ಯುದ್ಧಪ್ರಸಕ್ತಿ ಬಿದ್ದಾಗ ಇವರು ಸರ್ಕಾರದ ಕೆಲಸಕ್ಕೆ ಬರಬೇಕೆಂತಲೂ, ಹಾಗೆ ಬಾರದೇ ತಪ್ಪಿದರೂ, ಬರುವುದಕ್ಕೆ ತಡಮಾಡಿದರೂ ಅಂಥವರಿಗೆ ಮರಣದಂಡನೆಯಾಗುವುದೆಂತಲೂ ಏರ್ಪಡಿಸಿದರು. ಇಂಗ್ಲೆಂಡು ಮೊದಲಾದ ಪಾಶ್ಚಾತ್ಯರ ದೇಶದಲ್ಲಿರುವ "ಮಿಲಿಷಿಯ" ಏರ್ಪಾಡನ್ನು ಇದು ಹೋಲುತಿದೆ.

ಯುದ್ಧದಲ್ಲಿ ಸತ್ತುಹೋದ ವೀರರ ಮಕ್ಕಳಿಗೆ ಹಾಲು ಬೆಣ್ಣೆ, ಹಣವೆಂದು ಆ ಹುಡುಗರು ದೊಡ್ಡವರಾಗುವ ತನಕ ಅವರ ಪೋಷಣೆಗೆ ಚಿತ್ರದುರ್ಗದ ಪಾಳಯಗಾರರು ಸರ್ಕಾರದಿಂದ ಕೊಡಿಸುತಿದ್ದರು. ಅಂಥಾ ಹುಡುಗರು ದೊಡ್ಡವರಾದಮೇಲೆ ಅವರಿಗೆ ದಂಡಿನಲ್ಲಿ ಚಾಕರಿ ಕೊಡುತಿದ್ದರು. ಕದನ ನಡೆಯುತ್ತಿರುವಾಗ ಇಂಥಾ ಭಟರು ಓಡಿ ಹೋದರೆ ಅವರನ್ನು ಹಿಡಿಯಿಸಿ ಅವರ ಕಾಲಿಗೆ ಸರಪಣಿಯನ್ನು ಕಟ್ಟಿಸಿ ಯುದ್ಧರಂಗಕ್ಕೆ ಅವರನ್ನು ಹಿಡಿದುಕೊಂಡು ಹೋಗುತಿದ್ದರು. ಶತ್ರುಪಕ್ಷದವರುಇದೇನೆಂದು ಪ್ರಶ್ನೆಮಾಡಿದರೆ, ಇಂಥಾ ಜನರನ್ನು ಬಿಟ್ಟುಬಿಟ್ಟರೆ ಅವರು ಮನುಷ್ಯರನ್ನುಕೊಂದು ತಿಂದುಬಿಡುತಾರೆಂದು ಹೆದರಿಸುತಿದ್ದರು. ಶತ್ರುಸೇನೆಯವರು ಇವರನ್ನು ಕಂಡು ಭಯದಿಂದ ಓಡಿಹೋಗುತಲೂ ಇದ್ದರು.

## (*b*) ಕೋಟೆ ಕೊತ್ತಲಗಳು.

ಸಾಧಾರಣವಾಗಿ ಪಾಳಯಗಾರರೆಲ್ಲರೂ ತಮ್ಮ ರಾಜಧಾನಿಯನ್ನು ದುರ್ಗಮವಾದ ಒಂದು ಗುಡ್ಡ ಅಥವಾ ಬೆಟ್ಟದಮೇಲೆ ಕಟ್ಟಿ ಕೊಂಡಿರುತಿದ್ದರು. ಮತ್ತು ಅಂಥಾ ಬೆಟ್ಟದಮೇಲೆಯೂ, ಕೆಳಗೂ, ಕೋಟೆ ಕೊತ್ತಳಗಳನ್ನು ಬಲವಾಗಿ ಕಟ್ಟಿಸಿ, ಶತ್ರುಗಳ ಆಗಮನಕ್ಕೆ ಬಹಳ ಕಷ್ಟವಾಗುವಂತೆ ಮಾಡುತಿದ್ದರು. ಈ ಪಾಳಯಗಾರರು ಅಲ್ಲಲ್ಲಿ ಕಟ್ಟಿಸಿರುವ ಕೋಟೆ ಎಲ್ಲಾ ಕಡೆಯಲ್ಲಿಯೂ ಒಂದೇ ರೀತಿಯಾಗಿಲ್ಲ. ಚಿತ್ರದುರ್ಗದ ಬೆಟ್ಟದ ಮೇಲೂ, ಕೆಳಗೂ ಕಟ್ಟಿರುವ ಗೋಡೆ ವಿಚಿತ್ರವಾಗಿದೆ. ಕೆಳಗಡೆ ಊರಸುತ್ತಲೂ ಇರುವ ಕೋಟೆ ಗೋಡೆ ಬುಡದಿಂದ ಮೇಲಿನವರೆಗೆ ಎಲ್ಲಿ ನೋಡಿದರೂ ಗೇದಿರತಕ್ಕ ಎಂಟೇ ಎಂಟು ಕಲ್ಲು

ಹಾಕಿ ಕಟ್ಟಿದಾರೆ. ಒಳಕ್ಕೆ ಹೋಗಿ ನೋಡಿದರೆ ಬೆಟ್ಟದ ಬುಡದಲ್ಲಿ ಸುತ್ತಲೂ ಬಲವಾದ ಕಲ್ಲುಗೋಡೆ ಕೊತ್ತಲ ಸಹಾ ಇದೆ. ಬೆಟ್ಟದ ಮೇಲೆ ಸ್ವಲ್ಪ ನಿಂತುಕೊಳ್ಳುವುದಕ್ಕೆ ಸ್ಥಳ ದೊರೆಯುವಂಥಾ ಎಡೆಯಲ್ಲೆಲ್ಲಾ ಬಲವಾದ ಬತೇರಿಗಳನ್ನು ಬಹು ಚಮತ್ಕಾರವಾಗಿ ಸುತ್ತಲೂ ಕಟ್ಟಿದಾರೆ. ಅಂಥಾ ಕೋಟೆ ಸುತ್ತುಮುತ್ತಲೂ ಇಂಥಾ ಬತೇರಿ ಎಷ್ಟಿದೆಯೋ ಗೊತ್ತಾಗುವುದಿಲ್ಲ. ಎಲ್ಲೆಲ್ಲಿ ಹೇಗೆ ಹೇಗೆ ಸಂದರ್ಭ ದೊರೆಯಿತೋ ಅಲ್ಲೆಲ್ಲಾ ಆಯಾ ಸ್ಥಳಗಳಲ್ಲಿದ್ದ ಕಲ್ಲುಗಳನ್ನೇ ಹಾಕಿ ಕೋಟೆ ಕಟ್ಟಿದಾರೆ. ಅಷ್ಟು ಬಲವಾಗಿ ದುರ್ಗಮವಾಗಿರುವ ಕೋಟೆ ದಕ್ಷಿಣ ದೇಶದಲ್ಲಿ ಇನ್ನು ಯಾವುದು ಇದೆಯೋ ಹೇಳಲು ಅಸಾಧ್ಯ.

ಈ ಕೋಟೆಯನ್ನು ಸರಿಯಾಗಿ ವಿವರಿಸಬೇಕಾದರೆ ಅದೇ ಒಂದು ಪುಸ್ತಕವಾಗುವುದು. ಸುತ್ತಲೂ ಬೆಟ್ಟವೇ ಗೋಡೆಯಾಗಿದೆ. ಮಧ್ಯೆ ಹಳ್ಳವಾಗಿ ಯಾವ ಶತ್ರು ಬಂದರೂ, ಎಷ್ಟು ಫಿರಂಗಿ ಹೊಡೆದರೂ ನಿರುಪಾಧಿಕವಾಗಿರಬಹುದಾದಂಥಾ ಸ್ಥಳಗಳು ಅಲ್ಲಿ ಎಷ್ಟೋ ಇವೆ. ದೊಡ್ಡ ಸೇನೆಗೆ ೧೨ ವರ್ಷ ಬಳಸುವುದಕ್ಕೂ ಸಾಕಾಗುವಷ್ಟು ಧಾನ್ಯವನ್ನು ತುಂಬುವಂಥಾ ಕಲ್ಲ ಕಣಜಗಳೂ, ಅಲ್ಲಲ್ಲಿ ಅಶೋಷ್ಯವಾಗಿರುವ ಜಲವತಿಯೂ ತಪ್ಪಿಸಿಕೊಂಡು ಹೋಗುವುದಕ್ಕೆ ಅನುಕೂಲವಾದ ಕಳ್ಳದಾರಿಗಳೂ ಎಷ್ಟೋ ಇವೆ.

ನಾನು ೨೦ ವರ್ಷಕ್ಕೆ ಮುಂಚೆ ಚಿತ್ರದುರ್ಗದಲ್ಲಿದ್ದೆ. ಆ ಸ್ಥಳದ ಉಳಿದ ಸಂಗತಿಯನ್ನೆಲ್ಲಾ ಬಿಟ್ಟು ಒಂದು ಮುಖ್ಯವಾದ ಅಂಶವನ್ನು ಅರಿಕೆ ಮಾಡುತೇನೆ. ಆ ಕಾಲದಲ್ಲಿ ಫಾರೆಸ್ಟು ಕನ್ಸರ್ವೇಟರಾಗಿದ್ದ ಪಿಗಟ್ಟು ಸಾಹೇಬನೆಂಬಾತನು ಚಿತ್ರದುರ್ಗಕ್ಕೆ ಬಂದು ಆ ಬೆಟ್ಟವನ್ನು ನೋಡುವುದಕ್ಕಾಗಿ ಹೊರಟು, ತನ್ನ ಸಂಗಡ ನಾನೂ ಹೊರಡಬೇಕೆಂದು ಅಪೇಕ್ಷಿಸಿದನು. ನಾನೂ ಇನ್ನೊಬ್ಬ ಮಿತ್ರನೂ ಹೋದೆವು. ಆ ಸಾಹೇಬನು ಬೆಟ್ಟದ ಮೇಲೆ ಮುಖ್ಯವಾದ ಸ್ಥಳಗಳನ್ನೂ, ಆ ಕೋಟೆಯ ಅಂದಾಯತವನ್ನೂ, ಕೋಟೆಯ ಬತೇರಿಗಳು, ಅಲ್ಲಿರುವ ಧಾನ್ಯದ ಕಣಜಗಳು, ಮದ್ದನ್ನು ಮಾಡುವ ಯಂತ್ರ ಹಾಕಿದ ಸ್ಥಳ, ಅದರ ಏರ್ಪಾಡು, ಸೀಸ ಮತ್ತು ಕಬ್ಬಿಣದ ಗುಂಡುಗಳನ್ನು ಮಾಡುವ

ಏರ್ಪಾಡುಗಳು, ಅಲ್ಲಿನ ಜಲವಸತಿ, ತಪ್ಪಿಸಿಕೊಂಡು ಹೋಗಲು ಇರುವ ಕಳ್ಳದಾರಿಗಳು, ವನಕೆಕಂಡಿಬಾಗಿಲು ಮೊದಲಾದ ವಿಶಿಷ್ಟ ಸ್ಥಳ ವನ್ನೂ ನೋಡಿ ಆ ಬೆಟ್ಟದ ಕುಂಭಿಯ ಮೇಲೆ ಹೋಗಿ ನಿಂತುಕೊಂಡು ಬೈನಾಕ್ಯುಲರ್ ಎಂಬ ದುರ್ಬೀನನ್ನು ಹಾಕಿಕೊಂಡು ಸುತ್ತಲೂ ನೋಡುತಾ ನನ್ನನ್ನು ಕುರಿತು-ನಮ್ಮನ್ನು ಇಂಡಿಯಾದಿಂದಾ ಯಾವಾಗ ಓಡಿನಿಬಿಡುತೀರಿ ? ಎಂದು ಕೇಳಿದನು. ಅದಕ್ಕೆ ನಾನು-ಅಯ್ಯೋ ಅಂಥಾ ಅಸಾಧ್ಯವಾದ ಸಂಗತಿ ನಮ್ಮ ಮನಸ್ಸಿನಲ್ಲಿ ಇದುವರೆಗೂ ಹೊಳೆದದ್ದೇ ಇಲ್ಲ ಎಂದೆ. ಆಗ-ಇಂಥಾ ಕೋಟೆ, ಇಂಥಾ ಸ್ಥಳ ನಿಮಗಿರುವಾಗ ಯಾವತ್ತಾದರೂ ಇಂಡಿಯಾದಿಂದ ನಮ್ಮನ್ನು ಓಡಿಸಿಬಿಡುವುದು ಸಾಧ್ಯ ಎಂಬದಾಗಿ ಆ ಸಾಹೇಬನು ಹೇಳಿದನು.

ಇಂಥಾ ಕೋಟೆಯನ್ನು ಫ್ರೆಂಚ್ ಎಂಜನೀರುಗಳು ಕಟ್ಟಿಸಿರಬಹುದೆನ್ನುವುದಕ್ಕೆ ಸಂಶಯವೇ ಇಲ್ಲ. ಫ್ರೆಂಚ್ ಜನರ ಜಾರ್ಜ್ ಎಂಬ ಶಿಲ್ಪಿಯು ಚಿತ್ರದುರ್ಗದಲ್ಲಿದ್ದು ಅನೇಕ ಕೆಲಸಗಳನ್ನು ಮಾಡಿಸಿದನೆಂಬದಾಗಿ ಹಳೇ ಗ್ರಂಥಗಳಲ್ಲಿ ಬರೆದಿದೆ. ಕೆಲವು ಗ್ರಾಮಗಳಿಗೆ ಅವನ ಹೆಸರನ್ನೇ ಇಟ್ಟಿರುವ ಹಾಗೆ ತೋರುವುದು. ಚಿತ್ರದುರ್ಗದ ತಾಲ್ಲೂಕು "ಜಾನಕೊಂಡ" ಹೊಸದುರ್ಗದ ತಾಲ್ಲೂಕು "ಜಾನಕಲ್ಲು" ಎಂದು ಈಗಲೂ ಗ್ರಾಮಗಳಿವೆ.

(c) ಸೇನೆ.

ಈ ಪಾಳಯಗಾರರಿಗೆ ಯುದ್ಧ ಪ್ರಸಕ್ತಿ ಯಾವಾಗಲೂ ಇದ್ದ ಕಾರಣ, ಇವರು ಯುದ್ಧಕ್ಕೆ ತಯಾರಾಗಿ ಸೇನೆಯನ್ನು ಯಾವಾಗಲೂ ಇಟ್ಟೇ ಇರಬೇಕಾಗಿತ್ತು ಎಂದು ಹಿಂದೆ ಕಾಣಿಸಿದೆ. ಚಿತ್ರದುರ್ಗದ ಸೇನೆಗೆ ಫ್ರೆಂಚು ಆಧಿಕಾರಿಗಳ ತರಬಿಯತ್ತು ಇದ್ದಹಾಗೆ ತೋರುತಿದೆ. ಧರ್ಮ ಕಹಳೆ ಎಂದು ಒಂದು ಬಗೆಯಾಗಿ ಕೊಂಬನ್ನು ಊದಿಸಿದರೆ ಅದು ಯುದ್ಧ ನಿಲ್ಲುವುದಕ್ಕೆ ಸೂಚನೆ ; ಕೂಚು ನಗಾರಿ ಎಂದು ಒಂದು ಬಗೆಯಾಗಿ ನಗಾರಿಯನ್ನು ಬಡಿಯಿಸಿದರೆ ಮುಂದಕ್ಕೆ ಹೊರಡಬೇಕೆಂದು ಸೂಚನೆ ; ಹೀಗೆ ಚಿತ್ರದುರ್ಗದ ಸೇನೆಯಲ್ಲಿ ತರಬಿಯತ್ತಿನ ಸೂಚನೆಗಳಿದ್ದವು. "ನ್ಯಾಪ್ ಚಾಕ್" (knapsack) ಎಂಬ ಚಕ್ಕಳದ ಚೀಲಗಳಲ್ಲಿ ಸಾಮಾನನ್ನು ಇಟ್ಟುಕೊಂಡು ಸಿಪಾಯಿಗಳು ಹೊರಡುತಿದ್ದರೆಂದು ಹಳೇ ಗ್ರಂಥದಲ್ಲಿ

ಬರೆದಿದೆ. ಚಿತ್ರದುರ್ಗದವರಲ್ಲಿ ಆನೆ, ಕುದುರೆ, ಕಾಲಾಳು ಸೇರಿ ೫೦,೦೦೦ ಸೇನೆ ಇದ್ದ ಹಾಗೆ ತಿಳಿಯಬರುತ್ತಿದೆ. ಗುಮ್ಮನಾಯಕನ ಪಾಳಯದವರಲ್ಲಿ ೫-೬ ಸಾವಿರ ದಂಡು ಇದ್ದಹಾಗೆ ಸೂಚನೆ ಇದೆ. ಯುದ್ಧಕಾಲಗಳಲ್ಲಿ ಇನ್ನೂ ಹೆಚ್ಚಾದ ಸೇನೆಯನ್ನು ಇಡುತ್ತಿದ್ದರು. ತಳಕು ದೊಡ್ಡೇರಿ ಬಳಿಯಲ್ಲಿ ಚಿತ್ರದುರ್ಗದವರಿಗೂ ಮೊಗಲಾಯರು ಮತ್ತು ಇತರ ಪಾಳಯಗಾರರು ಸಹಾ ಒಟ್ಟು ಸೇರಿ ಕೊಂಡ ಸೇನೆಯವರಿಗೂ ಕದನ ಜರುಗಿದಾಗ ಅಡಿಗೆ ಮಾಡಿಕೊಳ್ಳಲು ವ್ಯವಧಾನವಿರುವುದಿಲ್ಲವೆಂದು ರೊಟ್ಟಿಯನ್ನು ಮಾಡಿಸಿ ಅನೇಕ ಹೇರುಗಳನ್ನು ಎತ್ತಿನ ಮೇಲೆ ಕಳುಹಿಸುತಿದ್ದರು. ಸೇನೆಯವರಿಗೆ ಸಂಬಳ ಕೊಡಲಿಲ್ಲವೆಂಬ ದೂರು ಈ ಪಾಳಯಗಾರರ ದಂಡಿನಲ್ಲಿದ್ದ ಹಾಗೆ ಕಂಡುಬರಲಿಲ್ಲ. ಯುದ್ಧಕಾಲಗಳಲ್ಲಿ ಭಟರಿಗೂ, ಸೇನಾನಾಯಕರಿಗೂ ಚಿತ್ರದುರ್ಗದವರು ಕೊಡುತಾ ಇದ್ದ ಇನಾಮು ಜನರಿಗೆ ಹೆಚ್ಚಾದ ಧೈರ್ಯವನ್ನೂ, ಮುಂದರಿದೇನೆಂಬ ಮನಸ್ಸನ್ನೂ ಹುಟ್ಟಿಸುತಲಿತ್ತು. ಶತ್ರುಗಳ ಒಂದು ತಲೆ ತಂದವರಿಗೆ ೧ˉ, ೨ˉ, ೫ˉ ವರಹಾ ಈ ಪ್ರಕಾರ ಸಮಯ ಬಿದ್ದಹಾಗೆ ಪ್ರೋತ್ಸಾಹ ದ್ರವ್ಯ ಕೊಡುತಿದ್ದರು. ಇಂಥಾ ಉತ್ತೇಜನಕ್ಕೆ ಆಶೆ ಬಿದ್ದು ಸ್ವದೇಶದ ವಿಶಿಷ್ಟ ಬೇಡರೂ ಅಲ್ಲದೆ ದೇಶಾಂತರದಿಂದ ಮರಾಟೆಯವರು, ರಜಪೂತರು, ರೋಹಿಲೆಯವರು, ತುರುಕರು, ಪೂರಭಯ್ಯಾ ಜನರು ಬಂದು ಬಂದು ದುರ್ಗದ ಸೇನೆಗೆ ಸೇರಿಕೊಳ್ಳುತಿದ್ದರು.

(*d*) ನಾವೆ.

ಪಾರ್ಸಿಸ್ಥಾನ, ಅರಬಸ್ಥಾನ, ತುರ್ಕಿ, ಮಿಸರ್, ಪೋರ್ಟುಗಲ್, ಈ ಪ್ರಾಂತಗಳಿಂದ ವ್ಯಾಪಾರಕ್ಕೂ, ಕಳ್ಳತನಕ್ಕೂ ಜೀವನ ಮಾಡಿಕೊಳ್ಳುವುದಕ್ಕೂ ಪಶ್ಚಿಮ ಸಮುದ್ರ ತೀರದಲ್ಲಿ ಅನ್ಯದೇಶೀಯರು ಬಂದು ಇಳಿಯುತಾ ಆಗಾಗ್ಗೆ ಹಾವಳಿ ಮಾಡುತಾ ಇದ್ದರು. ಇವರ ಹಾವಳಿಯನ್ನು ನಿರೋಧಿಸುವುದಕ್ಕಾಗಿ ಇಕ್ಕೇರಿ ಪಾಳಯಗಾರರು, ಜಾಮೋರಿನ್ ಮೊದಲಾದ ದೊರೆಗಳು ಹಡಗಿನ ದಂಡನ್ನು ಇಟ್ಟುಕೊಂಡಿದ್ದರು. ಇಷ್ಟು ಹೊರತು ಸಮುದ್ರದ ಮೇಲೆ ಭಾರಿಯಾಗಿ ಯುದ್ಧಮಾಡುವ ಪ್ರಮೇಯ ಆ ಕಾಲದಲ್ಲಿ ಕಡಮೆಯಾಗಿದ್ದ ಕಾರಣ, ಯುದ್ಧದ ಹಡಗುಗಳನ್ನು ಬಲವಾಗಿ ಪಾಳಯಗಾರರು ಯಾರೂ ಇಟ್ಟಿರಲಿಲ್ಲ.

೫. ರಾಜ್ಯಭಾರಕ್ರಮದಲ್ಲಿ ಮೊದಲನೇ ವಿಷಯವು ಹಸ್ತಾಂತರದ ಸುವರ್ಣಾದಾಯವಾಗಿದೆ. ಇದರಲ್ಲಿ ಭೂಮಿಯ ಕಂದಾಯವೇ ಮುಖ್ಯವಾದ್ದು. ಭೂಮಿಯ ಮೇಲಿನ ಕಂದಾಯವನ್ನು ಬಹು ನ್ಯಾಯವಾಗಿಯೂ ನಿಷ್ಪಕ್ಷಪಾತವಾಗಿಯೂ ನಿರಖು ಮಾಡಿದವನು ಇಕ್ಕೇರಿ ಶಿವಪ್ಪನಾಯಕ. ಈ ದೊರೆಯು ಫಸಲು ಅಜಮಾಯಿಷಿಗೆ ಮಾಡಿದ ಏರ್ಪಾಡೂ ಅದರ ಮೇಲೆ ನಿಗದಿ ಮಾಡಿದ ಸಿಸ್ತೂ ಬಹು ನಿಷ್ಕರ್ಷೆಯಾದ್ದು. ಈ ಭಾಗದಲ್ಲಿ ಇಂಗ್ಲಿಷ್ ಸರಕಾರದವರು ಕೂಡ ನೋಡಿ ಇವರ ಏರ್ಪಾಡನ್ನು ಶ್ಲಾಘನೆಮಾಡುತಿದಾರೆ. ಗದ್ದೆ ಬೆದ್ದಲು ಅಥವಾ ನೀರಾರಂಬ ಕಾಡಾರಂಬವನ್ನು ತಾರತಮ್ಯಾನುಸಾರ ನೋಡಿ ಇದರ ಉತ್ಪತ್ತಿಯ ಮೇಲೆ ಕಂದಾಯವನ್ನು ನಿಗದಿ ಮಾಡಿದ್ದರು. ಮತ್ತು ಮಾರ್ಗ ಸುಂಕ, ಸ್ಥಳ ಸುಂಕ, ಹುಲ್ಲು ಬನ್ನಿ, ಇಟ್ಟಿಗೆ ಗುತ್ತಿಗೆ, ಎಲೆಮನೆ, ತಂಬಾಕು, ಗಾಂಜ, ಷರಾಬು, ಉಪ್ಪಿನ ಮೋಳೆ, ಆಚಾರ ಕಾಣಿಕೆ, ಇವೇ ಮೊದಲಾಗಿ ಸರ್ಕಾರಕ್ಕೆ ಆದಾಯದ ಬಾಬುಗಳಾಗಿದ್ದವು. ಸಾಧಾರಣವಾಗಿ ಎಲ್ಲಾ ಪಾಳಯಗಾರರೂ ಈ ಆದಾಯದ ಬಾಬುಗಳನ್ನು ಇಟ್ಟುಕೊಂಡಿದ್ದರು. ಚಿತ್ರದುರ್ಗದ ಭರಮಪ್ಪನಾಯಕನ ಆಳಿಕೆಯಲ್ಲಿ ಇನ್ನೊಂದು ಹೆಚ್ಚುಗಟ್ಟಳೆ ಆದಾಯವನ್ನು ಏರ್ಪಡಿಸಿದ್ದರು. ಅದು ಹೊಸ ರೀತಿಯಾಗಿರುವುದರಿಂದ ಅದನ್ನು ಇಲ್ಲಿ ಬರೆದಿದೇನೆ.

ರಾಜ್ಯಭಾರ ಕ್ರಮ.

ವರುಷಕ್ಕೆ ಒಂದು ಸಾರಿ ರಾಜಕುಟುಂಬದವರೆಲ್ಲಾ ಬೇವಿನ ಉಡಿಗೆಯನ್ನುಟ್ಟು ಉಚ್ಚಂಗಮ್ಮ, ಕಾಟಮ್ಮ, ಈ ದೇವರುಗಳ ಸೇವೆಗೆ ಹೊರಡುತಿದ್ದರು. ಆಗ—

(೧) ಗ್ರಾಮದ ತಳವಾರರು ಗ್ರಾಮ ೧ಕ್ಕೆ ೧ ಟಗರು, ೧ ತುಪ್ಪದ ಗುಂಬ ಸಹಾ ತರಬೇಕು.

(೨) ದೊರೆಯು ಜೋಗೀ ವೇಷ ಹಾಕಿಕೊಂಡು ಹೊರಟಾಗ ಪ್ರತಿ ಗ್ರಾಮದ ಗೌಡನೂ ಗ್ರಾಮ ೧ಕ್ಕೆ ೧॥ ವರಹ ಜೋಗಿ ಕಾಣಿಕೆಯನ್ನು ಹಾಕಬೇಕು.

(೩) ಭಾದ್ರಪದ ಮಾಸದಲ್ಲಿ ವಿನಾಯಕ ಚೌತಿ ದಿವಸ ಪ್ರತಿ

ಯೊಬ್ಬ ಮಠದ ಅಯ್ಯನೂ ಕರ್ಜಿಕಾಯಿ ಮಾಡಿ ತಂದು ಅರಮನೆ ಬೊಕ್ಕಸಕ್ಕೆ ಒಪ್ಪಿಸಬೇಕು.

(೪) ಜಾಡರು ಮಗ್ಗ ೧ ಕ್ಕೆ ಒಂದು ನೂಲು ಹಗ್ಗದ ಪ್ರಕಾರ ತಂದು ಪ್ರತಿ ವರುಷವೂ ಅರಮನೆಗೆ ಒಪ್ಪಿಸಬೇಕು.

(೫) ಗ್ರಾಮಾಂತರದಲ್ಲಿರುವ ಕೆಲಸಿಗಳು ತಿಂಗಳಿಗೊಂದು ಸಾರಿ ದುರ್ಗಕ್ಕೆ ಬಂದು ಸರದಿ ಮೇರೆ ಖಾಸಾ ಕುದುರೆಗಳ ಮೈಕೂದಲನ್ನೂ ಅಯಾಲನ್ನೂ ಕತ್ತರಿಸಬೇಕು.

(೬) ಗ್ರಾಮದ ಬೇಗಾರರು ಖಾಸಾ ಕುದುರೆಗೆ ದಿನ ೧ಕ್ಕೆ ೧೦ ಹೊರೆ ಹುಲ್ಲಿನ ಪ್ರಕಾರ ಸರದಿ ಮೇರೆ ತರಬೇಕು.

(೭) ಗ್ರಾಮ ೧ ಕ್ಕೆ ಎರಡಾಳು ತಿಂಗಳಿಗೆ ಒಂದು ಸಾರಿ ಬಂದು ದುರ್ಗದಲ್ಲಿ ಕರಡ ಹುಲ್ಲನ್ನು ಕುಯಿದು ಬಣವೆ ಹಾಕಬೇಕು.

ಈ ಪ್ರಕಾರ ಏರ್ಪಾಡು ಮಾಡಿದ್ದರು.

ದಂಡಿನವರು ದೇಶಗಳ ಮೇಲೆ ಲೂಟಿಮಾಡಿದ್ದೆಲ್ಲಾ ಸರ್ಕಾರಕ್ಕೇ ಸೇರುತಿತ್ತು ಎಂದು ತೋರುತಿದೆ. ಚಿತ್ರದುರ್ಗದವರ ಆದಾಯ ವರುಷ ೧ಕ್ಕೆ ೫೦ ಲಕ್ಷ ರೂಪಾಯಿಗೆ ಹೆಚ್ಚಾಗಬಹುದು.

(*a*) ಮುಖ್ಯವಾದ ಅಧಿಕಾರ ಸ್ಥಾನವು ಪಾಳಯಗಾರನೇ ಆಗಿರುತಿದ್ದನು. ಆದರೆ ಈ ಪಾಳಯಗಾರರೆಲ್ಲಾ ತಮ್ಮ ದೇಶದ ಜನರಲ್ಲಿ ಬುದ್ಧಿವಂತರಾಗಿಯೂ, ಪ್ರಮುಖರಾಗಿಯೂ ಇದ್ದವರನ್ನು ಮಂತ್ರಾಲೋಚನೆಗೆ ಇರಿಸಿಕೊಂಡಿರುತಿದ್ದರು. ಯಾವ ಹೊಸ ಸಂಗತಿ ಯಾವ ಘನವಾದ ವಿಚಾರ ಬಂದಾಗ್ಯೂ ಮೇಲೆ ಕಂಡ ಪ್ರಮುಖರನ್ನೂ ದೇಶದಲ್ಲಿದ್ದ ಪ್ರಮುಖರನ್ನೂ ಸಭೆ ಸೇರಿಸಿ ಆಲೋಚನೆ ಮಾಡುತಿದ್ದರು. ಮಂತ್ರಾಲೋಚನ ಸಭೆಯ ಮುಖಂಡರಿಗೆ ಮುಸಲ್ಮಾನರ ಕಾಲದಲ್ಲಿ ಮುಸಾಹೇಬರು ಅಥವಾ ಮನಸಬ್‌ದಾರರು ಎಂದು ಹೆಸರು. ಈ ಸಭೆಗೆ ತಮ್ಮ ಸಮೀಪ ಬಂಧುಗಳನ್ನು ಸೇರಿಸತಕ್ಕ ವಾಡಿಕೆ ಇದ್ದಹಾಗೆ ಕಂಡು ಬರಲಿಲ್ಲ. ಒಂದೊಂದು ಬಾಬಿಗೂ ಮುಖ್ಯಾಧಿಕಾರಿಗಳನ್ನು ನೇಮಿಸಿಕೊಂಡು ಅಧಿಕಾರವನ್ನು ನಡೆಸುತಿದ್ದರು. ಪಾಳಯಗಾರನು

ಮೇಲಿನ ಮುಖ್ಯಾಧಿಕಾರ

ಬೆಳಗಿನ ಹೊತ್ತು ಸ್ವತಃ ಕೂತು ದರ್ಬಾರು ಮಾಡುತಾ ಅಪ್ಪಣೆಗಳನ್ನು ಹೇಳುತಿದ್ದನು. ಜನರ ದೂರನ್ನು ಸ್ವತಃ ಕೇಳುತಿದ್ದನು.

ಗಡಿಗಳ ಅಧಿಕಾರ.

(*b*) ರಾಜಧಾನಿಯನ್ನು ಬಿಟ್ಟು ಹೊರಗಿನ ಗಡಿ ದುರ್ಗಗಳಲ್ಲಿ ಅಧಿಕಾರ ಮಾಡಿಕೊಂಡಿರಲು ಯೋಗ್ಯರಾದಂಥಾ ರಾಜಬಂಧುಗಳನ್ನೂ, ಇತರರನ್ನೂ ನೇಮಿಸುತಿದ್ದರು. ಭಾರಿ ವಿಷಯಗಳಲ್ಲಿ ದೊರೆಯ ಅಪ್ಪಣೆಯನ್ನು ಪಡೆದು, ಈ ಅಧಿಕಾರಿಗಳು ಕಾರ್ಯಗಳನ್ನು ನಡಿಸುತಿದ್ದರು. ಸೀಮೆಯನ್ನೆಲ್ಲಾ ಹೋಬಳಿಗಳೆಂದು ವಿಂಗಡಿಸಿ ಬೇರೇ ಬೇರೇ ಅಧಿಕಾರವನ್ನು ನಡಿಸುತಿದ್ದರು.

ವಿಚಾರಣೆ ಅಧಿಕಾರ.

(*c*) ಅಪರಾಧ ಮಾಡಿದವರ ವಿಷಯ (ಕ್ರಿಮಿನಲ್ ಬಾಬು) ಸಾಲ ಸೋಲ ಕೊಡಬೇಕಾದ ಫಿರ್ಯಾದುಗಳು (ಸಿವಿಲ್ ಬಾಬು) ಇವುಗಳಿಗೆ ಬೇರೆ ಅಧಿಕಾರ ಸ್ಥಾನವಿರಲಿಲ್ಲ. ಇಂಥಾ ವಿಷಯಗಳು ಭಾರಿಯಾಗಿದ್ದರೆ ಎಲ್ಲಾ ದೊರೆಯೇ ಸ್ವತಃ ಕೂತು ವಿಚಾರಣೇ ಮಾಡುತಿದ್ದನು; ಸಾಧಾರಣವಾಗಿದ್ದರೆ ಆಯಾ ಸ್ಥಳಗಳಲ್ಲಿರುವ ಚಿಕ್ಕ ಅಧಿಕಾರಿಗಳೇ ಫೈಸಲು ಮಾಡುತಿದ್ದರು. ಗುಮ್ಮನಾಯಕನ ಪಾಳಯದ ದೊರೆಗಳಲ್ಲಿ ೨೦ ನೇ ತಲೆಯವನಾದ ನಾರಸಿಂಹನಾಯಕನು ಇಲಾಖೆಗಳನ್ನು ವಿಂಗಡಿಸಿದ್ದ ಹಾಗೆ ಸ್ಪಷ್ಟವಾಗಿದೆ.

ಇಲಾಖೆಗಳು.

(೧) ಭೂಮಿ ಕಂದಾಯ ಮೊದಲಾದ್ದು, ಅರಮನೆ ಸ್ವಂತ ಭೂಮಿಗಳ ಆದಾಯವೆಚ್ಚ, ಬಟಾಯಿ ಸಾಗುವಳಿಗೆ ಭೂಮಿ ಕೊಡುವುದು, ಇವುಗಳನ್ನು ನೋಡಿಕೊಳ್ಳಲು ಅಟ್ಟವಣೆ ಚಾವಡಿ,

(೨) ಸರ್ಕಾರಕ್ಕೆ ಬಂದ ಹಣವನ್ನು ಇಟ್ಟುಕೊಂಡು ಲೆಕ್ಕಾ ಬರೆದು ಜಮಾ ಖರ್ಚುಗಳನ್ನು ನಡಿಸತಕ್ಕ ಬೊಕ್ಕಸದ ಚಾವಡಿ,

(೩) ಯುದ್ಧ, ಸರ್ಕಾರದ ಬಂದೋಬಸ್ತು, ಗಡಿ ದುರ್ಗಗಳ ಬಂದೋಬಸ್ತು ಮೊದಲಾದ್ದನ್ನು ನೋಡಿಕೊಳ್ಳಲು ರಾಣ್ಯಾದ ಚಾವಡಿ,

(೪) ಸರ್ಕಾರದ ದನಗಳ ಪೋಷಣೆ ಮೊದಲಾದ್ದನ್ನು ನೋಡಿಕೊಳ್ಳಲು ಗೋವಿನ ಚಾವಡಿ,

(೫) ಗ್ರಾಮಾಂತರಗಳಲ್ಲಿ ಸಂಚಾರ ಮಾಡಿಕೊಳ್ಳುತಾ ಜವಳಿ, ಕಂಬಳಿ, ರಸವರ್ಗದ ತೂಕದ ಸಾಮಾನು, ವೀಳಯದೆಲೆ, ಅಡಕೆ, ಜೀರಿಗೆ, ಮೆಣಸು, ಹೊಗೇಸೊಪ್ಪು, ಭಂಗಿ, ಸೇಂದಿ, ಕೆಲವು ಗಂಧಿಗರ ಅಂಗಡಿ ಸರಕುಗಳು ಇವುಗಳ ಮೇಲೆ ಸುಂಕಾ ವಸೂಲ್ಮಾಡಲು ಸುಂಕದ ಚಾವಡಿ, ಹೀಗೆ ಇಲಾಖೆ ಏರ್ಪಾಡಾಗಿತ್ತು.

ಚಾಕರರಲ್ಲಿ ಕೆಲವರಿಗೆ ನಗದು ಸಂಬಳ, ಕೆಲವರಿಗೆ ಅರ್ಧ ಸಂಬಳ ಅರ್ಧ ದವಸ, ಕೆಲವರಿಗೆ ಅರ್ಧ ಭೂಮಿಕಂದಾಯದಲ್ಲಿ ಉತ್ತಾರ; ದೊಡ್ಡ ಅಧಿಕಾರಿಗಳಿಗೆ ಉಂಬಳಿ ಇನಾಮತಿ, ನಗದು ಸಂಬಳ; ರಾಣ್ಯದವರು, ಕಾಮಾಟಗಳು, ಊಳಿಗದವರು ಇವರಿಗೆ ತಿಂಗಳಿಗೆ ೨೦ ಹಣದಿಂದ ೨೦ ವರಹಾದವರೆಗೂ, ದೊಡ್ಡ ಅಧಿಕಾರಿಗಳಿಗೆ ೩ ವರಪಾದಿಂದ ೧೨೦ ವರಹಾದವರೆಗೂ ಸಲ್ಲುತ್ತಿತ್ತು. ನಗದು ಸಂಬಳದವರಿಗೆ ೩ ತಿಂಗಳಿಗೆ ಒಂದು ಸಾರಿ ಬಟವಾಡೆಯಾಗುತಿತ್ತು. ಅಟ್ಟವಣೆ ಚಾವಡಿಯಲ್ಲಿ ಕೆಲವರಿಗೂ ಬೊಕ್ಕಸದ ಚಾವಡಿಯಲ್ಲಿ ಕೆಲವರಿಗೂ ಬಟವಾಡೆಯಾಗುತಾ ಇತ್ತು.

ಗ್ರಾಮಾಧಿಕಾರಿಗಳು.

ಗ್ರಾಮಗಳಲ್ಲಿ ಸೇಕದಾರ, ಶಾನುಭೋಗ, ಗೌಡ, ಬಾರಾಬಲೂತಿಯವರು ಇವರೆಲ್ಲಾ ಈಗಿನಂತೆಯೇ ಇದ್ದರು. ಸೇಕದಾರ ಶಾನುಭೋಗರುಗಳಿಗೆ ನಗದು ಸಂಬಳವೂ, ಗ್ರಾಮವನ್ನು ಆಬಾದು ಮಾಡಿದ ಶಾನುಭೋಗ ಸಂತತಿಯವರಿಗೆ ಕೆಲವು ಇನಾಮತಿ ಭೂಮಿಗಳೂ ಸಹಾ ಕೊಡುತಿದ್ದರು. ಇದೂ ಅಲ್ಲದೆ ಶಾನುಭೋಗ ಮೊದಲಾಗಿ ಬಾರಾಬಲೂತಿ ಜನರಿಗೆ ಸರ್ಕಾರದ ದವಸಗಳಲ್ಲಿ ಆಯಾ ಗ್ರಾಮದ ಕುಳದ ಆದಾಯದ ಮುನಾಸಬಿನಂತೆ ವಾರದ ದವಸದ ಗುಡ್ಡೆಯಲ್ಲಿ ಕಂಡಗ ೧ ಕ್ಕೆ ೧ ಕೊಳಗದಂತೆಯೂ, ಕೆಲವು ಗ್ರಾಮಗಳಲ್ಲಿ ಕುಳ ೧ಕ್ಕೆ ೧ ಕೊಳಗದಂತೆಯೂ, ತೋಟ ತಳವಾರ ನೀರುಗಂಟೀರಿಗೆ ಹುಲ್ಲು ಮೆದೆ ಒಂದಕ್ಕೆ ತೆನೆ ಸಹಿತ ೧ ಹೊರೆ ಹುಲ್ಲಿನಂತೆಯೂ ಈ ಪ್ರಕಾರ ಸಲ್ಲುತಿತ್ತು. ಶಾನುಭಾಗರು ಪ್ರತಿ ಕುಳಕ್ಕೂ

ಮಸೀ ಕಾಣಿಕೆ ಎಂದು ಕುಳ ೧ ಕ್ಕೆ ವರ್ಷ ೧ ಕ್ಕೆ ಹಾಗದ ಕಾಸಿನಿಂದ ೧ ಹಣದವರೆಗೂ ವಸೂಲ್ಮಾಡಿಕೊಳ್ಳುತಿದ್ದರು.

ಅರಮನೇ ಚಾಕರರು.

ಮತ್ತು ಖಾಸಾ ಅರಮನೆ ಚಾಕರರಿಗೆ ಅರಮನೆಯಿಂದಲೇ ಅನ್ನ ವಸ್ತ್ರಕೊಟ್ಟು ಕಾಪಾಡುತಿದ್ದರು. ಮತ್ತು ಅವರ ಮಕ್ಕಳಿಗೆ ಅರಮನೆಯಿಂದಲೇ ಮದುವೆ ಮೊದಲಾದ್ದನ್ನು ಮಾಡಿಸುತಿದ್ದರು. ಸಂತೆಗಳಲ್ಲಿಯೂ, ಪೇಟೆಗಳಲ್ಲಿಯೂ ವರ್ತಕರು ಮಾರಾಟ ಮಾಡಲು ಅಳತೆ ಸೇರುಗಳನ್ನೂ ತೂಕದ ಬಟ್ಟುಗಳನ್ನೂ ಗೊತ್ತುಮಾಡಿದ್ದರು.

ಎಲ್ಲಾ ಪಾಳಯಗಾರರ ಸಂಸ್ಥಾನದಲ್ಲಿಯೂ ಬಳದೇಶದಲ್ಲಿ ಜಸರ ಸಂರಕ್ಷಣೆ ವಿಚಾರವನ್ನೂ, ಸರ್ಕಾರದ ಕಾರ್ಯಗಳು ಮೊದಲಾದ್ದನ್ನೂ, ವಿಚಾರಮಾಡುವುದಕ್ಕೆ ಗೊತ್ತಾಗಿದ್ದ ಗಡಿದುರ್ಗದ ಅಧಿಕಾರಿಗಳು ಅಗತ್ಯಬಿದ್ದ ಕಾಲದಲ್ಲಿ ಸೇನೆಯ ಆಧಿಕಾರವನ್ನೂ ನಡೆಸುತಿದ್ದರು.

ಬೇಗಾರರು.

(*d*) ಪೂರ್ವದಲ್ಲಿ ಅಂಚೆ ಇಲಾಖೆಯೂ ಗ್ರಾಮಗಳ ಪಾಕೀಜಾ ಮತ್ತು ಬಂದೋಬಸ್ತು ಮೊದಲಾದ ಇಲಾಖೆಗಳೂ ಬೇರೇ ಇರಲಿಲ್ಲ. ಅಂಚೆಯವರಿಗೆ ಬದಲಾಗಿ ದೇಶಾಂತರದ ಸಮಾಚಾರವನ್ನು ತಂದು ವರದಿ ಹೇಳುವುದಕ್ಕೂ, ಸರ್ಕಾರಿ ಕಾಗದಗಳನ್ನು ತಲಪಿಸುವುದಕ್ಕೂ ಬೇಹುಗಾರರು, ಜಾಸುದ್ದಾರರು, ವರದಿಯವರು, ಎಂದು ನೇಮಕವಾಗಿದ್ದರು. ಗ್ರಾಮದವರ ಅಂಚೆ ಕೆಲಸವನ್ನೂ ಗ್ರಾಮದ ಪಾಕೀಜಾವನ್ನೂ ಗ್ರಾಮದ ಬಂದೋಬಸ್ತು ಮೊದಲಾದ್ದನ್ನೂ ತೋಟಿತಳವಾರರು ನೋಡಿಕೊಳ್ಳುತಿದ್ದರು. ಚಿತ್ರದುರ್ಗ ಮೊದಲಾದ ಪ್ರಾಂತಗಳಲ್ಲಿ ಬೇಗಾರಿಗಳು ಎಂಬ ಸಂಸ್ಥೆ ಇದೆ. ಈ ಬೇಗಾರರೆಂಬುವರೆಲ್ಲಾ ಜಾತಿಯಲ್ಲಿ ಮಾದಿಗರು. ಇವರು ಇತರ ಕಡೆ ತೋಟಿ, ತಳವಾರ, ನೀರುಗಂಟಿ ಮುಂತಾದ ಚಾಕರರು ಮಾಡುವ ಗ್ರಾಮದ ಕೆಲಸಗಳನ್ನು ಮಾಡುತ್ತಾರೆ. ಇವರಿಗೆ ಸರ್ಕಾರದಿಂದ ಭೂಮಿಯನ್ನು ಉಂಬಳಿಯಾಗಿ ಅನುಭವಿಸಿಕೊಂಡು ಬರಲು ಕಂದಾಯವಿಲ್ಲದೆ ಮಾನ್ಯವಾಗಿ ಕೊಟ್ಟಿದಾರೆ. ಇವರು ಸರ್ಕಾರದ ಕೆಲಸಕ್ಕೆ ಟಪಾಲು ತೆಗೆದುಕೊಂಡು ಹೋಗುವುದು, ಊರ ಕಾವಲು ಕಾಯುವುದು, ಪಾಕೀ

ಜು ನೋಡಿಕೊಳ್ಳುವುದು, ಸರ್ಕಾರದ ಇತರ ಚಿಲ್ಲರೆ ಕೆಲಸ ಯಾವುದು ಬಿದ್ದಾಗ್ಯೂ ಅದನ್ನು ಮಾಡುವುದು ಇದಕ್ಕೆಲ್ಲಾ ಕೂಲಿ ತೆಗೆದುಕೊಳ್ಳದೆ ಬಿಟ್ಟಿಯಾಗಿ ಮಾಡುವುದು, ಇದನ್ನೆಲ್ಲಾ ಮಾಡುತಾರೆ. ಇದೂ ಅಲ್ಲದೆ ಗ್ರಾಮದ ರೈತರ ಮನೆಗಳಿಂದ ಸತ್ತ ದನವನ್ನು ತೆಗೆದುಕೊಂಡು ಹೋಗುವುದು ಇವರ ಕೆಲಸ. ಇದಕ್ಕಾಗಿ ರೈತರರಿಗೆ ಗೊತ್ತಾಗಿ ವರ್ಷಕ್ಕೆ ಇಷ್ಟು ಜೊತೆ ಎಕ್ಕಡ ಹೊಲಿದು ಕೊಡುವುದು, ಕಪಿಲೆಬಾನಿ, ಮಿಣಿ ಹಗ್ಗ ಮಾಡಿಕೊಡುವುದು, ಈ ಕೆಲಸಗಳನ್ನು ಮಾಡುತಾರೆ. ಮತ್ತು ರೈತರ ಹೊಲ ಗದ್ದೆಗಳಲ್ಲಿ ಪೈರನ್ನು ಹಸರುಗಾವಲು ಕಾಯುವುದು, ಕುಯಿದು ಮೆದೆ ಹಾಕಿದ ಪೈರನ್ನು ಜೋಪಾನವಾಗಿ ಕಾವಲು ಕಾಯುವುದು, ಮೊದಲಾದ ಬಿಟ್ಟೀ ಚಾಕರಿಯನ್ನೆಲ್ಲಾ ಇವರು ಮಾಡುತಾರೆ. ಇದಕ್ಕಾಗಿ ರೈತರು ತೆನೆ ಸಹಿತ ಮೆದೆ ಹಾಕಿರುವುದರಲ್ಲಿ ಸಾಧಾರಣ ಕುಳ ೧ಕ್ಕೆ ಒಂದಾಳು ಹೊರುವ ೧ ಹೊರೆ ಹುಲ್ಲು, ಒಂದು ಮೊರ ಬತ್ತ ಅಥವಾ ರಾಗಿ, ಮೆದೆಗೆ ನೆತ್ತಿಯ ಮೇಲೆ ಕಾಳಿನ ಸಂರಕ್ಷಣೆಗಾಗಿ ಹಾಕಿರುವ ಬೆಸಕನ ಸಿವಡು ಅಥವಾ ಕಂತೆಗಳು, ಧಾನ್ಯರೇಖೆ ಮಾಡಿ ತೆಗೆದುಕೊಂಡು ಹೋದ ಮೇಲೆ ಉಳಿಯುವ ತಳಗಾಳು ಇದನ್ನೆಲ್ಲಾ ರೈತರು ಕೊಡುತಾರೆ.

ಇದು ಹೊರತು ಪ್ರತಿಗ್ರಾಮಕ್ಕೆ ಹೋದಾಗ್ಯೂ ಈ ಮಾದಿಗರು ಗ್ರಾಮದ ಬಾಗಿಲಲ್ಲಿ ಕಾದಿರುತಾರೆ. ಇವರಲ್ಲಿ ಹಟ್ಟಿಬಿಟ್ಟಿಯವನೆಂದು ಇರುತಾನೆ. ಅವನು ಊರಿನವರ ಕೆಲಸ ಏನು ಬಿದ್ದರೂ ನೋಡಿಕೊಳ್ಳುತಾನೆ. ಟಪ್ಪಾಲ್ ಬಿಟ್ಟಿಯವನು ಹಿಂದಿನ ಗ್ರಾಮದ ಬೇಗಾರ ತಂದುಕೊಟ್ಟ ಸರ್ಕಾರಿ ಕಾಗದಗಳನ್ನು ಮುಂದಿನ ಗ್ರಾಮದ ಬೇಗಾರನಿಗೆ ಕೊಂಡು ಹೋಗಿ ಕೊಡಲು ಹೋಗುತಾನೆ. ಹೊರಬಿಟ್ಟಿಯವನು ಆ ಊರ ಮಾರ್ಗವಾಗಿ ಯಾರು ಬಂದರೂ ಅವರ ಸಾಮಾನನ್ನು ಹೊತ್ತುಕೊಂಡು ದಾರಿಯಲ್ಲಿ ಸಿಕ್ಕುವ ಮುಂದಿನ ಊರಿಗೆ ಕರೆದುಕೊಂಡು ಹೋಗುತಾನೆ. ಈ ಉಪಕಾರವನ್ನು ಪ್ರತ್ಯಾಶೆ ಇಲ್ಲದೆ ಮಾಡಿ ತನ್ನ ಹಳ್ಳಿಗೆ ಹಿಂತಿರುಗಿ ಹೋಗುತಾನೆ. ಈ ಕೆಲಸ ಮಾಡಬೇಕಲ್ಲಾ ಎಂದು ಅವನು ಸ್ವಲ್ಪವೂ ಗೊಣಗುವುದಿಲ್ಲ. ಸರ್ಕಾರದ ಅಂಚೇ ಟಪಾಲು ಬಂದು ಸೇರುವುದಕ್ಕೆ ಮುಂಚೆ ಬೇಗಾರರವನು ತರುವ ಟಪಾಲು ತಲ

ಪುವುದು. ಸರ್ಕಾರಿ ಕಾಗದಗಳನ್ನು ಗ್ರಾಮಾಂತರಗಳಿಗೆ ತರುವಾಗ ಪೋಲೀಸಿನವರು ಅನೇಕ ವೇಳೆ ಟಪಾಲನ್ನು ಹೋಗಲಾಡಿಸಿಕೊಂಡು ಮುಖವನ್ನೂ ತೋರಿಸದೆ ಓಡಿಹೋಗಿದಾರೆ. ಬೇಗಾರರವನು ಟಪಾಲನ್ನು ಹಾಳುಮಾಡಿದನೆಂಬ ಅನುಭವವೇ ನನಗಿಲ್ಲ. ಜ್ಞಾನ ತಪ್ಪುವ ಹಾಗೆ ಪಾನ ಮಾಡಿದ್ದರೂ ತನ್ನ ಬಟ್ಟೆಹೋದ ಜ್ಞಾನ ಕೂಡ ಇಲ್ಲದೆ ಇದ್ದಾನು. ಸರ್ಕಾರಿ ಕಾಗದಗಳನ್ನು ಮಾತ್ರ ಹಾಳು ಮಾಡಲಾರ. ಬೇಗಾರರವನ ಕೈಲಿ ಕಡ್ಡೀ ಕಟ್ಟಿದ ಟಪಾಲು ಕಳುಹಿಸಿದರೆ ಅದು ಜರೂರಾಗಿ ಖಂಡಿತವಾಗಿ ತಲಪುವುದೆಂದು ನಾವು ನಂಬಿಕೊಂಡಿರಬಹುದು. ಈ ಬೇಗಾರ ಸಂಸ್ಥೆಯ ಏರ್ಪಾಡು ಪೂರ್ವದಲ್ಲಿ ಸಾಧಾರಣವಾಗಿತ್ತಂತೆ. ಪಾಳಯಗಾರರ ಆಳಿಕೆಯಲ್ಲಿ ಇದನ್ನೆಲ್ಲಾ ಖಂಡಿತ ಮಾಡಿದರಂತೆ.

# ಪಾಳಯಗಾರರು.

## ೪ನೇ ಉಪನ್ಯಾಸ.

ಚಿತ್ರದುರ್ಗದವರ ಪರಾಕ್ರಮ.

(೧) ಹಿಂದಿನ ಮೂರು ಉಪನ್ಯಾಸದ ರಗಳೆಯನ್ನು ಅಸಹ್ಯವಿಲ್ಲದೇ ಕೇಳೋಣವಾಯಿತು. ಮೊಟ್ಟೆ ಇರುವ ತೆಂಗಿನಕಾಯಿಯನ್ನು ತಂದಿರಿಸಿಕೊಂಡು ಮೇಲುಗಡೆಯ ಸಿಪ್ಪೆಯನ್ನು ಸುಲಿಯಲು ಯತ್ನಮಾಡಿದೆ; ತರುವಾಯ ಅದರ ಜುಂಗನ್ನು ತೆಗೆಯಲು ಯತ್ನಮಾಡಿದೆ; ಆಮೇಲೆ ಸಿಕ್ಕಿದ ಕರಟವನ್ನು ಒಡೆಯಲು ಯತ್ನಮಾಡಿದೆ; ಈಗ ತೆಂಗಿನಕಾಯಿ ಎಂದರೆ ಹಸೀಕೊಬ್ಬರಿ ದೊರೆಯುವ ಹಾಗೆ ತೋರಬಹುದು; ಆ ಕೊಬ್ಬರಿಯನ್ನು ನಾವು ಆಸ್ವಾದಿಸದೆ ಬಿಟ್ಟರೆ ಇದುವರೆಗೆ ನಾವು ಪಟ್ಟ ಶ್ರಮವೆಲ್ಲಾ ಅಸಾರ್ಥಕವಾಗುವುದು. ಪಾಳಯಗಾರರು ಎಂಬುವರೆಲ್ಲಾ ದೇಶದಲ್ಲಿ ಧಾಂಧಲೆ ಮಾಡಿ ಜನರನ್ನು ಹಿಂಸೆಮಾಡಿ, ತಾವು ಆನಂದಪಡುತಿದ್ದರು ಎಂದು ನಿಶ್ಚಯವನ್ನರಿಯದ ಜನರಲ್ಲಿ ಅಂಧಪರಂಪರೆಯಾಗಿ ಬಂದ ಒಂದಭಿಪ್ರಾಯ ಹರಡಿಕೊಂಡಿದೆ. ಈ ಸಂದರ್ಭದಲ್ಲಿ ಪಾಳಯಗಾರರುಗಳು ಕಷ್ಟಪಟ್ಟರೆ ಸುಖಪಟ್ಟರೆ ಎಂಬ ಸಂಗತಿಯನ್ನು ಕುರಿತು ವಿಚಾರಮಾಡಿ ತೆಂಗಿನಕಾಯಿಯ ರುಚಿ ಹೇಗಿದೆ ಎಂಬುವ ಸಂಗತಿಯನ್ನು ಕೆದಕಿ ನೋಡೋಣ. ಅವರು ಎಂಥವರು ಎಷ್ಟರಮಟ್ಟಿನ ಶೂರರು ಎಂಬುವುದನ್ನು ತಿಳಿದುಕೊಳ್ಳಬೇಕಾದ್ದು ಅವಶ್ಯಕವಾಗಿದೆ.

ಚಿತ್ರದುರ್ಗದವರ ಪೌರುಷ.

ಚಿತ್ರದುರ್ಗದ ಪಾಳಯಪಟ್ಟನ್ನು ಸ್ಥಾಪಿಸಿದವನು ಮತ್ತಿ ತಿಮ್ಮಣ್ಣನಾಯಕ. ಇವನು ಚಿತ್ರದುರ್ಗಕ್ಕೆ ಬಂದು ರಾಜ್ಯವನ್ನು ಸಂಪಾದಿಸಿ ಬೆಟ್ಟದಮೇಲೆ ತಕ್ಕಮಟ್ಟಿಗೆ ಕೋಟೆಯನ್ನೂ ಅರಮನೆಯನ್ನೂ ಕಟ್ಟಿಕೊಂಡು ನಿಂತದ್ದು

ವಿಜಯ ನಗರದ ಚಕ್ರವರ್ತಿಗಳನ್ನಿಸಿಕೊಂಡಿದ್ದವರು ಹೆಚ್ಚಾಗಿ ಅಸೂಯೆಪಡಲು ಕಾರಣವಾಯಿತು. ಅವರು ಯಾವುದೋ ಒಂದು ಅಲ್ಪವಾದ ನೆಪವನ್ನು ತೆಗೆದು ಚಿತ್ರದುರ್ಗವನ್ನು ಹಿಡಿದುಕೊಂಡು ತಿಮ್ಮಣ್ಣನಾಯಕನನ್ನು ಕೈಸೆರೆ ಹಿಡಿದು ತಂದು ಒಪ್ಪಿಸಲು, ಸಾಳೋ ನರಸಿಂಗರಾಯನೆಂಬ ಸೇನಾಪತಿಯನ್ನು ಕಳುಹಿಸಿದರು. ಈ ನರಸಿಂಗರಾಯನು ಸೇನೆಯೊಡನೆ ಬಂದು ಚಿತ್ರದುರ್ಗದ ಬೆಟ್ಟದ ಕಿಬ್ಬಿಯಲ್ಲಿ ಇಳಿದುಕೊಂಡನು. ತಿಮ್ಮಣ್ಣನಾಯಕನು ಇದನ್ನು ತಿಳಿದು ಒಂದು ದಿನ ಅರ್ಧರಾತ್ರಿಯಲ್ಲಿ ಬೆಟ್ಟದಿಂದ ಇಳಿದು ಶತ್ರುಗಳ ಪಾಳಯಕ್ಕೆ ನುಗ್ಗಿ ಆ ಸೇನಾಪತಿಯ ಸ್ವಂತ ಕುದುರೆಯ ಹಿಂದುಗಡೆ ಮುಂದುಗಡೆ ಹಗ್ಗವನ್ನು ಬಿಚ್ಚುತಾ ಇದ್ದನು. ಕುದುರೆಯು ಹೊಸಬರ ವಾಸನೆ ತಿಳಿದು ಕಾಲನ್ನು ಬಡಿಯುತಾ ಕೆನೆಯುತಾ ಗದ್ದಲಮಾಡಿತು. ಮಲಗಿ ನಿದ್ರೆಮಾಡುತಾ ಇದ್ದ ಕಾಸದಾರನಿಗೆ ಎಚ್ಚರವಾಯಿತು. ಅವನು ತನ್ನನ್ನು ಕಂಡರೆ ಕೆಲಸ ಕೆಡುವುದೆಂದು ಯೋಚಿಸಿ, ತಿಮ್ಮಣ್ಣನಾಯಕನು ಸಮೀಪದಲ್ಲಿಯೇ ನೆಲದ ಮೇಲೆ ತಟ್ಟನೆ ಮಲಗಿಕೊಡು ಅಲ್ಲಿದ್ದ ಕಸದ ಹುಲ್ಲನೆಲ್ಲಾ ತನ್ನ ಮೈಮೇಲೆ ಕವಿಚಿಕೊಂಡನು. ಕಾಸ್‌ದಾರನು ನಿದ್ದೆಗಣ್ಣಿನಲ್ಲಿ ಎದ್ದು ಕುದುರೇ ಕಟ್ಟುವ ಗೂಟವನ್ನು ನೆಲದ ಮೇಲೆ ಇರಿಸಿ ಗಟ್ಟಿಯಾಗಿ ಬಡಿದು ಕುದುರೆಯನ್ನು ಅದಕ್ಕೆ ಕಟ್ಟಿ ತಾನು ಮಲಗಿಕೊಂಡನು. ಅವನು ಪೆಟ್ಟಿದ ಒಂದು ಗೂಟವು ಕೆಳಗೆ ಹುಲ್ಲಿನ ಮರೆಯಲ್ಲಿ ಮಲಗಿದ್ದ ತಿಮ್ಮಣ್ಣನಾಯಕನ ಅಂಗೈಯಲ್ಲಿ ಹಾದು ನೆಲಕ್ಕೆ ಇಳಿಯಿತು. ತಿಮ್ಮಣ್ಣನಾಯಕನು ಅದನ್ನು ತಡೆದುಕೊಂಡು ಕಾಸ್‌ದಾರನಿಗೆ ನಿದ್ರೆಬರುವ ತನಕ ಮಲಗಿದ್ದು, ತರುವಾಯ ತನ್ನ ಸೊಂಟದಲ್ಲಿ ಸೆಕ್ಕಿಸಿಕೊಂಡಿದ್ದ ಚಾಕುವನ್ನು ಹಿರಿದು ನೆಲಕ್ಕೆ ಬಡಿದಿದ್ದ ಕುದುರೇಗೂಟದ ಕೆಳಕ್ಕೆ ಸೆಕ್ಕಿಕೊಂಡಿದ್ದ ಕೈಯ್ಯನ್ನು ಹಸ್ತಕ್ಕೆ ಸರಿಯಾಗಿ ಕತ್ತರಿಸಿ, ಪಾಗಿನ ಬಟ್ಟೆ ಹರಿದು ಕೈಮೋಟಿಗೆ ಸುತ್ತಿ ಪುನಃ ಅದೇ ಕುದುರೆಯನ್ನು ಬಿಚ್ಚಿ ಅದರ ಮೇಲೆ ಏರಿಕೊಂಡು ಬೆಟ್ಟದ ಮೇಲಕ್ಕೆ ಹೊರಟುಹೋದನು. ಮಾರನೇ ದಿವಸ ಅದೇ ಸೇನಾಪತಿಯ ಆನೆ ಬೆಟ್ಟದ ಕೆಳಗಿರುವ ತಿಮ್ಮಣ್ಣನಾಯಕನ ಕೆರೆಗೆ ನೀರು ಕುಡಿಯುವುದಕ್ಕೆ ಬರಲು, ಅದೇ ಶೂರನು ತನ್ನ

ದುರ್ಗದಏಕಲವ್ಯ.

ಬಿಲ್ಲನ್ನು ಕಾಲಲ್ಲಿ ಮೆಟ್ಟಿಕೊಂಡು ತನ್ನ ಇನ್ನೊಂದು ಕೈಯಲ್ಲಿ ತುಯಿದು ಅಂಬನ್ನು ಹೊಡೆಯಲು, ಆ ಆನೆಯ ಭ್ರೂಮಧ್ಯಕ್ಕೆ ಏಟು ಬಿತ್ತು ಅದು ಒಂದೇ ಏಟಿಗೆ ಅರಿಚಿಕೊಂಡು ಕೆಳಕ್ಕೆ ಬಿದ್ದು ಪ್ರಾಣಬಿಟ್ಟಿತು. ಯುಗಾಂತರದಲ್ಲಿ ತಾನು ದ್ರೋಣಾಚಾರ್ಯರ ಶಿಷ್ಯನೆಂದು ಭಾವಿಸಿಕೊಂಡಿದ್ದ ಏಕಲವ್ಯನು ಅವರಿಗೆ ಗುರುದಕ್ಷಿಣೆಯಾಗಿ ತನ್ನ ಬಲದ ಉಂಗುಷ್ಟವನ್ನು ಕುಯಿದುಕೊಟ್ಟ ಮನೋದಾರ್ಢ್ಯವನ್ನು ತಿಮ್ಮಣ್ಣನಾಯಕನ ಪರಾಕ್ರಮವು ಮೀರಿಸಿತು. ಇನ್ನು ಎಷ್ಟು ಹೇಳೋಣ!

ಮಹಾ ಪರಾಕ್ರಮ.

ಸನ್ ೧೭೪೭ ರಲ್ಲಿ ನಗರ, ಸವಣೂರು, ಹರಪನಹಳ್ಳಿ, ರಾಯದುರ್ಗ, ಈ ಸಂಸ್ಥಾನಗಳ ಪಾಳಯಗಾರರು ದುರ್ಗಕ್ಕೆ ಸೇರಿದ ಮಾಯಿಕೊಂಡದ ಕೋಟೆಗೆ ಮುತ್ತಿಗೆ ಹಾಕಿದರು. ಆಗ ದುರ್ಗದ ದೊರೆಯಾದ ಹಿರೀ ಮದಕೆರಿನಾಯಕನು ಸೇನೆಯೊಡನೆ ಹೊರಟು ಶತ್ರುಗಳೊಡನೆ ಯುದ್ಧಮಾಡುವಾಗ ಎದುರುಕಕ್ಷಿಯವರ ಕೈಬಲವಾಯಿತು. ಹರಪನಹಳ್ಳಿ ಸೋಮಶೇಖರ ನಾಯಕನ ಆನೆಯೂ ಮದಕೆರಿನಾಯಕನ ಆನೆಯೂ ಎದುರಾದವು. ತನ್ನ ಆನೆ ಓಡಿಹೋದೀತು ತನಗೆ ಅಪಮಾನವಾದೀತು ಎಂದು ಅದರ ಕಾಲಿಗೆ ದಬಕ ಎಂದರೆ ತೂಕವಾದ ಕಬ್ಬಿಣದ ಭಾರವನ್ನು ಕಟ್ಟಿಸಿ ಮದಕೆರಿನಾಯಕನು ಕದನಕ್ಕೆ ನಿಂತನು. ಶತ್ರುಗಳು ಆ ಆನೆಯನ್ನು ಮುತ್ತಿ ಕೆಲವರು ಅದರ ಕಾಲನ್ನೂ, ಕೆಲವರು ಅದರ ಹೊಟ್ಟೆಯನ್ನೂ ಕತ್ತರಿಸುತ್ತಾ ಅದನ್ನು ಕೆಡವಿದರು. ಮದಕೆರಿನಾಯಕನು ಬೇರೆ ಆನೆಯನ್ನೇರಿ ಯುದ್ಧಕ್ಕೆ ಅನುವಾದನು. ಆ ಇಬ್ಬರು ದೊರೆಗಳಿಗೂ ಜಾವ ಹೊತ್ತು ಘೋರವಾದ ಲಡಾಯಿ ನಡೆಯಿತು. ಮೊದಲು ಅಂಬು ಬಿಲ್ಲುಗಳಿಂದ ಕಾಳಗವಾಯಿತು. ಕೋವಿಗಳಿಂದ ಗೋಲಿ ವಗೈರೆ ಹಾರಾಡಿದವು. ಅದೆಲ್ಲಾ ಬರಿದಾದ ಮೇಲೆ ಸೋಮಶೇಖರನಾಯಕನು ಥಳಥಳಿಸುವ ಅಯೋಮುಖವೆಂಬ ಹೊಸ ಭರ್ಜಿಯನ್ನು ತೆಗೆದುಕೊಂಡು ಆನೆಯಮೇಲಿನಿಂದ ಬಗ್ಗಿ ಅದರ ಮಸ್ತಕದ ಮೇಲೆ ಕಾಲಿಟ್ಟು ಹಿರೀ ಮದಕೆರಿನಾಯಕನನ್ನು ತಿವಿದನು. ಆಗ ದುರ್ಗದ ಭೂಪನು ಆ ಬಹಳೆಯನ್ನು ಕಿತ್ತುಕೊಳ್ಳಬೇಕೆಂದು ಬಗ್ಗಿ ತನ್ನ ಆನೆಯ ಮಸ್ತಕದ ಮೇಲೆ ಕಾಲಿಟ್ಟು ನಿಂತು ಆ ಭರ್ಜಿಗೆ ಕೈ ಹಾಕಿ ಹಿಡಿದುಕೊಳ್ಳಲು, ಸೋಮಶೇ

ಖರನಾಯಕನು ಅದನ್ನು ಕಿತ್ತುಕೊಳ್ಳುವುದಕ್ಕೆ ಯತ್ನಮಾಡಿ ವಿಶೇಷವಾಗಿ ತಿನಕಾಡಿದನು. ಮದಕೆರಿನಾಯಕನ ಕೈಗಾಯವಾಯಿತೇ ಹೊರತು ಭರ್ಜಿಯ ಅಲಗನ್ನು ಆ ಶೂರ ಬಿಡದೆ ಹಿಡಿಮಕೊಂಡನು. ಉಭಯಕಕ್ಷಿಯ ಮಾವುತರೂ ಸತ್ತುಬಿದ್ದರು. ಉಭಯರಾಯರಿಗೂ ಗಾಯ ಬಹಳವಾಯಿತು. ಸೋಮಶೇಖರನಾಯಕನು ಮೂರ್ಛೆ ಬಂದು ಬಿದ್ದುಬಿಟ್ಟನು. ಇಂಥಾ ಪರಾಕ್ರಮವು ಈ ಕಾಲದೊಳು ಕಥೆಗಳಲ್ಲಿಯೇ ನಿಂತುಹೋಯಿತು.

ವೀರಾಸನ.

ಕಡೇ ಮದಕೆರಿನಾಯಕನ ದಿವಸದಲ್ಲಿ ಮರಾಟೆಯವರಿಗೆ ಸೇರಿದ್ದ ಆನವಟ್ಟಿ ಕೋಟೆಯನ್ನು ಹೈದರಲ್ಲಿಯು ಮುತ್ತಿ ವಶಮಾಡಿಕೊಂಡು ಅಲ್ಲಿ ಠಾಣ್ಯಾವನ್ನು ಇಟ್ಟನು. ಆಗ ಪೇಶ್ವೆ ದೊಡ್ಡ ಮಾಧವರಾಯನು ಆ ಕೋಟೆಗೆ ಮುತ್ತಿಗೆ ಹಾಕಿ ತೆಗೆದುಕೊಳ್ಳಲು ದುರ್ಗದವರ ಸಹಾಯವನ್ನು ಕೇಳಿದನು. ಮದಕೆರಿನಾಯಕನು ಆ ಕೋಟೆಗೆ ಮುತ್ತಿಗೆ ಹಾಕಿದನು, ದುರ್ಗದ ದಂಡಿನವರು ಕೋಟೆಯೊಳಕ್ಕೆ ನುಗ್ಗಿ ಅಲ್ಲಿದ್ದ ಭಟರ ತಲೆಯನ್ನು ಕಡಿದು ತಂದು ತಮ್ಮದೊರೆಗೆ ಒಪ್ಪಿಸುತಾ ಬಂದರು. ತಲೇಬುರುಡೆಗಳನ್ನು ಎತ್ತರವಾಗಿ ಪೇರಿಸಿ ಜಗಲಿ ಮಾಡಿಸಿ ಅದನ್ನು ಪೇಶ್ವೆಗೆ ತೋರಿಸುತಾ ದುರ್ಗದ ದೊರೆಯು "ಶತ್ರುಗಳ ಶಿರಸ್ಸಿನಿಂದ ವೀರಾಸನವನ್ನು ಕಟ್ಟಿಸಿದೇನೆ, ಅದರ ಮೇಲೆ ತಾವು ಕೂತುಕೊಳ್ಳಬೇಕು, ರಕ್ತದಿಂದ ಅಭಿಷೇಕಮಾಡಿಸುತೇನೆ" ಎಂದು ಹೇಳಿದನು. ದುಶ್ಯಾಸನ ವಧೆ ಜ್ಞಾಪಕಕ್ಕೆ ಬರುತಿದೆ. ಶತ್ರುಸೇನೆಗೆ ನುಗ್ಗಿ ದುರ್ಗದ ಭಟರು ತಲೆಗಳನ್ನು ಕಡಿದು ತಂದ ಪರಾಕ್ರಮ ಎಂಥಾದ್ದೋ ಹೇಳಬೇಕಾದ್ದೇ ಇಲ್ಲ.

ಜೋವಾರ್ ಆಫ್ ಆರ್ಕ್.

(೨) ಇಂಗ್ಲೆಂಡು ದೇಶದ ದೊರೆಯಾಗಿದ್ದ ಮುಮ್ಮಡಿ ಎಡ್ವರ್ಡ್ ಎಂಬಾತನ ಆಳಿಕೆಯಲ್ಲಿ ಫ್ರಾನ್ಸ್ ದೇಶಕ್ಕೂ ಇಂಗ್ಲೆಂಡು ದೇಶಕ್ಕೂ ಭಾರಿಯಾಗಿ ಯುದ್ಧಗಳು ಜರುಗುತಿದ್ದವು. ಆಗ ಇಂಗ್ಲಿಷ್‌ನವರೇ ಜಯಶೀಲರಾಗುತಾ ಬಂದರು. ಇದನ್ನು ಕಂಡು ಸಹಿಸಲಾರದೆ ಫ್ರೆಂಚು ಜನರೆಲ್ಲಾ ರೋಷದಿಂದ ಇಂಗ್ಲೀಷ್ ಜನರ ಮೇಲೆ ತಿರುಗಿಬಿದ್ದರು. ಆರ್ಲಿಯನ್ಸು ಪಟ್ಟಣದ ಒಬ್ಬ ಸ್ತ್ರೀ ಜೋವಾರ್ ಆಫ್ ಆರ್ಕ್ ಎಂಬುವಳು ಇಂಗ್ಲಿಷರನ್ನು

ನಾಶಮಾಡಿ ಆ ದೇಶದಿಂದ ಅವರನ್ನು ಹೊರಡಿಸುವುದಕ್ಕೆ ತನಗೆ ವರವಾಗಿದೆ ಎಂಬದಾಗಿ ಕುದುರೆಯನ್ನೇರಿ ಆಯುಧಪಾಣಿಯಾಗಿ ಅನೇಕ ಜನ ಇಂಗ್ಲಿಷರನ್ನು ಕೊಂದಳೆಂದು ತಿಳಿಯಬಂದಿದೆ. ಆದರೆ ಚಿತ್ರದುರ್ಗದ ಒಬ್ಬ ಸ್ತ್ರೀಯು ತೋರಿಸಿದ ಮಹಾ ಪರಾಕ್ರಮವನ್ನು ಸ್ತ್ರೀ ಪುರುಷರು ಯಾರೇ ಆಗಲಿ ಯಾವಾಗಲೂ ತೋರಿಸರಲಾರರೆಂದು ಹೇಳಬಹುದು.

ಓಬವ್ವ.

ಹೈದರಲ್ಲಿಯ ಸೇನೆಯವರು ಚಿತ್ರದುರ್ಗದ ಬೆಟ್ಟಕ್ಕೆ ಯಾವ ಕಡೆಯೂ ಪ್ರವೇಶ ಮಾಡುವುದಕ್ಕೆ ಆಸ್ಪದವಿಲ್ಲದ ಹಾಗೆ ದುರ್ಗದ ಬೇಡರು ಖಾಡಾಖಾಡಿ ಯುದ್ಧವನ್ನು ಮಾಡುತಿದ್ದರು. ಇವರೆದುರಿಗೆ ಶ್ರೀರಂಗಪಟ್ಟಣದ ಸೇನೆ ನಿಲ್ಲಲಾರದೇ ಹೋಯಿತು. ಶತ್ರುಗಳು ದುರ್ಗದ ಬೆಟ್ಟದ ಕೋಟೆಯೊಳಕ್ಕೆ ಬರುವುದು ಕಷ್ಟವಾಯಿತು. ಆ ಬೆಟ್ಟದ ಒಂದು ಪಕ್ಕದಲ್ಲಿ ಬರಗೆರಮ್ಮನಗುಡಿ ಎಂದು ಇದೆ. ಅದಕ್ಕೆ ಮೇಲುಗಡೆ ಸ್ವಲ್ಪ ದೂರವಾಗಿ ಒಂದು ರಹಸ್ಯವಾದ ಸ್ಥಳವಿದೆ. ಮೇಲೆ ಕೆಳಗೆ ಪಕ್ಕದಲ್ಲಿ ಸಹಾ ನಾಲ್ಕು ಕಡೆಯಲ್ಲಿಯೂ ಬಂಡೆ ಇದೆ. ಮಧ್ಯೆ ಒಬ್ಬ ಮನುಷ್ಯ ಈಜಿಕೊಂಡು ಒಳಕ್ಕೆ ಹೋಗುವ ಹಾಗೆ ಸಣ್ಣ ದ್ವಾರವಿದೆ. ಶತ್ರುಗಳು ಈ ದ್ವಾರವನ್ನು ಗೊತ್ತುಮಾಡಿಕೊಂಡು ಅದರೊಳಗಿನಿಂದ ನುಸುಳಿ ಒಳಕ್ಕೆ ಬರಲು ಯತ್ನಮಾಡುತಿದ್ದರು. ಅರ್ಧ ಬೆಟ್ಟದಲ್ಲಿ ಮನೆ ಕಟ್ಟಿಕೊಂಡಿದ್ದ ಕಹಳೆಯವನ ಹೆಂಡತಿ ಓಬಿಯೆಂಬುವಳು ಕೆಲಸ ತೀರಿಸಿಕೊಂಡು ಮನೆಗೆ ಬಂದ ತನ್ನ ಗಂಡನಿಗೆ ಅನ್ನವನ್ನು ಬಡಿಸಿ ಅವನು ಊಟಮಾಡುತಿರುವಾಗ ತಾನು ಹರವಿ ತೆಗೆದುಕೊಂಡು ನೀರು ತರುವುದಕ್ಕೆ ಹೊರಟಳು. ನೀರನ್ನು ತುಂಬಿಕೊಳ್ಳುತಾ ಇರುವಾಗ, ಸಮೀಪದಲ್ಲಿದ್ದಂಥಾ ಮೇಲೆ ಹೇಳಿದ ಕಳ್ಳದಾರಿಯ ಹೊರಗಡೆ ಗದ್ದಲ ಕೇಳಿತು. ಕೂಡಲೇ ಓಬಿಯು ತನ್ನ ಮನೆಗೆ ಹೋಗಿ ನೀರಿನ ಹರವಿಯನ್ನು ಇರಿಸಿ, ಒಂದು ವನಕೆಯನ್ನು ತೆಗೆದುಕೊಂಡು ಹೋಗಿ ಇಕ್ಕಟ್ಟಾದ ಆ ಕಳ್ಳದಾರಿಯ ಪಕ್ಕ ಕತ್ತಲೆಯಾದ ಸ್ಥಳದಲ್ಲಿ ಓರೆಯಾಗಿ ನಿಂತುಕೊಂಡಳು. ಆ ಸಣ್ಣ ಕಂಡಿಯಿಂದ ಒಬ್ಬಮನುಷ್ಯ ಒಳಕ್ಕೆ ದೂರಿಬಂದನು. ಪಕ್ಕದಲ್ಲಿ ಕತ್ತಲೆಯಲ್ಲಿ ನಿಂತಿದ್ದ ಓಬಿಯು ವನಕೆಯಿಂದ ಒಂದೇಟನ್ನು ಆ ಮನುಷ್ಯನ

ತಲೆಯ ಮೇಲೆ ಹೊಡೆದಳು. ಅವನು ಕೆಳಗೆ ಬಿದ್ದು ಸತ್ತನು. ಹಾಗೆಯೇ ಬಂದು ಗಳಿಗೇ ಮೇಲೆ ಇನ್ನೊಬ್ಬ ಒಳಕ್ಕೆ ದೂರಿದನು. ಅವನನ್ನೂ ಓಬಿಯು ಅದೇ ಪ್ರಕಾರ ಹೊಡೆದಳು. ಅವನೂ ಸತ್ತುಬಿದ್ದನು. ಇನ್ನೊಬ್ಬ, ಮತ್ತೊಬ್ಬ, ಮಗದೊಬ್ಬ ಬಂದರು. ಎಲ್ಲರಿಗೂ ಮುಸಲಾಯುಧದ ಸೇವೆಯಿಂದ ಲೋಕಾಂತರ ಪ್ರಾಪ್ತವಾಗುತ್ತಾ ಬಂತು. ಹೀಗೆ ಅನೇಕ ಜನ ಶತ್ರುಗಳ ಕಡೆ ಭಟರು ಸತ್ತುಬಿದ್ದರು. ಹೆಣದ ರಾಸಿಯು ಪಕ್ಕದಲ್ಲಿದ್ದ ಬೆಟ್ಟದೆತ್ತರಕ್ಕಾಯಿತು. ಒಂದೇಟಿಗೆ ಒಂದು ಹೆಣ ಈ ಪ್ರಕಾರ ಅನೇಕ ಜನ ಸತ್ತುಹೋಯಿತು. ಓಬಿಗೆ ರಕ್ತದಲ್ಲಿ ಸ್ನಾನವಾಯಿತು. ರಕ್ತವು ಮಳೆ ನೀರಿನಂತೆ ಹರಿದುಹೋಗುವುದಕ್ಕೆ ಆರಂಭವಾಯಿತು. ಹೆಂಡತಿ ಎಷ್ಟುಹೊತ್ತಾದರೂ ಬಾರದೇಹೋದ್ದನ್ನು ಕಂಡು ಅವಳ ಗಂಡನು ಅವಳನ್ನು ಅರಸಿಕೊಂಡು ಬಂದು ಆ ಹಗರಣವನ್ನೆಲ್ಲಾ ನೋಡಿದನು. ದಿಗಲಾಯಿತು. ಓಬಿಯು ಕೆಂಪಗೆ ರಕ್ತದಲ್ಲಿ ಇಳೀಯ ಮುಳಗಿದ ಮಹಾ ಕಾಳಿಯೋ ಎನ್ನುವ ಹಾಗೆ ಕಾಣುತಾ ಆಗ ಬಂದ ತನ್ನ ಗಂಡನೂ ಶತ್ರುಪಕ್ಷದವನೆಂದು ವೀರಾವೇಶದಿಂದ ಊಹಿಸಿಕೊಂಡು ಅವನನ್ನೂ ಹೊಡೆಯುವುದಕ್ಕೆ ಹೋದಳು. ಕಡೆಗೆ ಗಂಡನೆಂದು ತಿಳಿದು ಸುಮ್ಮನಾದಳು. ಈ ಪರಾಕ್ರಮವನ್ನು ಹೋಲತಕ್ಕ ಸಾಮರ್ಥ್ಯ ಮತ್ತೆಲ್ಲಿ ನಡೆದಿದೆಯೋ ಇದುವರೆಗೆ ನಾನರಿಯೆ.

## ಗುಮ್ಮನಾಯಕನ ಪಾಳಯದವರ ಪರಾಕ್ರಮ.

ವಸಂತನಾಯಕನ ಶೌರ್ಯ.

ಗುಮ್ಮನಾಯಕನ ಪಾಳಯದವರಲ್ಲಿ ಎಂಥಾ ಪರಾಕ್ರಮಶಾಲಿಗಳಿದ್ದರು ಎಂಬ ಸಂಗತಿಯನ್ನು ಕುರಿತು ಸ್ವಲ್ಪ ಅರಿಕೆ ಮಾಡುತೇನೆ. ಈ ಪಾಳಯಗಾರರಲ್ಲಿ ೯ ನೇ ತಲೆಯವನಾದ ದೊಡ್ಡ ವಸಂತನಾಯಕರು ಆಳುತಿರುವಾಗ ಅತ್ತ ವಿಜಯನಗರದಲ್ಲಿ ಕೃಷ್ಣರಾಯರು ಚಕ್ರವರ್ತಿಗಳಾಗಿದ್ದರು. ಆಗ ಕಲುಬರಗಿ ಸಂಸ್ಥಾನದವರು ಬಹಳವಾಗಿ ವಿರೋಧವನ್ನು ಬೆಳಸಿ ಕೃಷ್ಣರಾಯರನ್ನು ಧಿಕ್ಕಾರಮಾಡಿದರು. ಇಂಥಾ ವಿರೋಧಿಗಳನ್ನು ಅಡಗಿಸಲು ಚಕ್ರವರ್ತಿಗಳ ದಂಡಿನೊಡನೆ ದೊಡ್ಡ ವಸಂತನಾಯಕರು, ಇವರ ಪುತ್ರರೂ ಮತ್ತು ಪೆಮ್ಮಸಾನಿ ತಿಮ್ಮನಾಯಕ ಮೊದಲಾಗಿ ಒಬ್ಬೊಬ್ಬ ಪಾಳಯಗಾರರೂ ಇವರ ಸೇನೆ ಸೇರಿ ಭಾರಿಯಾದ ಫೌಜನ್ನು

ಹೊರಡಿಸಿದರು. ಇವರೆಲ್ಲಾ ೮ ದಿವಸ ಯುದ್ಧ ಮಾಡಿದಾಗ್ಯೂ ಕಲ್‌ಬುರ್ಗಿಯವರು ಸಗ್ಗಲಿಲ್ಲ. ಆಗ ವಿಜಯನಗರದವರನ್ನು ಬಿಟ್ಟು ಪಾಳಯಗಾರರ ದಂಡುಗಳನ್ನೇ ಸೇರಿಸಿಕೊಂಡು ಶತ್ರುಗಳ ಮೇಲೆ ರಾಜಕಾರ್ಯಕ್ಕೆ ಹೊರಟು ದೊಡ್ಡ ವಸಂತನಾಯಕರು ಘೋರವಾದ ಯುದ್ಧವನ್ನು ಮಾಡಿದರು. ಪಾಳಯಗಾರರ ಪಕ್ಷದಲ್ಲಿಯೂ, ಶತ್ರುಪಕ್ಷದಲ್ಲಿಯೂ ಬಹಳ ಜನ ನಷ್ಟವಾಯಿತು. ಈ ಹತಾಹತಿಯನ್ನು ಕಲ್‌ಬುರ್ಗಿ ದೊರೆ ತಾಳಲಾರದೇ ಹೋದನು. ಕಡೆಗೆ ಪೆಮ್ಮಸಾನಿ ತಿಮ್ಮನಾಯಕನು ಆತನನ್ನು ಕೈಸೆರೆ ಹಿಡಿಯಲು ಯತ್ನಮಾಡಿದ್ದನ್ನು ಕಂಡು ಕಲ್‌ಬುರ್ಗಿಯ ಶತ್ರುರಾಜನು “ನನ್ನ ಸೇನೆಯೆಲ್ಲಾ ಖಿಲವಾಯಿತು, ನಾನು ನಾಶವಾದೆ; ಉಳಿದ ಸೇನೆಯನ್ನು ಕೊಂದು ನನ್ನನ್ನು ಕೈಸೆರೆ ಹಿಡಿಯುವುದು ದೊಡ್ಡ ಪರಾಕ್ರಮವಲ್ಲ. ನಾನೂ ದೊಡ್ಡ ವಸಂತನಾಯಕನೂ ಇಬ್ಬರೇ ನಿಂತು ದ್ವಂದ್ವಯುದ್ಧ ಮಾಡಿ ಜಯಾಪಜಯವನ್ನು ನಿರ್ಧರಿಸಿಕೊಳ್ಳೋಣ” ಎಂದು ಹೇಳಲು, ಗುಮ್ಮನಾಯಕನ ಪಾಳಯದ ಶೂರನಾದ ದೊಡ್ಡವಸಂತನಾಯಕನು ಅದಕ್ಕೆ ಒಪ್ಪಿದನು. ಉಭಯ ವೀರರೂ ದ್ವಂದ್ವ ಯುದ್ಧಕ್ಕೆ ನಿಂತರು. ಢಾಲ್‌ಕತ್ತಿಯನ್ನು ತೆಗೆದುಕೊಂಡು ಹೊಡೆದಾಟಕ್ಕೆ ಆರಂಭಿಸಿದರು. ಇದರಲ್ಲಿ ಒಬ್ಬರ ಏಟನ್ನು ಒಬ್ಬರು ಚಮತ್ಕಾರವಾಗಿ ತಪ್ಪಿಸಿಕೊಳ್ಳುತಾ ಕಾಳಗವಾಡುತಾ ಇರುವಾಗ ದೊಡ್ಡವಸಂತನಾಯಕನು ಶತ್ರುರಾಜನ ಕತ್ತಿಯನ್ನು ಕತ್ತರಿಸಿದನು. ಆಗ ಅವರಿಬ್ಬರೂ ಜಟ್ಟೀಕಾಳಗಕ್ಕೆ ಮೊದಲು ಮಾಡಿದರು. ಅದು ಒಂದು ಗಳಿಗೆ ನಡೆಯಿತು. ಕಡೆಗೆ ದೊಡ್ಡವಸಂತನಾಯಕನ ಏಟು ಬಹಳ ಬಲವಾಗಲು, ಅದನ್ನು ತಾಳಲಾರದೆ ಕಲ್‌ಬುರ್ಗಿ ದೊರೆಯು ನೆಲಕ್ಕೆ ಬಿದ್ದು ಮೂಗಿನಲ್ಲಿಯೂ ಬಾಯಿಯಲ್ಲಿಯೂ ರಕ್ತಕಾರಿ ಮೃತಪಟ್ಟನು. ಕಲ್‌ಬರ್ಗಿ ಕೋಟೆಯು ಜೈಶಾಲಿಗಳ ವಶವಾಯಿತು. ಕೃಷ್ಣರಾಯರು ದೊಡ್ಡವಸಂತನಾಯಕನ ಸಾಹಸವನ್ನು ಶ್ಲಾಘನೆಮಾಡಿ ಆತನಿಗೆ ಅನೇಕ ರತ್ನಾಭರಣ ದಿವ್ಯದೂಕೂಲಗಳು, ಆನೆ, ಬೆಳ್ಳಿ ಅಂಬಾರಿ, ಉತ್ತಮಾಶ್ವಗಳು ಮೊದಲಾಗಿ ಅತ್ಯಧಿಕವಾದ ಭಾರಿ ಬಹುಮಾನವನ್ನು ಕೊಟ್ಟು ಗಂಡೀಕೋಟೆ ಪಾಳಯಗಾರನಿಗೂ ಅದೇ ರೀತಿಯಾಗಿ ಸನ್ಮಾನವನ್ನು ತೋರಿಸಿದರು.

ಈ ಗುಮ್ಮನಾಯಕನ ಪಾಳಯದ ಪಾಳಯಗಾರರ ೧೦ ನೇ ತಲೆಯವನಾದ ಕದರಪ್ಪನಾಯಕನ ದೊರೆತನದಲ್ಲಿ ಇಡಗೂರು ಚೆನ್ನಗಾನಪಲ್ಲಿ ಸಂಸ್ಥಾನದ ರಂಗರಾಜನೆಂಬ ಪಾಳಯಗಾರನು ವಿಜಯನಗರದ ಚಕ್ರವರ್ತಿಗಳನ್ನು ಧಿಕ್ಕರಿಸಿ ಮಾತನಾಡಿದ್ದಕ್ಕೋಸ್ಕರ ಕದರಪ್ಪನಾಯಕನು ತನ್ನ ಸ್ವಂತ ಸೇನೆಯೊಡನೆ ಹೋಗಿ ಆ ರಂಗ ರಾಜನನ್ನು ಅಡಗಿಸಿ ಮಹಾರಾಜರಿಗೆ ಸರಿಯಾಗಿ ಕಪ್ಪ ಮೊದಲಾದ್ದನ್ನು ಕೊಟ್ಟುಕೊಂಡು ಯೋಗ್ಯವಾಗಿ ನಡೆದುಕೊಳ್ಳುವ ಹಾಗೆ ನಿಯಾಮಕದಿಂದ ಕರಾರು ಮಾಡಿಕೊಂಡು ಬರಲು, ಆಗ ವಿಜಯನಗರದ ರಾಮರಾಜನು ವಿಶೇಷವಾಗಿ ಬಹುಮಾನವನ್ನು ಮಾಡಿ ತಮ್ಮ ಆಸ್ಥಾನದಲ್ಲಿಯೇ ಕೆಲವು ದಿವಸ ಇರಬೇಕೆಂದು ಗುಮ್ಮನಾಯಕನ ಪಾಳಯದ ದೊರೆಯನ್ನು ಪ್ರೀತಿಯಿಂದ ಇರಿಸಿಕೊಂಡನು.

ಕದರಪ್ಪನಾಯಕ.

ಹೀಗಿರುವಲ್ಲಿ ಮಹಾನವಮಿ ಪ್ರಾಪ್ತವಾಯಿತು. ಆಗ ಪದ್ಧತೀ ಪ್ರಕಾರ ಆ ಒಡ್ಡೋಲಗದಲ್ಲಿ ಅನೇಕ ದೇಶಾಧೀಶರು, ಪ್ರಧಾನಮಂತ್ರಿಗಳು, ಅನೇಕ ವೀರರು, ಪಾಳಯಗಾರರು, ವಿದ್ವಾಂಸರು ಸಹಾ ಶೋಭಿಸುತಾ ಇದ್ದರು. ಆಗ ಬಂಗಾರ ಯಾಚಮನಾಯಕನ ಪಾಳಯದ ಸಂಸ್ಥಾನದಿಂದ ಬಂದಿದ್ದ ಒಬ್ಬ ಭಟರಾಜು ಎದ್ದು ನಿಂತು ತನ್ನ ಕೈಯಲ್ಲಿದ್ದ ಅತಿ ತೀಕ್ಷ್ಣವಾದ ಒಂದು ಕಠಾರಿಯನ್ನು ಒರೆಯಿಂದ ಹಿರಿದು ಅದನ್ನು ಮೇಲಕ್ಕೆ ಎತ್ತಿ ಝಳಪಿಸುತಾ "ನನ್ನ ಕಠಾರಿಯ ಏಟಿಗೆ ತಮ್ಮ ಎದೆಯನ್ನು ಧೈರ್ಯವಾಗಿ ಕೊಡುವವರು ಈ ಸಭೆಯಲ್ಲಿ ಯಾರಿದಾರೆಯೋ ಅವರನ್ನು ನಾನು ಹೊಗಳುತೇನೆ" ಎಂದು ಹೇಳಿಕೊಳ್ಳುತಾ ಕಠಾರಿಯನ್ನು ಝಳಪಿಸುತಾ ನಿಂತುಕೊಂಡನು. ಆಗ ಅಕಸ್ಮಾತ್ತಾಗಿ ಹೊರಟ ಈ ಮಾತನ್ನು ಕೇಳಿ ಆ ಮಹಾ ಸಭೆಯೆಲ್ಲಾ ಸ್ತಂಭೀಭೂತವಾಯಿತು. ಆ ಕಾಲದಲ್ಲಿ ಶೂರನಾದ ಗುಮ್ಮನಾಯಕನಪಾಳಯದ ಕದರಪ್ಪನಾಯಕನು ತಟ್ಟನೆ ಎದ್ದು ತಾನು ಎದೆಯನ್ನು ಕೊಡುತೇನೆಂದು ಧೈರ್ಯವಾಗಿ ನಿಂತುಕೊಂಡನು. ಕೂಡಲೇ ಆ ಭಟರಾಜುವು ಗರ್ಜನೆಮಾಡುತಾ ತನ್ನ ಕಠಾರಿಯಿಂದ ಕದರಪ್ಪನಾಯಕನ ಎದೆಯಮೇಲೆ ತಿವಿದನು. ಪಾಳಯಗಾರನ ದೇಹವೆಲ್ಲಾ ರಕ್ತಮಯವಾಯಿತು. ಸಮೀಪದಲ್ಲಿದ್ದವರೆಲ್ಲಾ ಗಾಬರಿ

ಪೊಳ್ಳು ಕಠಾರಿ.

ಯಾಗಿ ಹತ್ತಿರಬಂದು ನೋಡಲಾಗಿ, ಆ ಕಠಾರಿಯು ಕ್ರಿತ್ರಿಮದಿಂದ ಮಾಡಿದ್ದೆಂತಲೂ, ರಕ್ತವಾಗಿ ಸುರಿದದ್ದೆಲ್ಲಾ ಅವುಕುಳಿ ಎಂತಲೂ ಗೊತ್ತಾಯಿತು. ಆಗ ಆ ಭಟರಾಜುವು ಆ ಕದರಪ್ಪನಾಯಕನ ಶೌರ್ಯ ವನ್ನು ಕೊಂಡಾಡಿ ಆ ಕ್ಷಣವೇ ಪದ್ಯರೂಪದಲ್ಲಿ ಕವಿತ್ವಮಾಡಿ ಹೇಳಿ ಹೊಗಳಲು, ಧೀರನಾದ ಆ ಪಾಳಯಗಾರನು ಆ ಭಟರಾಜುವಿನ ಚಮ ತ್ಕೃತಿಗೆ ಮೆಚ್ಚಿ ತಾನು ಧರಿಸಿದ್ದ ಮುತ್ತಿನ ಕಂಠಿಯನ್ನು ಅವನ ಕೊರ ಳಿಗೆ ಹಾಕಿ, ತನ್ನ ಶಾಲನ್ನು ಅವನಿಗೆ ಹೊದಿಸಿದನು. ಚಕ್ರವರ್ತಿಯು ಇವರಿಬ್ಬರಿಗೂ ಭಾರಿಯಾಗಿ ಬಹುಮಾನ ಮಾಡಿದನು.

ಆದರೆ ಗೊತ್ತಿಲ್ಲದಹಾಗಿರುವ ಈ ಶೂರರ ಸರಣಿಯಲ್ಲಿ ಇನ್ನೊಂದು ಹೆಸರನ್ನು ಮಾತ್ರಸೇರಿಸಿ ಅಲ್ಲಿಗೆ ನಿಲ್ಲಿಸುತೇನೆ.

ಇಕ್ಕೇರಿ ದೊಡ್ಡ ಸಂಕಂಣ್ಣ ನಾಯಕ.

ಇಕ್ಕೇರಿ ಪಾಳಯಗಾರರಲ್ಲಿ ೩ನೇ ತಲೆಯವನಾದ ದೊಡ್ಡ ಸಂಕ ಣ್ಣನಾಯಕನು ವಿಶೇಷವಾದ ದರ್ಪದಿಂದಲೂ ಖ್ಯಾತಿಯಿಂದಲೂ ಆಳುತಾ ಇದ್ದು, ತರುವಾಯ ರಾಜ್ಯವನ್ನು ತಮ್ಮನಾದ ಚಿಕ್ಕಸಂಕಂಣನ ವಶ ಕ್ಕೆ ಬಿಟ್ಟು, ತೀರ್ಥಯಾತ್ರೆಗಾಗಿಯೂ ದೇಶಸಂಚಾರಕ್ಕಾಗಿಯೂ ಜೋಗಿ ಯಂತೆ ಕಾವಿಶಾಠಿಯನ್ನು ಹೊದ್ದು ನಾಲ್ಕು ಜನ ಸೇವಕರೊಡಗೂಡಿ ಹೊರಟನು. ಬರುಬರುತಾ ದಿಳ್ಳಿಗೆ ಬಂದು ಆ ಪಟ್ಟಣದ ಸೌಂದರ್ಯವನ್ನು ಅಲ್ಲಿನ ಆಯಕಟ್ಟನ್ನೂ ನೋಡುತಾ ಚಕ್ರವರ್ತಿಯಾದ ಅಕ್ಬರ ಪಾದ ಷಹನ ಅರಮನೇ ಬಾಗಿಲೆದುರಿಗೆ ಹೋಗಲಾಗಿ ಅಲ್ಲಿ ಒಂದು ಕತ್ತಿಯು ಕಟ್ಟಿತ್ತು. ಅದೇನೆಂದು ವಿಚಾರಿಸಿಲಾಗಿ—ಅಲ್ಲಿ ಅಂಕುಶಖಾನನೆಂಬ ಒಬ್ಬ ಶೂರ ಇದಾನೆ; ಈ ಕತ್ತಿಯನ್ನು ಯಾವಮನುಷ್ಯ ಕೀಳುತಾನೆಯೋ ಅಂಥವನು ತನ್ನೊಡನೆ ಕಾಳಗಕ್ಕೆ ಬರಬೇಕೆಂದು ಶಾಸನ ಬರೆಯಿಸಿ ದಾನೆ, ಎಂದು ಅಲ್ಲಿನ ಕಾವಲುಗಾರರು ಹೇಳಿದರು. ಆ ಕೂಡಲೆ ದೊಡ್ಡ ಸಂಕಂಣನಾಯಕನು ತನ್ನ ಆಳುಗಳ ಕೈಯಿಂದ ಆ ಕತ್ತಿ ಯನ್ನು ಕಿತ್ತುಹಾಕಿಸಿದನು. ಹೀಗೆ ಗರ್ವ ಭಂಗವಾದ್ದನ್ನು ಕೇಳಿದ ಕೂಡಲೆ ಅಂಕುಶಖಾನನು ಹೆಚ್ಚಾಗಿ ರೌದ್ರವನ್ನು ತಾಳಿ ಅರಮನೇ ಬಾಗಿಲಿಗೆ ಬಂದುನೋಡಿ ದೊಡ್ಡ ಸಂಕಂಣನನ್ನು ತನ್ನೊಡನೆ ಕಾಳ ಗಕ್ಕೆ ಬರಬೇಕೆಂದು ಕರೆದನು. ದಿವಸ ಗೊತ್ತಾಯಿತು. ಪಾದಷಹನು

ನೋಡುವುದಕ್ಕೆ ಬಂದು ಕೂತುಕೊಂಡನು. ಅನೇಕ ಜನ ನೆರೆಯಿತು. ರಂಗಸ್ಥಳದಲ್ಲಿ ಅಂಕುಶಖಾನನೂ ದೊಡ್ಡ ಸಂಕಂಣನಾಯಕನೂ ಕತ್ತಿಯನ್ನು ಹಿರಿದುಕೊಂಡು ಬಂದು ನಿಂತರು. ಇಬ್ಬರಿಗೂ ದ್ವಂದ್ವಯುದ್ಧ ಮೊದಲಾಗಿ ಜರುಗುತಾ ಇರುವಾಗ, ಅತ್ಯಾಶ್ಚರ್ಯಕರವಾದ ಬಂದು ಸಂಗತಿ ನಡೆಯಿತು. ಒಬ್ಬೊಬ್ಬನೂ ಕತ್ತಿ ತಿರುಗಿಸಿದ್ದೂ ಹೊಡೆದದ್ದೂ ಯಾರ ಕಂಣಿಗೂ ಕಾಣಿಸದ ಹಾಗೆ ಪಟ್ಟಾ ಕತ್ತಿವರಸೆ ಅಷ್ಟುವೇಗವಾಗಿ ಜರುಗುತಾ ಇರುವಾಗ, ತಟ್ಟನೆ ಉಭಯವೀರರೂ ಸುಮ್ಮನೆ ನಿಂತುಕೊಂಡರು. ಆಗ ಪಾದಷಹನು ಇದನ್ನು ಕಂಡು ಯಾಕೆ ಸುಮ್ಮನೆ ನಿಂತು ಕೊಂಡೆ, ಖಾನನೊಡನೆ ಕಾಳಗವಾಡುವುದು ನಿನ್ನ ಕೈಯಲ್ಲಿ ಹರಿಯದೋ ಎಂದು ಪಾದಷಹನು ದೊಡ್ಡ ಸಂಕಂಣನನ್ನು ಕುರಿತು ಮೂದಲಿಸಿ ಮಾತನಾಡಲು, ಅದಕ್ಕೆ ಕೆಳದಿ ಧೀರನು—ತಾನು ಸತ್ತ ಹೆಣದ ಮೇಲೆ ಕಾಳಗವಾಡುವಂಥಾ ಹೇಡಿಯಲ್ಲವೆಂದು ಉತ್ತರ ಹೇಳಿ, ಆ ರಂಗಸ್ಥಳದಲ್ಲಿ ಸುಮ್ಮನೆ ಕಂಣನ್ನು ಬಿಟ್ಟುಕೊಂಡು ನಿಂತಿದ್ದ ಅಂಕುಶಖಾನನ ಶರೀರವನ್ನು ಸಂಕಂಣ ತನ್ನ ಕತ್ತೀ ತುದಿಯಿಂದ ಸ್ವಲ್ಪ ಸೋಕಿಸಲು ಸೊಂಟದಿಂದ ಮೇಲೆ ಮೇಲಾಯವೂ ಅದರ ಕೆಳಗೆ ಕೀಳಾಯವೂ ಬೇರೆ ಬೇರೆಯಾಗಿ ಬಿದ್ದು ಬಿಟ್ಟವು. ಹಾಗೆ ಎರಡಾಗಿ ಕತ್ತರಿಸಿ ಹೋಗಿದ್ದ ಶರೀರದ ತುಂಡುಗಳು ಬಂದರಮೇಲೆ ಬಂದು ಹೇಗೆ ನಿಂತಿದ್ದವೊ ಸಂಕಂಣನ ಕತ್ತೀ ವರಸೆಯ ವೇಗ ಇನ್ನು ಎಂಥಾದ್ದೋ ಹೇಳಲಶಕ್ಯವಾಗಿದೆ. ಆಗ ಎಲ್ಲರೂ ಸಂಕಂಣನ ಪರಾಕ್ರಮಕ್ಕೆ ಆಶ್ಚರ್ಯಪಟ್ಟು ಮರದಹಾಗೆ ನಿಂತುಕೊಂಡರು. ಪಾದಷಹನು ಸಂಕಂಣನಿಗೆ ವಿಶೇಷ ಬಹುಮಾನ ಮಾಡಿದನು.

ಈ ಪಾಳಯಗಾರರ ವಿಷಯದಲ್ಲಿ ಇಂಥಾ ಪರಾಕ್ರಮದ ಸಂಗತಿಗಳನ್ನು ಗೊತ್ತಿಲ್ಲದಷ್ಟು ಹೇಳಬಹುದಾಗಿದೆ.

ನ್ಯಾಯಮೂರ್ತಿ ಆಗ್ಗಿ ತಿಮ್ಮನಾಯಕ.

ಇದುವರೆಗೂ ಪರಾಕ್ರಮದ ವಿಷಯದಲ್ಲಿ ಕೆಲವು ಇತಿಹಾಸಗಳನ್ನು ಹೇಳಿ ತಮಗೆ ಅಸಹ್ಯವನ್ನು ಹುಟ್ಟಿಸಿದ ದೋಷಪರಿಹಾರಕ್ಕಾಗಿ ಈ ಪಾಳಯಗಾರರ ಬೇರೇ ಸದ್ಗುಣಗಳನ್ನು ವರ್ಣಿಸಲು ಯತ್ನಿಸುತೇನೆ. ದೊರೆತನ ಮಾಡುವವರು ಯಾರೇ ಆಗಲಿ ಪರಾಕ್ರಮವ್ತೋ

ಔದಾರ್ಯವೋ, ಕ್ಷಮೆಯೋ, ಸದಾಚಾರವೋ, ವಿದ್ಯಾಪಕ್ಷಪಾತತ್ವವೋ, ದಯಾರಸವೋ, ಔಚಿತ್ಯಜ್ಞಾನವೋ, ವಿನಯವೋ, ಪರೋಪಕಾರಬುದ್ಧಿಯೋ, ದಯಾಪರತ್ವವೋ, ಪೂರ್ವಾಪರಜ್ಞಾನವೋ, ಡಂಭವೋ, ಕ್ರೋಧವೋ, ಪ್ರಜಾಹಿಂಸೆಯೋ, ಕ್ರೌರ್ಯವೋ, ಕಾಠಿಣ್ಯವೋ, ಅಲಕ್ಷ್ಯವೋ, ತೃಪ್ತಿಯಾಗದ ದ್ರವ್ಯಾಕಾಂಕ್ಷೆಯೋ, ಸ್ವಪ್ರಯೋಜನ ಪರಾಯಣತೆಯೋ, ಸ್ವಜನಾಭಿಮಾನವೋ, ವಾಕ್ಕಾಠಿಣ್ಯವೋ, ಬಡವರಲ್ಲಿ ತಿರಸ್ಕಾರವೋ, ಬಲ್ಲಿದರಲ್ಲಿ ದಾಸದಂಡವೋ, ಇವೇ ಮೊದಲಾದ ಅನೇಕ ಗುಣದೋಷಗಳಿಗೆ ಪ್ರಖ್ಯಾತರಾಗಿದಾರೆ. ಆದರೆ ಪಕ್ಷಪಾತವಿಲ್ಲದೆ ನ್ಯಾಯವಿಮರ್ಶೆಯ ತೀರ್ಮಾನ ಮಾಡುವ ಗುಣದಲ್ಲಿ ಮಾತ್ರ ಇವರಿಗೆ ಖ್ಯಾತಿ ಬಂದದ್ದು ಕೇವಲ ಅಪೂರ್ವವಾಗಿದೆ. ಯುಗಾಂತರದಲ್ಲಿ ಜನಕಮಹಾರಾಯನು ಸಿಂಹಾಸನದ ಮೇಲೆ ಕೂತು ಒಂದು ಕಾಲನ್ನು ತಣ್ಣೀರಲ್ಲಿಯೂ ಒಂದು ಕಾಲನ್ನು ಬಿಸಿನೀರಲ್ಲಿಯೂ, ಇಟ್ಟುಕೊಂಡು ಸಮತೂಕವಾಗಿ ನ್ಯಾಯವಿಮರ್ಶೆಯನ್ನು ಮಾಡುತಿದ್ದನೆಂದು ಪುರಾಣಗಳಲ್ಲಿ ಹೇಳಿದೆ. ಆದರೆ ಇಂಥಾ ಜನಕರಾಯ, ಸಗರಚಕ್ರವರ್ತಿ ಇವರು ಹೊರತು ಇನ್ನು ಯಾರ ಹೆಸರನ್ನೂ ಪುರಾಣಗಳೂ ಕೂಡ ಕೊಟ್ಟಿಲ್ಲ. ಈ ಜನಕಮಹಾರಾಯ, ಸಗರಚಕ್ರವರ್ತಿ ಇಂಥವರು ದೇವಾಂಶಸಂಭೂತರು. ಸಾಧಾರಣ ಹುಲು ಮನುಜರ ಪಾಡನ್ನಂತೂ ಕೇಳತಕ್ಕದ್ದೇ ಇಲ್ಲ.

ನ್ಯಾಯಮೂರ್ತಿ ಅಗ್ಗಿ ತಿಮ್ಮ ನಾಯಕ.

ಆದರೆ ಈ ವಿಧಿಗೆ ಪ್ರತಿಷೇಧದ ಪ್ರಭೆಯು ಗುಮ್ಮನಾಯಕನ ಪಾಳಯದ ಪಾಳಯಗಾರರ ವಂಶದಲ್ಲಿ ಹೊಳೆಯುತಿದೆ. ಈ ವಂಶದ ೧೩ ನೇ ದೊರೆಯಾದ ಅಗ್ಗಿ ತಿಮ್ಮನಾಯಕನೆಂಬಾತನು ನ್ಯಾಯವಿಮರ್ಶೆಗೆ ಪ್ರಖ್ಯಾತಿಯನ್ನು ಹೊಂದಿದ ಮಹಾ ಪುರುಷನಾಗಿದಾನೆ. ಅಪರಾಧ ಮಾಡಿದವರಿಗೆ ಈತನು ಕ್ರೂರವಾದ ದಂಡನೆಯನ್ನು ಕೊಡಿಸುತಾ ಇದ್ದನು. ಈತನ ತಮ್ಮನಾದ ಕೃಷ್ಣಪ್ಪನಾಯಕನೆಂಬುವನು ಸುಂದರಿಯಾದ ಒಬ್ಬ ಸ್ತ್ರೀಯನ್ನು ಕೆಡಿಸಿ ಸ್ವಾಧೀನ ಮಾಡಿಕೊಂಡು ದುರ್ಮಾರ್ಗನಾಗಿದ್ದನು. ಆ ಹೆಂಗಸಿನ ಗಂಡನು ಇದನ್ನು ತಿಳಿದು ಅವಳ ಮೂಗನ್ನೂ ಮೊಲೆಯನ್ನೂ ಕುಯಿದುಬಿಟ್ಟನು. ಆ ಕೃಷ್ಣಪ್ಪನಾಯಕನು ಅವನ

ಮೇಲಿನ ದ್ವೇಷದಿಂದ ಅವನ ಕಿವಿ, ಮೂಗುಗಳನ್ನು ಕುಯಿದನು. ಈ ಫಿರ್ಯಾದು ದೊರೆಯ ಮುಂದೆ ಬರಲು ತಿಮ್ಮನಾಯಕನು ಸಾಮಾಜಿಕರನ್ನು ಪಂಚಾಯಿತರನ್ನಾಗಿರಿಸಿಕೊಂಡು ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡಿ ತಮ್ಮನೆಂಬ ಅಭಿಮಾನವಿಡದೆ ಕೃಷ್ಣಪ್ಪನಾಯಕನ ಕಿವಿಮೂಗುಗಳನ್ನು ಕುಯಿಸಲು, ಮೂರು ದಿವಸದೊಳಗೆ ಆ ಕೃಷ್ಣಪ್ಪನು ಮೃತಪಟ್ಟನು.

ಈ ದೊರೆಯ ಹಿರೀ ಹೆಂಡತಿ ಹೊಟ್ಟೆಯಲ್ಲಿ ಹುಟ್ಟಿದ ಹಿರೀಮಗ ವಸಂತನಾಯಕನು ವಿದ್ಯಾವಂತ, ನೀತಿಜ್ಞ, ಸಾತ್ವಿಕಸ್ವಭಾವವುಳ್ಳವನು. ದೊರೆಯ ಎರಡನೇ ಹೆಂಡತೀ ಹೊಟ್ಟೆಯಲ್ಲಿ ಹುಟ್ಟಿದ ನಾಗಪ್ಪನಾಯಕನೆಂಬುವನಾದರೋ ದುರ್ಮಾರ್ಗ, ಅನೇಕ ನೀಚಕೃತ್ಯಗಳನ್ನು ಮಾಡಿದವನು. ದೊರೆಯು ಇದನ್ನು ತಿಳಿದು ನಾಗಪ್ಪ ಮಾಡಿದ ಅಪರಾಧಕ್ಕೆ ಮಗನನ್ನು ಮೂರು ತಿಂಗಳವರೆಗೆ ಕಾರಾಗೃಹದಲ್ಲಿಡಿಸಿದನು. ಆ ಗಡಬ ಕಳೆದ ಮೇಲೆ ಆ ನಾಗಪ್ಪನನ್ನು ಎಷ್ಟು ಯೋಗ್ಯವಾದ ಸ್ಥಿತಿಯಲ್ಲಿಟ್ಟು ಅವನಿಗೆ ಬುದ್ಧಿ ಹೇಳಿಸಿದಾಗ್ಯೂ ಅವನು ತನ್ನ ದುಸ್ವಭಾವವನ್ನು ಬಿಡಲಿಲ್ಲ. ಮುಂದಕ್ಕೆ ತಾನು ದೊರೆತನವನ್ನು ಆಕ್ರಮಿಸಲು ಹಿರೀ ಅಣ್ಣನಾದ ವಸಂತನಾಯಕ ಅಡ್ಡಿಯಾಗಿದಾನೆಂದು ಯೋಚಿಸಿ, ಅವನಿಗೆ ಅಡಿಗೆಯವನ ಮೂಲಕ ಆಹಾರದಲ್ಲಿ ವಿಷವನ್ನು ಹಾಕಿಸಿದನು. ಇದು ದೊರೆಗೆ ತಿಳಿಯಿತು. ಅವನು ಮಗ ನಾಗಪ್ಪನನ್ನೂ, ಅಡಿಗೆಯವನನ್ನೂ ಕರೆಯಿಸಿ ಸಾಮಾಜಿಕರ ಮುಂದೆ ವಿಚಾರಣೆ ಮಾಡಿಸಿ, ಆ ಪಾಚಕನಿಗೂ ಮಗನಾದ ನಾಗಪ್ಪನಿಗೂ ಮರಣದಂಡನೆಯನ್ನು ವಿಧಿಸಿದನು. ಪಾಚಕನಿಗೇನೋ ಶಿರಚ್ಛೇದನವಾಯಿತು. ಆಗ ಮಹಾಸಾತ್ವಿಕನಾದ ಹಿರೀ ರಾಜಕುಮಾರ ವಸಂತನಾಯಕನು ತಂದೆಯ ಸಮೀಪಕ್ಕೆ ಬಂದು "ಬುದ್ಧೀ ನನ್ನ ತಮ್ಮ ಮರಣದಂಡನೆ ಅನುಭವಿಸುವುದನ್ನು ನೋಡಿ ನಾನು ಸಹಿಸಲಾರೆ, ಅವನ ಅಪರಾಧವನ್ನು ಕ್ಷಮಿಸಬೇಕು, ಇಲ್ಲದಿದ್ದರೆ ನಾನು ಪ್ರಾಣತ್ಯಾಗ ಮಾಡಿಕೊಳ್ಳುತೇನೆ" ಎಂದು ಬೇಡಿಕೊಂಡನು. ಆಗ ದೊರೆಯು ದಯದಿಂಧ ಆ ನಾಗಪ್ಪನೆಂಬ ದ್ರೋಹಿಗೆ ಮರಣದಂಡನೆಯನ್ನು ತಪ್ಪಿಸಿ ಅವನನ್ನು ಗಡೀಪಾರು ಮಾಡಿಸಿದನು. ಈ ದೊರೆಯ ನಿಷ್ಪಕ್ಷಪಾತಕ್ಕೂ ಅವನ ದರ್ಪಕ್ಕೂ, ಸ್ವದೇ

ಶೀಯರೂ ಅನ್ಯದೇಶೀಯರೂ ಕೂಡ ನಡಗುತಿದ್ದರು. ಇಂಥಾ ಪುಣ್ಯಾತ್ಮನಿಗೀಗ ನ್ಯಾಯಮೂರ್ತಿಯೆಂಬ ಬಿರುದು ಸಲ್ಲುವುದು. ಇದನ್ನು ಕೇಳಿದರೆ ಸಗರ ಚಕ್ರವರ್ತಿಯು ತನ್ನ ಮಗ ಅಸಮಂಜ ಪ್ರಜೆಗಳ ಮಕ್ಕಳನ್ನು ಸರಯೂ ನದಿಗೆ ತಳ್ಳಿ ಸಂತೋಷಪಡುತಾ ಇದ್ದದಕ್ಕಾಗಿ, ರಾಜಪುತ್ರನಿಗೆ ಕಣ್ಣನ್ನು ಕಟ್ಟಿಸಿ ಕಾಡಿಗೆ ಕಳುಹಿಸಿದ ಕಥೆ ಎಲ್ಲರಿಗೂ ಜ್ಞಾಪಕಕ್ಕೆ ಬರುವುದು ಆಶ್ಚರ್ಯವಲ್ಲ. ಹೀಗಿದ್ದಕಾರಣ ಈ ಪುರುಷ ಶ್ರೇಷ್ಠನಿಗೆ ಅಗ್ಗಿ ತಿಮ್ಮನಾಯಕನೆಂದು ಹೆಸರು ಬಂದ ಹಾಗೆ ತೋರುವುದು. ಅಗ್ಗಿ ಎಂದರೆ ತೆಲಗಿನಲ್ಲಿ ಬೆಂಕಿ ಎಂದು ಅರ್ಥ; ಎಂದರೆ ಯಾರು ಮುಟ್ಟಿದರೂ ಪಕ್ಷಪಾತವಿಲ್ಲದೆ ಸುಡುವ ಬೆಂಕಿಯಂಥಾ ಪುರುಷನೆಂದು ಆ ಅಡ್ಡ ಹೆಸರಿಗೆ ಅರ್ಥವಾಗಬಹುದು.

ರಾಮಕ್ಕನಾಯಿಕರಾಲು.

ಈ ಗುಮ್ಮನಾಯಕನ ಪಾಳಯದ ಚರಿತ್ರೆಯಲ್ಲಿ ಎಂದಿಗೂ ಯಾರೂ ಮರೆಯಕೂಡದಂಥಾ ಇನ್ನೊಂದು ಹೆಸರು ಇದೆ. ಈ ಪಾಳಯಪಟ್ಟಿನ ೨೩ ನೇ ದೊರೆಯಾದ ನಾರಸಿಂಹನಾಯಕನ ಕಾಲದಲ್ಲಿ ಪ್ರಬಲರಾದ ಹೊರಗಿನ ಶತ್ರುಗಳ ಕಾಟಕಾಯಗಳು ಬಹುವಾಗಿದ್ದವು. ಮೊಟ್ಟಮೊದಲು ಪೂನೆ ಶ್ರೀಮಂತ ಮಾಧವರಾಯನು ಭಾರಿ ಸೇನೆಯೊಡನೆ ವಿಜಯಾರ್ಥವಾಗಿ ದಕ್ಷಿಣ ದೇಶಕ್ಕೆ ಬಂದು ಇದ್ದಾಗ, ಆ ಮರಾಟೆಯವರ ಹಾವಳಿಯನ್ನು ಗುಮ್ಮನಾಯಕನ ಪಾಳಯ ತಪ್ಪಿಸಿಕೊಳ್ಳಲಿಲ್ಲ. ಮಾಧವರಾವ್ ಪೇಶ್ವೆಯು ಈ ಸೀಮೆಗೆ ಬಂದು ಈ ಪಾಳಯಗಾರನಿಂದ ಭಾರಿ ಮೊಬಲಗನ್ನು ನಸರಾಗಿಯೂ ಪ್ರತಿವರ್ಷಕ್ಕೂ ಖಂಡಣಿ ೪೦,೦೦೦ ರೂಪಾಯಿ ರೊಕ್ಕವಾಗಿಯೂ ವಸೂಲ್ ಮಾಡಿಕೊಂಡು ಹೋದನು. ಇವನ ಕಡೆ ಮರಾಟೆ ದಂಡಿನವರು ಲೂಟಿಯಾಗಿಯೂ, ಸುಲಿಗೆಯಾಗಿಯೂ ರಾಜ್ಯದ ಹಣವನ್ನು ಗೋರಿಕೊಂಡು ಹೋದರು. ಇತ್ತ ಮರಾಟೆಯವರು ಹೊರಟುಹೋದ ಕೂಡಲೇ ಕ್ರಿ॥ ಶ॥ ಸ್ ೧೭೫೯-೬೦ ಕ್ಕೆ ಸಲ್ಲುವ ವಿಕ್ರಮ ಸಂವತ್ಸರದಲ್ಲಿ ಹೈದರಾಬಾದು ಸಂಸ್ಥಾನದಿಂದ ನಿಸಾಮನು ಭಾರಿಯಾದ ದಂಡಿನೊಡನೆ ಬಂದು ಈ ಗುಮ್ಮನಾಯಕನ ಪಾಳಯದ ಸೀಮೆಯಲ್ಲಿ ಬಹಳ ದಾಂಧಲೆ ಮಾಡಿ ಈ ಪಾಳಯಗಾರನು ವರ್ಷ ೧ಕ್ಕೆ ೩೫,೦೦೦ ರೂ॥ ಪೊಗದಿ ಬೇರೆ ನಸ

ರಾಣಿ ಸಹಾ ಕೊಡಬೇಕೆಂದು ಸುಲಿಗೇ ಮಾಡಿಕೊಂಡು ಹೋದನು. ಇದಾದೊಡನೆಯೇ ಶ್ರೀರಂಗಪಟ್ಟಣದ ಹೈದರಲ್ಲಿಯು ಅನೇಕ ಪಾಳಯ ಪಟ್ಟುಗಳನ್ನು ಜೈಸಿಕೊಂಡು ಹೈದರಾಬಾದು ನಿಸಾಮು ಇಟ್ಟಿದ್ದ ಠಾಣ್ಯಾಗಳನ್ನು ಅಲ್ಲಲ್ಲಿ ಎಬ್ಬಿಸಿ ಮೈಸೂರು ಠಾಣ್ಯಾಗಳನ್ನು ಇರಿಸುತಾ ಗುಮ್ಮನಾಯಕನ ಪಾಳಯಕ್ಕೂ ಬಂದು ತನ್ನ ಮಿತ್ರನಾದ ಮೀರಸಾಬಿಗೆ ಗುರುಂಕೊಂಡೆಯನ್ನು ಜಹಗೀರಾಗಿ ಕೊಟ್ಟು, ಅದರ ಸುತ್ತಮುತ್ತ ಇರುವ ಪಾಳಯಪಟ್ಟುಗಳನ್ನು ಕೃತಘ್ನತೆಗೂ ದ್ರೋಹಕ್ಕೂ ಹೆಸರು ಪಡೆದ ಆ ಸಾಬಿಯು ಮೇಲ್ವಿಚಾರಣೆ ಮಾಡಿಕೊಳ್ಳುವ ಹಾಗೆ ನೇಮಿಸಿದನು. ಗುಮ್ಮನಾಯಕನ ಪಾಳಯದವರು ಖಂಡಣಿ ಮೊಬಲಗು ೩೫,೦೦೦ ರೂಪಾಯಿಯನ್ನು ಮೀರಸಾಬಿಯ ಮೂಲಕ ಪಾವತಿ ಮಾಡಬೇಕೆಂದು ಗೊತ್ತುಮಾಡಿ, ಈ ಸಂಸ್ಥಾನಕ್ಕೆ ಸೇರಿದ ಗೋರಂಟಲು ಸಮ್ಮತು ಕೊಡಿಕೊಂಡೆ ಸೀಮೆಯನ್ನು ನಾರಸಿಂಹನಾಯಕನ ವಶಮಾಡುವ ಹಾಗೆ ಮೀರಸಾಬಿಗೆ ಹೇಳಿ ಹೈದರಲ್ಲಿಯು ಮುಂದಕ್ಕೆ ಹೊರಟು ಹೋದನು.

ಈ ಮೇಲೆ ಕಂಡ ಕಾಟಕಾಯಗಳಿಂದಲೂ ಇನ್ನೂ ಈ ಮೀರಸಾಬಿ ಮಾಡಿದ ಇತರ ದ್ರೋಹದಿಂದಲೂ ನಾರಸಿಂಹನಾಯಕನಿಗೆ ದೇಹಸ್ಥಿತಿ ಕೆಟ್ಟು ವಾಯುಉಪದ್ರಪ್ರಾಪ್ತವಾಯಿತು. ಬಿಕ್ಕಳಿಕೆ ಹುಟ್ಟಿ ಮಾತು ನಿಂತುಹೋಯಿತು. ಹೊರಗಡೆಯೋ ಅನೇಕ ಶತ್ರುಗಳು ಹಣಕಿತ್ತುಕೊಳ್ಳಲು ಕೊಡುವ ಬಾಧೆ, ದೇಶದ ಸಮೀಪದಲ್ಲಿಯೋ ಮೀರಸಾಬಿಯ ಹಿಂಸೆ, ದೊರೆಯೋ ಪ್ರಜ್ಞೆತಪ್ಪಿ ಮಲಗಿರುವ ಸ್ಥಿತಿ, ಇಂಥಾ ಕಷ್ಟಕಾಲದಲ್ಲಿ ರಾಜ್ಯದ ಆಡಳತವನ್ನು ನಡೆಸುವುದು ಸಾಧಾರಣವಾದ ಕೆಲಸವಲ್ಲ. ಆಗ ದೊರೆಯ ಪಟ್ಟದ ರಾಣಿಯಾದ ರಾಮಕ್ಕನಾಯಿಕರಾಲು ಎಂಬ ರಾಣಿಯು ಮೇಲೆ ಎಲ್ಲಾ ಭಾರವೂ ಬಿತ್ತು. ಈಕೆ ವಿದ್ಯಾವಂತೆ, ವಿಚಕ್ಷಣೆಯುಳ್ಳವಳು, ಧರ್ಮಾಧರ್ಮಗಳನ್ನು ಅರಿತು ರಾಜ್ಯಭಾರ ಮಾಡುವ ಸಾಮರ್ಥ್ಯವಂತಳು. ಈಕೆ ದೇಶದ ಆಡಳತಗಳನ್ನು ನಡೆಸುತಾ, ಮೇಲೆಕಂಡ ಭಾರಿಯಾದ ಖರ್ಚುಬಾಬುಗಳಿಗೆ ದ್ರವ್ಯವನ್ನು ಒದಗಿಸುವುದಕ್ಕಾಗಿ ಸರ್ಕಾರಕ್ಕೆ ಬರಬೇಕಾದ ಹಣಗಳನ್ನು ಬಿಗಿಯಾಗಿ ವಸೂಲ್ಮಾಡಿಸುತಾ ಬಂದಳು.

ಆ ಕಾಲದಲ್ಲಿ ಈ ರಾಣಿಯಾದ ರಾಮಕ್ಕನಾಯಿಕರಾಲು ತೋರಿಸಿದ ವಿಚಕ್ಷಣೆಯು ಮಿತಿ ಇಲ್ಲದ ಶ್ಲಾಘನೆಗೆ ಅರ್ಹವಾದ್ದಾಗಿದೆ. ಆ ಗುಣದ ಯೋಗ್ಯತೆಯನ್ನು ತಕ್ಕ ಹಾಗೆ ಬಣ್ಣಿಸಲು ನನಗೆ ಯೋಗ್ಯತೆ ಸಾಲದಾಗಿ, ಇಟ್ಟ ನಾಮವನ್ನು ಇಟ್ಟಂತೆ ಸೂಚಿಸುತೇನೆ. ಇವರ ದಳವಾಯಿ ಸಾನೆ ನರಸಿಂಹಯ್ಯನೆಂಬುವನು ಸ್ವಪ್ರಯೋಜನದ ಮೇಲೆ ದೃಷ್ಟಿಇಟ್ಟುಕೊಂಡು ಸರ್ಕಾರದ ಹಣಕ್ಕೆ ದ್ರೋಹವಾಡಿದನೆಂದು ತಿಳಿಯಬಂತು. ಆಗ ರಾಣಿಯು ಸ್ತ್ರೀಸ್ವಭಾವಕ್ಕೆ ಸಹಜವಾದ ದುಡುಕನ್ನು ತೋರಿಸದೆ, ಸರ್ವಾಧಿಕಾರಿ ವಕೀಲ ಬಾಬೂರಾಯ, ಸಮುಖದ ದೊಡ್ಡ ಗುರಿಕಾರ ರಘುಪತಿ ವೆಂಕಟಪ್ಪ, ಬಳ್ಳಾಪುರದ ಪಾಳಯಗಾರರು ಈ ಮೂವ್ವರನ್ನೂ ಕರೆಯಿಸಿಕೊಂಡು ಅವರಲ್ಲಿ ಆಲೋಚನೆ ಮಾಡಿ ಈ ಮೂರು ಮಂದಿಯನ್ನೂ ಒಂದು ನ್ಯಾಯಸ್ಥಾನವಾಗಿ ಏರ್ಪಡಿಸಿದಳು. ಈ ಅಧಿಕಾರ ಸ್ಥಾನಕ್ಕೆ ಸಾನೆ ನರಸಿಂಹಯ್ಯನನ್ನು ಕರೆಕಳುಹಿಸಿದರು. ತನ್ನ ಪ್ರಾಣಕ್ಕೆ ಏನೂ ಅಪಾಯ ಉಂಟಾಗುವುದಿಲ್ಲವೆಂದು ಮೇಲೆ ಕಂಡ ಮೂರು ಮಂದಿಯೂ ಭರವಸೆ ಕೊಟ್ಟರೆ ತಾನು ಬರುತೇನೆಂದು ನರಸಿಂಹಯ್ಯ ಉತ್ತರ ಹೇಳಿ ಕಳುಹಿಸಿದ. ಆಗ ರಾಣಿಯು ಅತ್ಯಾಗ್ರಹದಿಂದ ಇಬ್ಬರು ರಾಣ್ಯಾದ ಗುರಿಕಾರರು, ೨೦೦ ಮಂದಿ ಆಯುಧಪಾಣಿಗಳು ಸಹಾ ಆ ನರಸಿಂಹಯ್ಯನ ಮನೆ ಬಳಿಗೆ ಹೋಗಬೇಕು ; ೧೦೦ ಮಂದಿ ಅವನ ಮನೆಯನ್ನು ಸುತ್ತಿಕೊಂಡು ಪಹರೆ ಇರಬೇಕು, ಉಳಿದ ೧೦೦ ಮಂದಿ ಆ ನರಸಿಂಹಯ್ಯನನ್ನು ಮನೆಯೊಳಗೆ ಹಿಡಿದು ನ್ಯಾಯಸ್ಥಾನಕ್ಕೆ ಹಾಜರ್ಮಾಡಬೇಕು, ಎಂದು ಅಪ್ಪಣೆ ಮಾಡಿದಳು: ಈ ಅಪ್ಪಣೇ ಪ್ರಕಾರ ರಾಣ್ಯಾದವರು ಅವನನ್ನು ಅಧಿಕಾರಸ್ಥಾನಕ್ಕೆ ಹಾಜರ್ಮಾಡಿದರು. ಆ ಸಭೆಯವರು ನ್ಯಾಯಸ್ಥಾನದಲ್ಲಿ ಕೂತುಕೊಂಡರು. ರಾಣಿಯು ಇಂಗಡವಾಗಿ ಬೇರೆ ಕೂತುಕೊಂಡಳು. ಅಪರಾಧಿಯ ವಿಚಾರಣೆಯಾಯಿತು. ರಾಜದ್ರೋಹ ಮಾಡಿದ ಅಪರಾಧಗಳು ಅನೇಕವಾಗಿ ಅವನ ಮೇಲೆ ಹೊರಲಾಗಿ, ಇವನಿಗೆ ಏನು ಶಿಕ್ಷೆ ಕೊಡಬಹುದೆಂದು ಆಕೆ ಆ ಸಭಿಕರನ್ನು ಕೇಳಿದಳು. ತರುವಾಯ ಅವರ ಅಭಿಪ್ರಾಯ ಒಂದೊಂದೂ ಭಿನ್ನಿಸಿತು. ಆಗ ರಾಣಿಯು ಅಪ್ಪಣೇ ಮಾಡಿದ್ದು ಹೇಗೆಂದರೆ :—

ಈ ಅಪರಾಧಿಯು ನಮ್ಮ ಸಂಸ್ಥಾನದಲ್ಲಿ ವಂಶಪಾರಂಪರ್ಯವಾಗಿ

ಉದ್ಯೋಗಮಾಡಿ ಅಭಿವೃದ್ಧಿಗೆ ಬಂದನು, ಇಂಥವನಿಗೆ ವಿಶೇಷವಾಗಿ ಕ್ರೂರವಾದ ದಂಡನೆಯನ್ನು ನಾವು ಕೊಡಬಾರದು ಎಂದು, ನಿರ್ಧರಿಸಿ ಸ್ವಲ್ಪ ದಯವನ್ನು ತೋರಿಸಬೇಕಾಗಿದೆ. ಇವನ ಆಸ್ತಿಯನ್ನೆಲ್ಲಾ ವಿಚಾರಿಸಲಾಗಿ ಅದರ ಬೆಲೆ ೧೨,೦೦೦ ॰ ವರಹ ವೆಂತ ಗೊತ್ತಾಗಿದೆ. ಇದರಲ್ಲಿ ೧೦,೦೦೦ ॰ ವರಹವನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಬೇಕು ; ಅವನ ಜೀವನಕ್ಕೆ ೨.೦೦೦ |॰ ವರಹವನ್ನು ಬಿಟ್ಟು ಬಿಡಬೇಕು, ಅವನ ಮನೆತನದವರಲ್ಲಿ ಅರಮನೆಗೆ ಸಂಬಂಧಪಟ್ಟ ಯಾವ ಪದಾರ್ಥವಿದ್ದರೂ ಅದೆಲ್ಲವನ್ನೂ ತೆಗೆದುಕೊಳ್ಳಬೇಕು ; ಇವರ ಉಂಬಳಿ ಭೂಮಿಯನ್ನೆಲ್ಲಾ ಸರ್ಕಾರಕ್ಕೆ ಸೇರಿಸಕೊಳ್ಳಬೇಕು; ಅವನನ್ನೂ ಅವನ ಮನೇ ಜನರನ್ನೂ ಈ ಸಂಸ್ಥಾನದ ಗಡಿಯಿಂದಾಚೆಗೆ ಕಳುಹಿಸಿ, ಇವರನ್ನು ಬಳ್ಳಾಪುರದ ದೊರೆಗಳ ವಶಮಾಡತಕ್ಕದ್ದು. ಹೀಗೆಂದು ರಾಣಿಯು ತೀರ್ಮಾನ ಮಾಡಿದಳು.

ತರುವಾಯ ರಾಮಕ್ಕನಾಯಿಕರಾಲು ಆ ಅಪರಾಧವನ್ನು ಕುರಿತು ವಿಚಾರಣೆ ಮಾಡಿದ ಅಧಿಕಾರಿಗಳಿಗೆ ಅವರ ಯೋಗ್ಯತಾನುಸಾರವಾಗಿ ವಸ್ತ್ರಾಭರಣಗಳನ್ನು ಕೊಟ್ಟು ಮರ್ಯಾದೆ ಮಾಡಿದಳು.

ಇಂಥಾ ವಿವೇಕ, ನ್ಯಾಯಮಿಮರ್ಶೆ, ದೂರದೃಷ್ಟಿ, ಸಾತ್ವಿಕಸ್ವಭಾವ, ಕಡೆಗೆ ದಯಾರಸ, ರಾಜ್ಯಭಾರದ ಚಾತುರ್ಯ, ದರ್ಪ ಸಹಾ ಸ್ತ್ರೀಯರಲ್ಲಿ ಹೀಗೆ ಒಟ್ಟಿಗೆ ಸಿಕ್ಕುವುದೇನೋ ಅನುಮಾನ ; ಆದರೆ ಅವುಗಳು ಒಟ್ಟಿಗೆ ಎಷ್ಟುಜನ ಪುರುಷರಲ್ಲಿ ತಾನೇ ದೊರೆಯುವುದೋ ನಾನರಿಯೆ.

ಈ ಪಾಳಯಗಾರರೆಲ್ಲಾ ಜಾತಿಯಲ್ಲಿ ವಿಶೇಷವಾಗಿ ವ್ಯಾಧರು ಅಥವಾ ಬೇಡರೇ ಆಗಿದಾರೆ. ಇವರಲ್ಲಿ ಊರು

ಮತ.

ಬೇಡರು ಮೇಸ ಬೇಸಬೇಡರು ಎಂದು ಎರಡು ಪಂಗಡವಿದೆ. ಇವರಲ್ಲಿ ಅನೇಕರು ನರಸಿಂಹದೇವರ ಸಾಲಿಗ್ರಾಮವನ್ನಿಟ್ಟುಕೊಂಡು ಪೂಜಿಸುತ್ತಾರೆ. ಚಿತ್ರದುರ್ಗದ ಕಡೆಯವರು ಸಿದ್ಧಯ್ಯ, ರಂಗಯ್ಯ, ಚಿತ್ರದೇವರು ಎಂಬ ವಿಗ್ರಹಗಳನ್ನು ಇಟ್ಟು ಪೂಜೆ ಮಾಡುವುದೂ ಉಂಟು. ಗುಮ್ಮನಾಯಕನ ಪಾಳಯದ ಪಾಳಯಗಾರರೆಲ್ಲಾ ಕಡಪ ಡಿಸ್ಟ್ರಿಕ್ಟ ಕದರಿಯಲ್ಲಿರುವ ನರಸಿಂಹ ಸ್ವಾಮಿಯು ತಮ್ಮ

ಮನೆ ದೇವರು ಎಂದು ಆ ದಿವ್ಯಸ್ಥಳಕ್ಕೆ ನಡೆದುಕೊಳ್ಳುತಾರೆ. ಚಿತ್ರದುರ್ಗದ ಪಾಳಯಗಾರರ ಮನೆತನದವರೆಲ್ಲಾ ಚಿಕ್ಕಂಣನಾಯಕನ ಆಳಿಕೆಯೊಳು ಕ್ರಿ॥ ಶ॥ ೧೬೭೮ ರಲ್ಲಿ ಶೈವಮತವನ್ನವಲಂಬಿಸಿ ಲಿಂಗವನ್ನು ಕಟ್ಟಿಕೊಂಡರು. ಹಾಗೆ ನಾಲ್ಕು ತಿಂಗಳು ಇದ್ದು ತರುವಾಯ ಆ ಮತ ತಮಗೆ ಸರಿಯಲ್ಲವೆಂದು ಲಿಂಗವನ್ನು ಕಿತ್ತುಹಾಕಿಬಿಟ್ಟರು. ರಾಜಕುಟುಂಬಕ್ಕೆ ಸೇರಿದ ಒಬ್ಬ ಹೆಂಗಸು ಮಾತ್ರ ಸಾಯುವವರೆಗೂ ಲಿಂಗವಂತಳೇ ಆಗಿ ಬೇರೆ ವಾಸಮಾಡುತಿದ್ದಳು. ಹಾಗಲವಾಡಿಯ ಪಾಳಯಗಾರರಲ್ಲಿ ಒಬ್ಬನಾದ ಭೈರನಾಯಕ ಎಂಬಾತನಿಗೆ ಮಕ್ಕಳಿರಲಿಲ್ಲ. ಒಬ್ಬ ಮುದುಕನಾದ ಶಿವಾಚಾರದ ಜಂಗಮಯ್ಯ ತಾಂಬೂಲ ಪ್ರಸಾದವನ್ನು ಕೊಟ್ಟನಂತೆ. ಅದನ್ನು ರಾಜಪತ್ನಿ ಸೇವಿಸಲು ಗರ್ಭನಿಂತು ಗಂಡುಶಿಶುವಾಯಿತು. ಆ ಮಗುವಿಗೆ ಎರಡು ಕಣ್ಣೂ ಕಾಣಿಸದೆ ಹೋಗಿತ್ತು. ಆ ಶಿಶುವಿಗೆ ಲಿಂಗಧಾರಣೆ ಮಾಡಿಸಿದರೆ ಕಣ್ಣು ಕಾಣುವುದೆಂದು ಆ ಜಂಗಮ ಹೇಳಿದ ಪ್ರಕಾರ ಲಿಂಗಧಾರಣೇ ಮಾಡಿಸಿದರು. ಕಣ್ಣುಬಂತು. ಆ ಮುದಿ ಜಂಗಮನಲ್ಲಿದ್ದ ಭಕ್ತಿಯಿಂದ ಆತನಿಗೆ ಮುದಿಯಪ್ಪನಾಯಕನೆಂದು ನಾಮಕರಣ ಮಾಡಿದರು. ಪಾಳಯಗಾರರೆಲ್ಲಾ ಶಿವಾಲಯಗಳನ್ನೂ ವಿಷ್ಣುವಾಲಯಗಳನ್ನೂ ಕಟ್ಟಿಸಿ ಬಹು ಭಕ್ತಿಯಿಂದ ಪೂಜಿಸುತಿದ್ದರು. ದೇವರಲ್ಲಿಯೂ ಬ್ರಾಹ್ಮಣರಲ್ಲಿಯೂ ಇವರಿಗೆ ಬಹು ಭಕ್ತಿಯಿತ್ತು.

ಇವರಲ್ಲಿದ್ದ ಒಂದೆರಡು ವಿಶೇಷ ಸಂಗತಿಗಳನ್ನು ಅರಿಕೆ ಮಾಡುತೇನೆ. ಹಿಂದೆ ಪರಾಕ್ರಮದಲ್ಲಿ ಮಹಾಶೂರನಾಗಿದ್ದ ಚಿತ್ರದುರ್ಗದ ಹಿರೀ ಮದಕೇರಿನಾಯಕನು ವಿಶೇಷವಾದ ದೈವಭಕ್ತ, ಆಚಾರಶೀಲ. ಉಕ್ತವಾದ ದಿವಸಗಳಲ್ಲಿ ತಾನೇ ಕೂತು ಶತರುದ್ರೀಯ ಅಭಿಷೇಕವನ್ನು ಮಾಡಿ ಸಹಸ್ರನಾಮಾರ್ಚನೆ, ಏಕಭುಕ್ತ, ದುರಾಹಾರವರ್ಜ್ಯ, ಬ್ರಾಹ್ಮಣ ಸಮಾರಾಧನೆ ಮೊದಲಾದ ಧರ್ಮಕಾರ್ಯಗಳನ್ನೆಲ್ಲಾ ಬಹುಭಕ್ತಿಯಿಂದ ಮಾಡುತಿದ್ದನು. ಯಾವ ಕಷ್ಟಬಂದಾಗ್ಯೂ ಚಿತ್ರದುರ್ಗದ ಪಾಳಯಗಾರರು ತಮಗೆ ಮನೆದೇವರಾದ ನೀರುತಡಿ ರಂಗಸ್ವಾಮಿಯ ದರ್ಶನ ಮಾಡಿಕೊಂಡು ಯುದ್ಧ ಮೊದಲಾದ ರಾಜಕಾರ್ಯಗಳಿಗೆ ಹೊರ

ಡುತಿದ್ದರು. ಸಾಧಾರಣವಾಗಿ ಪಾಳಯಗಾರರೆಲ್ಲರಲ್ಲಿಯೂ ದೈವಭಕ್ತಿ ವಿಶೇಷವಾಗಿತ್ತು.

ಈ ಪಾಳಯಗಾರರಲ್ಲಿ ವಿದ್ಯಾವಂತರೂ ವಿದ್ಯಾಪಕ್ಷಪಾತಿಗಳೂ ಬಹುಮಟ್ಟಿಗೆ ಕಡಮೆ. ಆದ್ದರಿಂದ ಹೆಸರಾದ ಗ್ರಂಥಗಳು ಇವರ ಪ್ರೋತ್ಸಾಹದಿಂದ ಹುಟ್ಟಿದಹಾಗೆ ಕಂಡುಬಂದಿಲ್ಲ. ಇಕ್ಕೇರಿ ಪಾಳಯಗಾರರು ಮಾತ್ರ ಕೆಲವು ಗ್ರಂಥಕರ್ತರಿಗೆ ಪ್ರೋತ್ಸಾಹ ಕೊಟ್ಟರು. ಕ್ರಿ॥ ೧೬೯೮ ರಿಂದ ೧೨ ವರುಷ ಆಳಿದ ಹಿರೀ ಬಸಪ್ಪನಾಯಕನು ಸ್ವತಃ ಶಿವತತ್ವ ರತ್ನಾಕರ ಎಂಬ ಗ್ರಂಥವನ್ನು ಬರೆದನು. ಈ ದೊರೆಗಳ ಕಾಲದಲ್ಲಿ ಇನ್ನೂ ಕೆಲವು ಗ್ರಂಥಕರ್ತರು ಇದ್ದಹಾಗೆ ಗೊತ್ತಾಗಿದೆ. ಹಾಗಲವಾಡಿ ಪಾಳಯಗಾರ ಮುದಿಯಪ್ಪನಾಯಕನು ಸ್ವತಃ ಏಳನೂರು ಪದಗಳನ್ನು ನೀತಿಬೋಧಕವಾಗಿರುವಂತೆ ಬರೆದು ಜಂಗಮರು ಮೊದಲಾದವರ ಮುಖಾಂತರ ಅವುಗಳನ್ನು ಹಾಡಿಸುತಾ ದೇಶಾಟನ ಮಾಡಿ ಜನರಲ್ಲಿ ನೀತಿ ವೃದ್ಧಿಯಾಗುವಹಾಗೆ ಮಾಡಿದನು.

# ಪಾಳೆಯಗಾರರು.

---

## ೫ನೇ ಉಪನ್ಯಾಸ.

೧. ಹಿಂದುಸ್ಥಾನದ ಇತರ ದೇಶಗಳನ್ನು ಬಿಟ್ಟು ಈ ಮೈಸೂರು ಸೀಮೆ ಮಟ್ಟಿಗೆ ವಿಚಾರಮಾಡಿನೋಡಿದರೆ, ಲೋಕೋಪಕಾರಾರ್ಥವಾಗಿಯೂ ಪ್ರಜಾಸಂರಕ್ಷಣೆಯ ಸೌಭಾಗ್ಯಕ್ಕಾಗಿಯೂ ಪಾಳಯಗಾರರು ಹಿಂದಿನಕಾಲದಲ್ಲಿ ಮಾಡಿರತಕ್ಕ ಮಹತ್ಕಾರ್ಯಗಳನ್ನು ಚಕ್ರವರ್ತಿಗಳೆನ್ನಿಸಿಕೊಂಡು ಆಳುತಿದ್ದ ಅನೇಕರು ಮಾಡಿಲ್ಲವೆಂಬದಾಗಿ ಹಿಂದುಸ್ಥಾನದ ಸ್ಥಿತಿಯನ್ನು ಕಂಡವರೆಲ್ಲಾ ಧೈರ್ಯವಾಗಿ ಹೇಳಬಹುದೆಂದು ತೋರುತಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಸೂಚಿಸುತ್ತೇನೆ.

### (*a*) ಕೆರೆಗಳು.

ಕೆರೆಗಳು.

ಭೀಮಸಮುದ್ರದಕೆರೆ.—ಇದು ಚಿತ್ರದುರ್ಗದ ತಾಲ್ಲೋಕಿನಲ್ಲಿದೆ. ಇದಕ್ಕೆ ಹೊಲತಿಹಾಳುಕೆರೆ ಎಂದು ಪೂರ್ವದಲ್ಲಿ ಹೆಸರಿತ್ತು. ಇದು ಚಿತ್ರದುರ್ಗದ ಪಾಳಯಗಾರ ಭರಮಪ್ಪನಾಯಕನ ಆಳಿಕೆಯಲ್ಲಿ ಕಟ್ಟಲ್ಪಟ್ಟಿತು. ಏರಿಯ ಉದ್ದ ೪೪೦ ಗಜ; ಅದು ಒಂದು ಗುಡ್ಡದಿಂದ ಇನ್ನೊಂದು ಗುಡ್ಡಕ್ಕೆ ಅಡ್ಡವಾಗಿ ಹಾಕಲ್ಪಟ್ಟಿದೆ. ಏರಿಯ ನೆತ್ತಿಯಮೇಲೆ ೪೫ ಅಡಿ ಅಗಲವಿದೆ. ಹಿಂದೆ ಮುಂದೆ ಕಲ್ಲು ಕಟ್ಟಿದೆ. ಮೂರುತೂಬು ಇವೆ. ಇವುಗಳಿಂದ ೫ ನಾಲೆಗಳು ಹೊರಡುವವು. ನೀರು ೧೩ ಗ್ರಾಮಕ್ಕೆ ಹರಿಯುವುದು. ಏರಿಗೆ ಕಬ್ಬಿಣದ ಕಿಟ್ಟದತರಹ "ಲ್ಯಾಟರೈಟು" (ಗುಬ್ಬಿ ಕಲ್ಲಿನ) ಮಣ್ಣನ್ನು ಹಾಕಿ ಗಟ್ಟನೆ ಮಾಡಿದಾರೆ. ಸಾಧಾರಣ ಗುದ್ದಲಿಗಳಿಂದಲೂ ಹಾರೆಗಳಿಂದಲೂ ಇದನ್ನು ಅಗೆಯುವುದು ಕಷ್ಟ.

ಅಬ್ಬನಾಯನ ಹಳ್ಳಿ ಕೆರೆ.—ಇದೂ ಭಾರೀಕೆರೆಯೇ, ಆದರೆ ಭೀಮಸಮುದ್ರದಷ್ಟು ದೊಡ್ಡದಲ್ಲ. ಇದೂ ಪಾಳಯಗಾರ ಭರಮಪ್ಪ

ನಾಯಕನ ಆಳಿಕೆಯಲ್ಲಿ ಕಟ್ಟಲ್ಪಟ್ಟಿತು. ಇದರ ಕಟ್ಟಡವೂ ಭೀಮಸ ಮುದ್ರದ ಹಾಗೆಯೇ ಕೇವಲ ಬಲವಾದ್ದು.

ಭರಮಸಾಗರದ ಕೆರೆ.—ಇದು ಅಷ್ಟು ದೊಡ್ಡಕೆರೆ ಎನ್ನಿಸಿಕೊಳ್ಳ ದಿದ್ದಾಗ್ಯೂ ಇದರ ಕಟ್ಟಡವು ಕೇವಲ ನಮೂನಿಯಾದ್ದರಿಂದ ಇದನ್ನು ಇಲ್ಲಿ ವಿವರಿಸುತ್ತೇನೆ.

ಈ ಕೆರೆಯ ಹಿಂದುಗಡೆ ಒಂದೇರಿಗೆ ಒಂದೇರಿ ಒದನೆಯಾಗಿ ೩ ಏರಿ ಇವೆ. ಮೊದಲನೇ ಏರಿಗೆ ಮುಂದುಗಡೆ ಸೂಜಿಕಲ್ಲು ಕಟ್ಟಡಕಟ್ಟಿ ಉರುಳುಗಲ್ಲುಗಳನ್ನು ವಿಶೇಷವಾಗಿ ಬಿಟ್ಟಿದಾರೆ. ಇದು ಇತರ ವಿಚಾರ ದಲ್ಲಿ ವಿಚಿತ್ರವಾದ ಕಟ್ಟಡವಾಗಿದೆ.

ಈ ಕೆರೇಕಟ್ಟಡದ ರೀತಿಯನ್ನು ವಾಚಕರಿಗೆ ತಿಳಿಸಲು ಇದನ್ನು ಕುರಿತು ವಿವರಿಸಿದೆನೇ ಹೊರತು, ಇದು ಅಷ್ಟೊಂದು ಭಾರಿಯಾದ ಜಲಾಶಯವೆಂದಲ್ಲ. ಇದನ್ನು ಭರಮಪ್ಪನಾಯಕನು ಕಟ್ಟಿಸಿ ಭರಮ ಸಾಗರವೆಂದು ಹೆಸರಿಟ್ಟನು. ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಕೆರೆಗಳು ವಿಶೇಷವಾಗಿಲ್ಲದಿದ್ದರೂ, ಇರತಕ್ಕ ಕೆಲವು ತಕ್ಕಮಟ್ಟಿಗೆ ಭಾರಿಯಾ ಗಿಯೇ ಇವೆ.

## ನಾಯಕನಹಟ್ಟಿ ಹಿರೀಕೆರೆ.

ಚಳ್ಳಕೆರೆ ತಾಲ್ಲೋಕು ನಾಯಕನಹಟ್ಟಿಯಲ್ಲಿ ದೊಡ್ಡದಾದ ಒಂದು ಕೆರೆ ಇದೆ. ಇದೂ ಬಹು ದೊಡ್ಡ ಜಲಾಶಯ. ಇದರ ಕಟ್ಟಡವು ಕೇವಲ ಶ್ಲಾಘ್ಯವಾದ್ದು. ಮುಂಗಟ್ಟು ಕಟ್ಟಿರುವುದರಲ್ಲಿ ಒಂದು ಸೋ ಪಾನದ ಮೇಲೆ ಒಂದು ಕೊನೆಯಲ್ಲಿ ನೀರಿನ ಆಳ ಎಷ್ಟು ಇರುವುದೋ ಅಷ್ಟೇ ಆಳ ಅದೇ ಸೋಪಾನದ ಮೆಟ್ಟಲಮೇಲೆ ಉದ್ದಕ್ಕೂ ಇರುವುದು. ನೀರಿನ ಮಟ್ಟವನ್ನು ಅಷ್ಟು ನಿರ್ಣಯವಾಗಿಟ್ಟಿದಾರೆ. ಚನ್ನಗಿರಿ ಸೂಳೇ ಕರೆ, ಕಡೂರು ಮದಗದ ಕೆರೆ ಇವುಗಳು ನಮ್ಮ ಸೀಮೆಯಲ್ಲಿ ಭಾರಿ ಜಲಾಶಯಗಳು. ಇವುಗಳನ್ನು ಇಕ್ಕೇರಿ ಪಾಳಯಗಾರರೂ, ಕುಣಿಗಲ ಕೆರೆ, ತುರುವೇಕೆರೆ ಮೊದಲಾದವುಗಳನ್ನು ಹಾಗಲವಾಡಿ ಪಾಳಯಗಾ ರರೂ ಸಹಾ ಮಾಡಿಸಿದರು. ವಿಚಿತ್ರವಾಗಿರುವ ಈ ಕಟ್ಟಡಗಳನ್ನು ಗ್ರಂಥ ವಿಸ್ತಾರದ ಭಯದಿಂದ ಇಲ್ಲಿ ವಿವರಿಸದೆ ಕೈ ಬಿಟ್ಟೆ.

### (b) ತೋಪು.

ತೋಪು.

ಚಿತ್ರದುರ್ಗದ ಪ್ರಾಂತವು ಶುದ್ಧವಾಗಿ ಬೈಲು ಸೀಮೆಯಾಗಿ ಯಾವಕಡೆ ನೋಡಿದಾಗ್ಯೂ ಬರೀ ಮೈದಾನ ಕಾಣಿಸುವುದು. ಎಲ್ಲಿಯಾದರೂ ಗಿಡಗಳ ಹಸರು ದೂರವಾಗಿ ಕಂಡರೆ ಅದು ಒಂದು ಗ್ರಾಮವೆಂದು ತಿಳಿದುಕೊಳ್ಳಬಹುದು. ಈ ಹಸರು, ಗ್ರಾಮಗಳ ಸಮೀಪದಲ್ಲಿ ಹಾಕಿರುವ ಗಿಡಗಳಾಗಿವೆ. ಇದು ಗ್ರಾಮದ ದನಗಳಿಗೆ ನೆರಳಾಗಿಯೂ ಗ್ರಾಮದವರಿಗೆ ಸಾಧಾರಣ ಕೆಲಸಕ್ಕೆ ಬೇಕಾದಾಗ ಕಡಿದು ಉಪಯೋಗಿಸಿಕೊಳ್ಳುವುದಕ್ಕೆ ಮರವಾಗಿಯೂ ಒದಗುವುದು. ಇತರ ಪಾಳಯಪಟ್ಟಿನ ಸೀಮೆಗಳಲ್ಲಿ ಮರಗಳು ಹೆಚ್ಚು. ಇಕ್ಕೇರಿ ಪಾಳಯಗಾರರ ಸೀಮೆಯೆಲ್ಲಾ ಈಗ ಕಾಡಾಗಿದೆ. ಆ ದೊರೆಗಳ ಕಾಲದಲ್ಲಿ ಇದೆಲ್ಲಾ ಹೆಚ್ಚಾಗಿ ಬೈಲಾಗಿಯೇ ಇರಬಹುದು.

### (c) ದೇವಸ್ಥಾನಗಳು ಇತರ ಕಟ್ಟಡಗಳು.

ಕಟ್ಟಡಗಳು.

ಮಾಗಡಿ ಪಾಳಯಗಾರರು ಮಾಗಡಿಯಲ್ಲಿಯೂ, ಶಿವಗಂಗೆಯ ಬೆಟ್ಟದ ಮೇಲೆಯೂ ಶಾಶ್ವತವಾದ ದೇವಾಲಯಗಳನ್ನು ಕಟ್ಟಿಸಿದಾರೆ. ಕೆಳದಿ ಪಾಳಯಗಾರರು ಇಕ್ಕೇರಿಯಲ್ಲಿ ಅಘೋರೇಶ್ವರ ಮೊದಲಾದ ದೇವಾಲಯಗಳನ್ನು ಪ್ರತಿಷ್ಠೆಮಾಡಿಸಿದರು. ನಾಯಕನ ಹಟ್ಟಿಯ ಹಿರೀ ಕೆರೆಗೆ ಸ್ವಲ್ಪ ಸಮೀಪವಾಗಿ ಒಂದು ಚಿಕ್ಕಗುಡ್ಡವಿದೆ. ಅದರ ಮೇಲುಗಡೆ ಒಂದು ಪಕ್ಕದಲ್ಲಿ ಒಂದು ಚಿಕ್ಕ ಹಾಳುಗುಡಿ ಇದೆ. ಇದರಲ್ಲಿ ದೇವರ ಪೀಠ, ಗರ್ಭಗೃಹ, ಸುಖನಾಶಿ, ಆರು ಅಂಕಣ ನವರಂಗದ ಮಂಟಪ, ನಾಲ್ಕು ಕಂಬ, ಬೋದಿಗೆ, ಸುಂಣಪಾದ, ತೊಲೆ, ಪಕ್ಕದ ಗೋಡೆಗಳು, ಬಾಗಿಲುವಾಡ, ಹೊಸಲು, ಅರ್ಧಗೋಡೆಯಲ್ಲಿ ಮುಂದಕ್ಕೆ ಹಾದುಕೊಂಡಿರುವ ಕೈ ಜಗಲಿ, ನೆಲಕಟ್ಟು, ಗರ್ಭಗೃಹಕ್ಕೆ ಹತ್ತುವ ಮೆಟ್ಟಲು, ಮೇಲುಗಡೆ ಛಾವಣಿ, ಮೇಲುಗಡೆ ಸುತ್ತಲ ಕೋಟೆತೆನೆ, ಒಳಗಿನ ಚಿತ್ರಕೆಲಸ, ಇದೆಲ್ಲವನ್ನೂ ನಾಜೋಕಾಗಿ ಒಂದೇ ಬಂಡೆಯಲ್ಲಿ ಕೆತ್ತಿರುವ ಒಂದು ಗುಡಿ ಇದೆ. ಇದು ಒಂದು ವಿಚಿತ್ರವಾದ ಗುಡಿ.

ಇತರ ಹೆಸರಾದ ಕಟ್ಟಡಗಳು ಎಂದರೆ ಚಿತ್ರದುರ್ಗದ ವಿಚಿತ್ರವಾದ ಕೋಟೆ, ಕೊತ್ತಲ, ಬತೇರಿ ; ಹುಲಿಯೂರು ದುರ್ಗ, ಸಾವನದುರ್ಗ, ನಂದೀ ದುರ್ಗ ಮೊದಲಾದ ಅನೇಕ ದುರ್ಗವುವಾದ ಬೆಟ್ಟದ ಮೇಲಿನ ಕೆಲಸಗಳನ್ನು ಈ ಪಾಳಯಗಾರರೇ ಮಾಡಿಸಿದವರು. ಶತ್ರುಗಳ ಕಾಟ ಬಲವಾಗಿತ್ತು. ಉತ್ತರದಿಂದ ಆಗಾಗ್ಗೆ ಬಂದು ಲೂಟಿ ಮಾಡಿ ಸೀಮೆಯನ್ನು ಹಾಳುಮಾಡುತಿದ್ದ ಮೊಗಲಾಯರ ಹಾವಳಿ, ದಖನಿ ಮತ್ತು ಷಾಹಿ ನವಾಬರುಗಳು ಕೊಡುತಿದ್ದ ನಿರಂತರವಾದ ಬಾಧೆ, ಕೊನೆಮಿತಿ ಇಲ್ಲದ ಮರಾಟಿಯವರ ಲೂಟಿ, ಪಾಳಯಗಾರರು ಪರಸ್ಪರ ಸ್ಪರ್ಧೆಯಿಂದ ಮಾಡುತಾ ಇದ್ದ ಒಳೊಳಗಿನ ತುಳಿದಾಟ, ಇಂಥಾ ಬಲವತ್ತರವಾಗಿ ಬರುತಾ ಇದ್ದ ಕಾಟಕಾಯಗಳನ್ನು ನಿವಾರಣೆ ಮಾಡಿಕೊಂಡು ಶತ್ರುಗಳನ್ನು ಗೆದ್ದು ಓಡಿಸುವುದಕ್ಕೆ ದುರ್ಗಗಳು ಬೆಟ್ಟದ ಮೇಲಿನ ಕೋಟೆಗಳು ಹೆಚ್ಚಾಗಿ ಉಪಯೋಗಕರವಾಗಿದ್ದಕಾರಣ, ಅವುಗಳನ್ನು ವಿಶೇಷವಾಗಿ ಬಲಪಡಿಸಿಕೊಂಡಿದ್ದರು. ಈ ಕಾರಣದಿಂದ ಮೈಸೂರು ಸೀಮೆಯಲ್ಲಿಯೂ ಸುತ್ತಮುತ್ತಿನ ಪ್ರಾಂತಗಳಲ್ಲಿಯೂ ಗ್ರಾಮ ಗ್ರಾಮಕ್ಕೂ ಎಂದರೆ ಊರು ಚಿಕ್ಕದಾದರೆ ಚಿಕ್ಕದಾಗಿಯೂ ದೊಡ್ಡದಾದರೆ ದೊಡ್ಡದಾಗಿಯೂ ಕಟ್ಟಿರತಕ್ಕ ಕೋಟೆಗಳು ಅನೇಕವಾಗಿವೆ. ಹೀಗೆಯೇ ಗ್ರಾಮ ಗ್ರಾಮಕ್ಕೂ ಒಂದೊಂದು ಬುರಜು ಎಂದು ಕಟ್ಟಿರುತಿದ್ದರು. ಪೂರ್ವದಲ್ಲಿ ದಂಡಿನ ಜನರು ಗ್ರಾಮದೊಳಕ್ಕೆ ನುಗ್ಗಿದರೆ, ಅವರ ಕೈಗೆ ಯಾವುದೂ ಸುಲಭವಾಗಿ ಸಿಕ್ಕದಹಾಗೆ ಸಾಮಾನುಗಳನ್ನೂ ಹೆಂಗಸರು ಮಕ್ಕಳನ್ನೂ ಒಳಗಡೆ ವಿಸ್ತಾರವಾಗಿರತಕ್ಕ ಆ ಬುರುಜಿನೊಳಕ್ಕೆ ಇಳಿಸಿ ಜೋಪಾನಮಾಡುತಿದ್ದರು.

ಗುಮ್ಮನಾಯಕನ ಪಾಳಯ.

೨. ರಾಜ್ಯ ಸಂಪಾದನೆಗಾಗಿ ದುರ್ಬಲವಾಗಿರತಕ್ಕವರ ದೇಶವನ್ನು ಬಲಿಷ್ಠರು ಕಿತ್ತುಕೊಂಡು ತಾವು ಭಾರಿ ದೊರೆಗಳೆನ್ನಿಸಿಕೊಳ್ಳತಕ್ಕದ್ದು ಜನರ ಸಾಮುದಾಯಕ ವ್ಯಾಪಾರದಲ್ಲಿ ರೂಢಿಯಾದ ಚರ್ಯವಾಗಿದೆಯಷ್ಟೆ. ಆದರೆ ಗುಮ್ಮನಾಯಕನ ಪಾಳಯಪಟ್ಟು ಈ ವಾಡಿಕೆಗೆ ಪ್ರತಿಷೇಧವಾಗಿತ್ತು. ಇಲ್ಲಿನ ಪಾಳಯಗಾರರು ಕಾಡನ್ನು ಕಡಿಯಿಸಿ ಗ್ರಾಮವನ್ನು ಸ್ಥಾಪಿಸಿ ಅದರ ಉಪಯೋಗಕ್ಕೆ ಒಂದು ಕೆರೆಯನ್ನು ಕಟ್ಟಿಸಿ ತಟಾಕ

ಪ್ರತಿಷ್ಠೆಯನ್ನು ಮಾಡಿ ಅಲ್ಲಿಗೆ ಇತರ ಸ್ಥಳದಿಂದ ಹೊಸದಾಗಿ ರೈತರನ್ನು ಕರೆತಂದು ಅವರಿಗೆ ಬೇಕಾದ ಪ್ರೋತ್ಸಾಹವನ್ನು ಕೊಡುತಾ ಸಾಗುವಳಿಗೆ ಆಬಾದು ಮಾಡುತಾಬಂದರೇ ಹೊರತು, ಊರುಗಳಮೇಲೆ ಬಿದ್ದು ಜನರನ್ನು ಕೊಂದು ರಾಜ್ಯ ಸಂಪಾದನೆ ಮಾಡಿದವರಲ್ಲ. ಇದರಿಂದ ಗ್ರಾಮಗಳೂ ಕೆರೆಗಳೂ ಅಷ್ಟೊಂದು ವೃದ್ಧಿಯಾಗಲು ಕಾರಣವಾಯಿತು. ಗ್ರಾಮ, ತಟಾಕ, ಅನ್ನಸತ್ರ, ತೋಪು, ದೇವಾಲಯ, ಇವುಗಳನ್ನು ಸ್ಥಾಪನೆ ಮಾಡತಕ್ಕದ್ದು ಲೋಕೋಪಕಾರವಾದ ಧರ್ಮಕಾರ್ಯವೆಂದು ಪೂರ್ವೀಕರು ತಿಳಿದಿದ್ದರು. ಆದ್ದರಿಂದ ಬಾಗಿಪಲ್ಲಿ ತಾಲ್ಲೂಕಿನಲ್ಲಿ ಅಷ್ಟೊಂದು ಗ್ರಾಮಗಳೂ, ಕೆರೆಗಳೂ, ತೋಪುಗಳೂ ಹುಟ್ಟಿದವು. ಈಚೆಗೆ ವಿಜಯನಗರದವರ ಮೇಲೆ ಕೈ ಮಾಡಲು ಬಂದ ಶತ್ರುಗಳನ್ನು ಅಡಗಿಸಿದ್ದಕ್ಕಾಗಿ ಚಕ್ರವರ್ತಿಗಳು ಬಹುಮಾನ ರೂಪವಾಗಿ ಕೊಟ್ಟ ಭೂಸ್ವಾಸ್ತ್ಯಗಳನ್ನೂ ಇನಾಮುಗಳನ್ನೂ ಬಿಟ್ಟು ಬಿಟ್ಟರೆ, ಉಳಿದ ಗುಮ್ಮನಾಯಕನ ಪಾಳಯದ ಸೀಮೆಯೆಲ್ಲಾ ಆಯಾ ಕಾಲದಲ್ಲಿದ್ದ ಪಾಳಯಗಾರರು ಕಾಡುಮೇಡನ್ನು ಕಡಿದು ಊರುಗಳನ್ನು ಸ್ಥಾಪಿಸಿದ್ದೇ ಹೊರತು ಮತ್ತೆ ಬೇರೆ ಇಲ್ಲ. ಈ ಒಂದು ಪಾಳಯಪಟ್ಟು ಮಾತ್ರ ಪರಹಿಂಸೆಇಲ್ಲದೆ ಕೇವಲ ಧರ್ಮದಿಂದ ಸಂಪಾದಿಸಿದ ರಾಜ್ಯವಾಗಿದೆ ಎಂದು ಹೇಳ ಬಹುದು.

೩. ಈ ಪಾಳಯಗಾರರುಗಳಲ್ಲಿದ್ದ ವಿಶೇಷ ಪದ್ಧತಿಗಳು ಇಲ್ಲಿ ಸೂಚಿಸುವುದಕ್ಕೆ ಅರ್ಹವಾಗಿವೆ.

ಹಲವು ಜನ ಹೆಂಡಿರು.

(೧) ನಮ್ಮ ಹಿಂದುಸ್ಥಾನಿನ ಇತರ ದೊರೆಗಳಂತೆಯೇ ಇವರು ಅನೇಕ ಜನ ಹೆಂಡಿರನ್ನು ಮದುವೆಮಾಡಿಕೊಳ್ಳುತಿದ್ದರು. ಈ ಕಾರಣದಿಂದ ಕಟ್ಟಿಲ್ಲದೆ ಮನಸ್ಸಿ ವ್ಯಭಿಚಾರ ಮಾಡಿ ಯೋಗ್ಯರಾದ ಸಂಸಾರಿಕರ ಬಾಳ ಕೆಡಿಸುವ ದುರ್ನಡತೆಯು ಈ ಪಾಳಯಗಾರರಲ್ಲಿಯೂ ನಮ್ಮ ರಾಜರುಗಳಲ್ಲಿಯೂ ಬಹು ಮಟ್ಟಿಗೆ ಕಡಮೆಯಾಗಿತ್ತು. ಹೀಗೆ ಅನೇಕಜನ ಹೆಂಡಿರನ್ನು ಮದುವೆಯಾಗುವುದಕ್ಕೆ ರೂಪಿನ ವೈಖರಿ, ಕಾಮ ತೃಪ್ತಿ, ಇಷ್ಟೇ ಕಾರಣವಲ್ಲ. ಒಬ್ಬ ದೊರೆಯು ಮತ್ತೊಬ್ಬ ದೊರೆಮಗಳನ್ನು ಮದುವೆಯಾಗುವುದರಿಂದ ಆಗ ನಡೆಯುತಾ ಇದ್ದ ಯುದ್ಧಗಳು ನಿಂತು ಸಮಾಧಾನವಾಗು

ವುದೂ, ಅಥವಾ ಬಳುವಳಿಯಾಗಿ ದೇಶಸಂಪಾದನೆಯಾಗುವುದೂ, ಹೆಂಣ ಕೊಟ್ಟು ಹೆಂಣ ತಂದುಕೊಳ್ಳಲೇ ಬೇಕಾದ ನಿರ್ಬಂಧಗಳೂ, ಶ್ರೀರಾಮ ಹೊರತು ಮಿಕ್ಕ ನಮ್ಮ ಸೀಮೆಯ ರಾಜರು ಒಬ್ಬಳಿಗಿಂತಲೂ ಹೆಚ್ಚಾದ ಪಟ್ಟ ಮಹಿಷೀರನ್ನು ಏಕಕಾಲದಲ್ಲಿ ವಿವಾಹ ಮಾಡಿಕೊಳ್ಳುವ ಪೂರ್ವಾಚಾರ, ಇದೂ ಅಲ್ಲದೆ ದೇಹ ಜನ್ಯವಾದ ಪ್ರತಿಕೂಲಕಾಲಗಳಲ್ಲಿ ದೊರೆಯು ಮಾರ್ಗ ತಪ್ಪಿಹೋಗದಂತೆ ಇರುವುದಕ್ಕೆ ಏರ್ಪಡಿಸಿದ ಆನುಕೂಲ್ಯ, ಹೆಂಡತಿ ಬಂಜೆಯಾದರೆ ರಾಜ್ಯಕ್ಕೆ ಹಕ್ಕುದಾರರಿರುವ ಹಾಗೆ ತಕ್ಕ ಮುಂಜಾಗ್ರತೆ, ಇದೇಮೊದಲಾದ ಕಾರಣಗಳನ್ನು ಯೋಚಿಸಿ ನಮ್ಮ ಪೂರ್ವಿಕರು ರಾಜಪುತ್ರರಿಗೆ ಏಕಕಾಲದಲ್ಲಿ ಕೊನೇ ಪಕ್ಷಕ್ಕೆ ಇಬ್ಬರು ಹೆಂಡಿರನ್ನಾದರೂ ಮದುವೇ ಮಾಡುತಿದ್ದರು. ಈ ಮುಂತಾದ ಕಾರಣಗಳಿಂದ ದೊರೆಗಳಿಗೆ ಹೆಂಡಿರು ಅನೇಕರಾಗುತಿದ್ದರು.

ಶವದ ದಹನ.

(೧) ಈ ಪಾಳಯಗಾರರು ಜಾತಿಯಲ್ಲಿ ವಿಶೇಷವಾಗಿ ಬೇಡರೇ ಆಗಿರುತಿದ್ದರೂ ಕೂಡ, ಶವಗಳನ್ನು ದಹನ ಮಾಡುತಿದ್ದರು, ಹೂಳುತಿರಲಿಲ್ಲ. ರಾಜ ಮನೆತನದವರನ್ನು ಸುಟ್ಟ ಕಡೆಯಲ್ಲೆಲ್ಲಾ ಕಲ್ಲುಗುಡ್ಡೆ ಹಾಕಿಸುತಿದ್ದರು. ಶವವನ್ನು ದಹನ ಮಾಡಿದರು ಎನ್ನುವುದಕ್ಕೆ ಬದಲಾಗಿ ಇಂಥವರನ್ನು ಇಂಥಾ ಕಡೆ "ಗುಡ್ಡೆಮಾಡಿದರು" ಎಂಬದಾಗಿ ಪೂರ್ವದ ಲೇಖನಗಳಲ್ಲಿ ಪ್ರಯೋಗವಿದೆ. ರಾಜವಂಶೀಯರು ದಹನವಾದ ಅನೇಕ ಕಡೆಗಳಲ್ಲಿ ಈಶ್ವರ ಪ್ರತಿಷ್ಠೆ ಮಾಡಿಸಿ ಗುಡಿ ಕಟ್ಟಿಸಿದಾರೆ.

(೨) ಈ ಪಾಳಯಗಾರರು ಒಬ್ಬಳಿಗಿಂತಲೂ ಹೆಚ್ಚಾಗಿ ಹೆಂಡಿರನ್ನು ಮದುವೆಯಾಗುತಿದ್ದರೆಂದು ಹಿಂದೆ ಕಾಣಿಸಿದೆಯಷ್ಟೆ. ಈ ಹೆಂಡಿರಲ್ಲಿ ಇಷ್ಟಬಂದವರೆಲ್ಲಾ ದೊರೆಯ ಶವ ದಹನವಾಗುವುದರ ಸಂಗಡಲೇ ನಮ್ಮ ಪೂರ್ವಾಚಾರವನ್ನು ಅನುಸರಿಸಿ ಚಿತಿಗೆ ಮನಃಪೂರ್ತಿಯಾಗಿ ಪ್ರವೇಶಮಾಡಿ ಪ್ರಾಣತ್ಯಾಗ ಮಾಡಿಕೊಳ್ಳುತಿದ್ದರು. ಇಷ್ಟವಿಲ್ಲದವರು ಸಹಗಮನಕ್ಕೆ ಪ್ರಯತ್ನಮಾಡದೆ ಮಕ್ಕಳು ಮರಿಗಳು ಮೊದಲಾದವರ ಸಂರಕ್ಷಣೆಗೋಸ್ಕರ ಉಳಿದುಕೊಳ್ಳುತಿದ್ದರು. ಸಹಗಮನ ಮಾಡಿದವರ ವಿಷಯದಲ್ಲಿ ಶ್ಲಾಘನೆ ಇದ್ದಾಗ್ಯೂ ಅದಕ್ಕೆ ಒಪ್ಪದವರ ವಿಚಾರವಾಗಿ ಲೋಕಾಪವಾದವೇನೂ ಇರುತಿರಲಿಲ್ಲ.

(೪) ಪಾಳಯಗಾರರೆಲ್ಲಾ ಬಹು ಮಟ್ಟಿಗೆ ಜಾತಿಯಲ್ಲಿ ಬೇಡರು.

ಮತಾಚರಣೆ.

ಇಕ್ಕೇರಿ, ಹಾಗಲವಾಡಿ, ಮುಂತಾದ ಸಂಸ್ಥಾನೀಕರು ಶಿವಾಚರದ ಮತವನ್ನು ಅವಲಂಬಿಸಿದ್ದರು. ಇದಕ್ಕೆ ಮುಂಚೆ ಇವರು ಬೇಡರ ಜಾತಿಗೆ ಸೇರಿದವರಲ್ಲವೆಂದು ತಿಳಿಯಬಂದಿಲ್ಲ. ಇಷ್ಟು ಹೊರತಾಗಿ ಉಳಿದ ಪಾಳಯಗಾರರೆಲ್ಲಾ ಬೇಡರೇ ಆಗಿದ್ದರು. ಇವರು ಸಾಧಾರಣವಾಗಿ ನರಸಿಂಹ ದೇವರ ಒಕ್ಕಲಿನವರು. ಸಾಲಿಗ್ರಾಮಗಳನ್ನು ಪೂಜಿಸುತಾ ಪೆಟ್ಟಿಗೆಯಲ್ಲಿಟ್ಟು ಅವುಗಳನ್ನು ತಾವು ಹೋದಕಡೆಗೆಲ್ಲಾ ಹೊತ್ತುಕೊಂಡು ಹೋಗುವ ವಾಡಿಕೆಯುಂಟು.

(೫) ಈ ಪಾಳಯಗಾರರೂ ಮತ್ತು ಅವರ ಮನೆತನದವರೂ

ಅಂಗಸಾಧನೆ.

ಎಲ್ಲರೂ ಅಂಗಸಾಧನೆಯಲ್ಲಿ ಬಹು ಘಟಕರು, ವಿಶೇಷ ಬಲಶಾಲಿಗಳು. ಚಿತ್ರದುರ್ಗದ ಪಾಳಯಗಾರರು ಬಂದಾಳು ಉರುಳಿಸುವುದಕ್ಕೆ ಆಗದಂಥಾ ಸಾಂಗ್ರಾಣಿಕಲ್ಲುಗಳು ಎರಡನ್ನೂ ಎರಡುಕೈಯಲ್ಲಿ ಹಿಡಿದು ಇವೆರಡಕ್ಕಿಂತಲೂ ಭಾರವಾದ ಇನ್ನೊಂದು ಕಲ್ಲನ್ನು ಕತ್ತಿಗೆ ತಗಲಹಾಕಿಕೊಂಡು ಬೈಸಿಗೆ ಸಾಧನೆ ಮುಂತಾದ್ದನ್ನು ಮಾಡುತಿದ್ದರು. ಈ ಕಲ್ಲುಗಳು ಈಗಲೂ ಚಿತ್ರದುರ್ಗದ ಗರಡಿಯಲ್ಲಿವೆ. ಕೊಣತ ಕಂಬಗಳನ್ನು ಬಹುವಾಗಿ ಕಟ್ಟುತಿದ್ದರು. ದೇಹಶಕ್ತಿಯಿಂದಲೂ ಪರಾಕ್ರಮದಿಂದಲೂ ರಾಜ್ಯವನ್ನು ಜೈಸಿ ಶತ್ರುಗಳನ್ನು ಗೆದ್ದು ಆಳುತಿದ್ದ ಇವರಿಗೆ ಅಂಗಸಾಧನೆಯೂ, ಅಂಬು ಹೊಡೆಯುವುದು, ದೊಣ್ಣೆ ವರಸೆ ಮಾಡುವುದು, ಕತ್ತಿಪಟಾ ತಿರುಗಿಸುವುದು, ಇದೆಲ್ಲಾ ಬಹು ಚೆನ್ನಾಗಿ ಬರುತಿತ್ತು. ಈ ಜನರ ದೇಹಶಕ್ತಿಯನ್ನು ತೋರಿಸುವುದಕ್ಕೆ ವಿಚಿತ್ರವಾದ ಬಂದು ಸಂಗತಿಯನ್ನು ಇಲ್ಲಿ ಕಾಣಿಸಬಹುದು. ಚಿತ್ರದುರ್ಗದಲ್ಲಿ ಹಿರೀ ಮೆದಕೆರಿನಾಯಕ ದೊರೆಯಾಗಿ ಒಡ್ಡೋಲಗದಲ್ಲಿ ಕುಳಿತಿರುವಾಗ ದೊರೆಯ ತಮ್ಮನೊಬ್ಬನು ಓಲಗಶಾಲೆಯಲ್ಲಿ ಸಭಿಕರು ಕಂಬ ಒರಗಿಕೊಂಡು ಕೂತಿರಲು ಆ ಕಂಬವನ್ನು ತನ್ನ ಬಲದಿಂದ ಹಿಂದುಗಡೆ ಎತ್ತಿ ಹತ್ತರ ಕೂತಿದ್ದವರ ಅಂಗೀ ಕೊನೆಯನ್ನು ಸುಂಣಪಾದಕಲ್ಲಿನ ಕೆಳಕ್ಕೆ ಸೇರಿಸುತಿದ್ದನು. ದರ್ಬಾ

ರು ಆದಮೇಲೆ ಆ ಮನುಷ್ಯ ಎದ್ದರೆ ಅಂಗಿ ಹರಿದುಹೋಗಿ ಸಭಿಕರ ವಿನೋದಕ್ಕೆ ಗುರಿಯಾಗುತಿದ್ದನು.

(೬) ಹಾಗಲವಾಡಿ ಪಾಳಯಗಾರ ಮುದಿಯಪ್ಪನಾಯಕನು ಸ್ವತಃ

ವೈರಾಗ್ಯ.

ಏಳನೂರು ಪದ್ಯಗಳನ್ನು ಯಕ್ಷಗಾನದಲ್ಲಿಯೂ ಇತರ ಛಂದಸ್ಸಿನಲ್ಲಿಯೂ ನೀತಿಬೋಧಕವಾಗಿ ಬರೆದು ತಾನು ಸ್ವತಃ ಹಾಡುತಿದ್ದುದೂ ಅಲ್ಲದೆ ಜೋಗಿ ಜಂಗಮ ದಾಸ ಈ ಜನರನ್ನು ತಯಾರ್ಮಾಡಿಸಿದನು; ಪ್ರಜೆಗಳು ದುರ್ಮಾರ್ಗಗಳನ್ನು ತ್ಯಜಿಸಿ ನೀತಿವಂತರಾಗಿ ದೈವಭಕ್ತಿಯುಳ್ಳವರಾಗಿ ಪರಲೋಕಸಾಧನೆಯನ್ನು ಮಾಡಿಕೊಳ್ಳಲೆಂದು ಆ ಜೋಗಿ ಜಂಗಮರು ಜನರಿಗೆ ಬೋಧಿಸುತಾ ಹೊರಟರು. ಕೆಲವು ದಿವಸದಲ್ಲಿ ಮುದಿಯಪ್ಪನಾಯಕನು ತಾನೂ ಸನ್ಯಾಸಿಯಾಗಿ ಕಾವೀ ಶಾಠಿಯನ್ನು ಹೊದ್ದು ಜನರಿಗೆ ಸನ್ಮಾರ್ಗವನ್ನು ಬೋಧಿಸುತಾ ರಾಜ್ಯವನ್ನು ಇತರರಿಗೆ ಬಿಟ್ಟು ದೇಶಾಂತರಗಳಿಗೆ ಹೊರಟು ಹೋದನು.

ಹಿಂದೆ ಪುರಾಣ ಪ್ರಸಿದ್ಧರಾದ ಚಕ್ರವರ್ತಿಗಳು ವಾನಪ್ರಸ್ಥಾಶ್ರಮವನ್ನು ವಹಿಸಿ ವೈರಾಗ್ಯದಿಂದ ತಪಸ್ಸಿಗಾಗಿ ಕಾಡಿಗೆ ಹೊರಟು ಹೋದ್ದನ್ನು ಯುಗಾಂತರದ ಮಾತೆಂದು ಬಿಟ್ಟು ಕಲಿಯುಗಕ್ಕೆ ಬಂದಾಗ್ಯೂ ಇಂಥಾ ರಾಜಋಷಿಗಳು ಕೆಲವರು ಸಿಕ್ಕುತಾರೆ. ಬೌದ್ಧರಲ್ಲಿ ಅಶೋಕ ಒಬ್ಬ ಸಾಲದೆ? ದೊರಗಳೂ ಚಕ್ರವರ್ತಿಗಳೂ ದುರಾಶೆಯಿಂದ ಇತರ ರಾಜ್ಯಗಳ ಮೇಲೆ ಬಿದ್ದು ಅನೇಕವಾಗಿ ಪ್ರಾಣಿಹಿಂಸೆಯನ್ನೂ ಪ್ರಾಣಿವಧೆಯನ್ನೂ ಉಂಟುಮಾಡಿ ರಾಜ್ಯಸಂಪಾದನೆ ಮಾಡಿಕೊಂಡಿರಲಾಗಿ, ಅಶೋಕನು ಒಂದು ಕತ್ತಿಯನ್ನೂ ಎತ್ತದೆ ಒಂದು ಪ್ರಾಣಿಯನ್ನೂ ವಧೆ ಗಯ್ಯದೆ ಆಸೇತು ಹಿಮಾಚಲದವರೆಗೂ ಹಿಂದುಸ್ಥಾನ ಎಲ್ಲವನ್ನೂ ಮತ್ತು ಟಿಬೆಟ್ಟು, ತುರಕಸ್ಥಾನ, ಕಾಬೂಲ್, ಖಂದಾರೆ, ಸಿಂಹಳ ದ್ವೀಪ, ಬರ್ಮಾ, ಮೊದಲಾದ ಪ್ರಾಂತಗಳನ್ನೂ ತನ್ನ ಸಚ್ಚರಿತ್ರೆಯಿಂದಲೂ ಸದ್ಧರ್ಮಗಳನ್ನು ಲೋಕಕ್ಕೆ ಬೋಧಿಸುವುದರಿಂದಲೂ ಸ್ವಾಧೀನ ಮಾಡಿಕೊಂಡು, ಅಂಥಾ ಧರ್ಮಗಳನ್ನು ಅವನ ಚಕ್ರಾಧಿಪತ್ಯದ ಎಲ್ಲಾ ಕಡೆಯಲ್ಲಿಯೂ ಶಿಲಾ ಶಾಸನಗಳಾಗಿ ಬರೆಯಿಸಿ ಲೋಕೋಪಕಾರ

ತೋಡಿದನು. ಈಚೆಗೆ ಪ್ರಜೆಗಳ ನೀತಿಯನ್ನೂ ನಡತೆಯನ್ನೂ ತಿದ್ದು ವುದಕ್ಕೋಸ್ಕರ ಅನೇಕ ರಾಜರು ಮಾಡಿದ ಪ್ರಯತ್ನದಲ್ಲಿ ಮುದಿಯಪ್ಪ ನಾಯಕನು ಜೋಗಿ ಜಂಗಮರ ಮೂಲಕ ಪ್ರಜೆಗಳಿಗೆ ತತ್ವಬೋಧೆ ಯನ್ನು ಮಾಡಿಸಲು ಯತ್ನಮಾಡಿದ್ದು ಬಂದಾಗಿದೆ. ತರುವಾಯ ಇಂಥಾ ಸತ್ಪುರುಷರು ಅಪೂರ್ವವಾಗಿದ್ದರು. ಆದರೆ ಈಚೆಗೆ ನಮ್ಮ ಮಹಾರಾಜ ಶ್ರೀ ಕೃಷ್ಣರಾಜ ಪ್ರಭುಗಳು ಚಾಮುಂಡೀ ಬೆಟ್ಟದ ಕೊನೇ ಭಾಗವಾದ ಲಲಿತಾದ್ರಿ ಎಂಬ ಗುಡ್ಡಕ್ಕೆ ಹೋಗುವ ದಾರಿಯಲ್ಲಿಯೂ ಅತ್ತಇತ್ತಲೂ ಇರುವ ಕಲ್ಲು ಬಂಡೆಗಳ ಮೇಲೆ ಕಬೀರದಾಸ ಮೊದ ಲಾದ ಮಹಾ ಪುರುಷರ ಜ್ಞಾನಬೋಧಕವಾದ ವಚನಗಳನ್ನೂ ಹಿಂದು ಸ್ಥಾನೀ ಶ್ಲೋಕಗಳನ್ನೂ ಬರೆಯಿಸಿ ಜನರು ವಿವೇಕವನ್ನು ತಿಳಿದು ಕೊಳ್ಳುವಹಾಗೆ ಮಾಡಿರತಕ್ಕದ್ದು ಅಶೋಕನೇ ಮೊದಲಾದ ರಾಜಯೋ ಗಿಗಳು ಮಾಡಿರುವ ಶಿಲಾ ಶಾಸನಗಳನ್ನು ಜ್ಞಾಪಕಕ್ಕೆ ತರುತಿದೆ. ಇಂಥಾ ಸತ್ಕೀರ್ತಿ ಸಂಪಾದನೆಯಾಗತಕ್ಕದ್ದು ಪೂರ್ವಾರ್ಜಿತ ಪುಣ್ಯ ವಿಶೇಷದ ಫಲವಾಗಿದೆ.

**ದೊರೆಯನ್ನು ಚುನಾಯಿಸುವುದು.**

೪. ಒಬ್ಬ ದೊರೆಯು ನಿಸ್ಸಂತತಿಯಾಗಿ ತೀರಿಹೋಗಿ ಮುಂದೆ ಯಾರಿಗೆ ಪಟ್ಟಾ ಕಟ್ಟಬೇಕೋ ಗೊತ್ತಿಲ್ಲದೆ ಇರುವಾಗ, ದೊರೆತನಕ್ಕೆ ತಕ್ಕ ಪುರುಷನನ್ನು ಚುನಾಯಿಸಲು ಒಂದು ಪುರಾತನವಾದ ಆಚರಣೆ ಇತ್ತು. ಒಂದು ಆನೆಯ ಸೊಂಡಿಲಿಗೆ ಹುವ್ವಿನ ಹಾರವನ್ನು ಕೊಟ್ಟು ಅದನ್ನು ಹೊರಕ್ಕೆ ಬಿಟ್ಟು ಬಿಡುವುದು, ಆ ಆನೆಯು ಬೇಕಾದ ಕಡೆಗೆ ಹೋಗುತಾ ಇರುವಾಗ್ಗೆ ಅದು ಆ ಹುವ್ವಿನ ಹಾರವನ್ನು ಯಾರ ಕತ್ತಿಗೆ ಹಾಕುವುದೋ ಅಂಥವನನ್ನು ದೊರೆಯಾಗಿ ನೇಮಕ ಮಾಡಿಕೊಂಡು ಅವನಿಗೆ ಪಟ್ಟಾಕಟ್ಟುವುದು, ಈ ವಾಡಿಕೆ ಇತ್ತು. ಚಿತ್ರದುರ್ಗದ ಪಾಳ ಯಗಾರರಲ್ಲಿ ಮತ್ತೆ ಸಂತತಿಯು ಅಂಕುರ ವಿಲ್ಲದೆ ನಿರ್ವಂಶವಾದಾಗ ಆನೆಗೆ ಮೇಲೆ ಕಂಡಂತೆ ಹುವ್ವಿನ ಹಾರವನ್ನು ಕೊಟ್ಟರು. ಬಿಳಿ ಜೋಡು ಸಂತತಿಯಲ್ಲಿ ಹಕ್ಕುದಾರನಾಗಿದ್ದ ಭರಮಪ್ಪನಾಯಕನು ಬಡವನಾಗಿ ಕಾಡಿನಲ್ಲಿ ಕುರಿಕಾಯುತಾ ಒಂದು ಮರದ ಕೆಳಗೆ ಕೂತಿರುವಾಗ ಅವನ ಕತ್ತಿಗೆ ಆ ಆನೆಯು ಪುಷ್ಪಮಾಲಿಕೆಯನ್ನು ಹಾಕಿ ಅವನನ್ನು ಸೊಂಡಿಲಿ

ನಿಂದ ಎತ್ತಿ ತನ್ನ ಬೆನ್ನಮೇಲೆ ಕೂರಿಸಿಕೊಂಡಿತಂತೆ. ಕಡೆಗೆ ಈ ಭರಮಪ್ಪನಾಯಕನಿಗೆ ಪಟ್ಟವನ್ನು ಕಟ್ಟಿದರು. ಈ ಭರಮಪ್ಪನಾಯಕನ ಆಳಿಕೆಯಲ್ಲಿ ಚಿತ್ರದುರ್ಗದ ಖ್ಯಾತಿಯು ವಿಶೇಷವಾಗಿ ಎಲ್ಲಿ ಹೊಕ್ಕರೂ ಜಯವಾಗುತಾ ಬಂತು.

ಮುಖಂಡರ ಸಭೆ.

೫. ರಾಜಕಾರ್ಯ ಬಲವಾಗಿ ಶತ್ರುಗಳ ದೆಸೆಯಿಂದ ತೊಂದರೆಯೂ ಇತರ ಬಾಧೆಗಳೂ ಮುಖಸುತ್ತೂ ಹೆಚ್ಚಾದ ಕಾಲದಲ್ಲಿ ಈ ಪಾಳಯಗಾರರು ತಮ್ಮ ಸೀಮೆಯಲ್ಲಿ ಮುಖಂಡರಾಗಿರತಕ್ಕ ಸೆಟ್ಟಿವರ್ತಕರು, ಇತರ ಪ್ರಮುಖರು, ವಿದ್ವಾಂಸರು, ಇವರುಗಳನ್ನೆಲ್ಲಾ ಕರೆಯಿಸಿ ಆಗ ಒದಗಿ ಬಂದಿರುವ ರಾಜಕಾರ್ಯವನ್ನು ಕುರಿತು, ಆ ಜನರ ಸಭೆಯಲ್ಲಿ ಆಲೋಚನೆ ಮಾಡಿ ಪ್ರಜೆಗಳಿಂದ ಆಗಬೇಕಾದ ಸಹಾಯವನ್ನು ವಿವರಿಸುತಿದ್ದರು. ಅನೇಕವೇಳೆ ಆ ಸಭೆಯವರು ಕೊಟ್ಟ ಸಲಹೆಯಂತೆ ದೊರೆಗಳು ನಡೆಯುತ್ತಲೂ ಇದ್ದರು. ಚಿತ್ರದುರ್ಗದ ಚರಿತ್ರೆಯಲ್ಲಿ ಅನೇಕವೇಳೆ ಹೀಗೆ ನಡೆದೂ ಇದೆ.

ದಂಡಿನ ಜನರ ಹಾವಳಿ.

೬. ಯಾವ ರಾಜ್ಯದಲ್ಲಿಯೇ ಆಗಲಿ ಹೊರಗಿನ ಶತ್ರುಗಳ ಮೇಲೆ ಹೆಚ್ಚಾದ ಜಯ ಉಂಟಾಗಿ ರಾಜ್ಯಸಂಪಾದನೆಯು ಹೆಚ್ಚುತಾ ಬಂದ ಹಾಗೆಲ್ಲಾ ಇಂಥಾ ಯಶಸ್ಸಿಗೆ ಮುಖ್ಯಕಾರಣಭೂತರಾದ ದಂಡಿನ ಸರದಾರರ ಅಹಂಕಾರವೂ ಆಟೋಪವೂ ಹೆಚ್ಚುತಾ ಬರತಕ್ಕದ್ದು ವಾಡಿಕೆಯಾಗಿದೆ. ಶ್ರೀರಂಗಪಟ್ಟಣದ ದರಬಾರಿನಲ್ಲಿ ದಳವಾಯಿ ದೇವರಾಜೈಯ್ಯ ನಂಜರಾಜೈಯ್ಯ ತದನಂತರ ಹೈದರಲ್ಲಿಖಾನ ಸಹಾ ಕೊನೆ ಕೊನೆಗೆ ಮಾಡಿದ ಕೆಲಸಗಳು ದೃಷ್ಟಾಂತವಾಗಿ ಹೇಳಬಹುದು. ಕಡೆಗೆ ಮರಾಟೆಯವರ ಚಕ್ರಾಧಿಪತ್ಯ ಹೋಗುವುದಕ್ಕೆ ಬಾರಾ ಭಾಯಿಗಳೆಂಬ ದಂಡಿನ ಸರದಾರರು ಮೊದಲು ಮೊದಲು ಹೊಂದಿದ ಜಯವೂ, ಅದರಿಂದ ಅವರಿಗೆ ಹುಟ್ಟಿದ ಅಹಂಕಾರವೂ, ತದಂಗಾವಾಗಿ ಬಂದ ಅವಿಧೇಯತೆಯೂ ಕಾರಣವಾದವು. ಹೀಗೆಯೇ ಚಿತ್ರದುರ್ಗದ ಪಾಳಯಪಟ್ಟಸಲ್ಲಿಯೂ ಒಂದಲ್ಲದೆ ಎರಡುಸಾರಿ ನಡೆಯಿತು. ಒಬ್ಬ ಹೊಸದೊರೆಗೆ ಪಟ್ಟವಾದರೆ ದಂಡಿನ

ವರಿಗೆ ಪಟ್ಟ ಕಾಣಿಕೆ ಎಂದು ಇನಾಂ ಕೊಡುವ ಪದ್ಧತಿ ಇತ್ತಂತೆ. ಇದನ್ನು ಒಬ್ಬ ದೊರೆಯಪಟ್ಟಾಭಿಷೇಕ ಕಾಲದಲ್ಲಿ ಕೊಡಲಿಲ್ಲವೆಂದು ಒಂದು ನೆಪ ಮಾಡಿಕೊಂಡು ಒಂದು ಸಾರಿ ಸೇನಾಧಿಕಾರಿಗಳೂ ಅವರ ಜೊತೆಗೆ ಇತರರೂ ಸೇರಿ, ಮತ್ತಿ ಸಂತತಿಯವರ ಆಳಿಕೆಯಲ್ಲಿ, ದೊಡ್ಡದಾಗಿ ದಂಗೆ ಎಬ್ಬಿಸಿದರು. ಬಿಳಿಜೋಡು ಸಂತತಿಯವರ ಕಾಲದಲ್ಲಿಯೂ ಹೀಗೆಯೇ ನಡೆಯಿತು. ಈ ಗುಂಪಿನವರು ಇಬ್ಬರು ಮೂರು ಜನರನ್ನು ದೊರೆಯಾಗಿ ನೇಮಿಸುವುದು, ಅವರನ್ನು ಕಾರಣಾಂತರಗಳ ಮೇಲೆ ಕೊಲ್ಲಿಸುವುದು, ರಾಜ್ಯಭಾರವನ್ನು ಬಲಿಷ್ಠನಾದ ಸರದಾರನೇ ಆಕ್ರಮಿಸಿಕೊಂಡು ಭಂಡಾರವನ್ನು ದೋಚಿಕೊಂಡು ನಿಜವಾದ ರಾಜಸಂತತಿಯವರನ್ನು ಕಾರಾಗೃಹಕ್ಕೆ ಹಾಕಿಸುವುದು, ಈ ಗಲಭೆಯೆಲ್ಲಾ ಎರಡು ಸಾರಿಯೂ ಜರುಗಿತು. ಈ ಬಳಜಗಳದಲ್ಲಿಯೂ ಬದಲಾವಣೆಗಲಭೆಯಲ್ಲಿಯೂ ಅನೇಕ ಜನ ಹತರಾದರು. ಈ ಗಾಗಳದ ಚರಿತ್ರೆಯು ಬಹು ದೀರ್ಘವಾಗಿರುವುದರಿಂದ ಚಿತ್ರದುರ್ಗದ ಚರಿತ್ರೆಯನ್ನು ಓದಿ ಅದನ್ನು ತಿಳಿದುಕೊಳ್ಳಬಹುದು. ಈ ಉಪನ್ಯಾಸವು ಅದರ ವಿವರಣೆಗೆ ಸ್ಥಳವಲ್ಲ. ಯಾವದೇಶದಲ್ಲಾದರೂ ಸರಿಯೆ ಸರ್ಕಾರದ ದೊಡ್ಡ ಉದ್ಯೋಗಸ್ಥರೂ ದಂಡಿನ ಸರದಾರರೂ ಮೊದಲಾದವರು ಸೇರಿಕೊಂಡು ಸಾಧಾರಣ ಪ್ರಜೆಗಳ ಸುಖದುಃಖಗಳನ್ನು ವಿಚಾರಿಸದೆ ಸ್ವಪ್ರಯೋಜನ ಪರಾಯಣರಾದರೆ, ಇಂಥಾ ರಾಜ್ಯ ಕ್ಷೋಭೆಯೂ ಪ್ರಜಾ ಕ್ಷೋಭೆಯೂ ಸಂಭವಿಸುವುದೇ ಖಂಡಿತ. ಪ್ರತಿದೇಶದ ಚರಿತ್ರೆಯಲ್ಲಿಯೂ ಇಂಥಾ ಗಲಭೆಯನ್ನು ತೋರಿಸಬಹುದು.

ಹಿಂದಿನವರ ಕಾರ್ಯವು ಮುಂದಿನವರ ಪಾಥೇಯ.

೭. ಈ ಪಾಳಯಗಾರರು ವಿಶೇಷ ಸಾಮರ್ಥ್ಯದಿಂದ ರಾಜ್ಯವನ್ನು ಸಂಪಾದಿಸಿ ಹಬು ಪರಾಕ್ರಮದಿಂದ ಅದನ್ನು ಕಾಪಾಡಿಕೊಂಡರು. ಇವುಗಳೆಲ್ಲಾ ಶುದ್ಧವಾಗಿ ದೇಶೀಯ ಸಂಸ್ಥಾನಗಳು. ಪುರಾತನ ಹಿಂದೂ ಚಕ್ರಾಧಿಪತ್ಯವೂ, ಶುದ್ಧವಾಗಿ ಹಿಂದೂ ರಾಜವಾಡೆಗಳೂ, ಕ್ರಮವಾಗಿ ವಿಜಯನಗರದ ರಾಜ್ಯಕ್ಕೆ ಇಳಿದು ಅವರಿಂದ ಈ ಪಾಳಯಗಾರರಿಗೆ ಸರಣಿ ಜರುಗಿತು. ಇವರ ಪೌರುಷವು ಅಸದೃಶವಾದ್ದು. ಇವರ ವಿಚಕ್ಷಣೆಯಾದ ರಾಜ್ಯಭಾವುರ ಒಹು ಶ್ಲಾಘ್ಯವಾದ್ದು. ಪಾಳಯಗಾರ

ರೆಂದರೆ ಕ್ರೌರ್ಯಕ್ಕೂ ಅವಿವೇಕಕ್ಕೂ ಪರಿಭಾಷೆಯಾಗಿ ಜನರು ತಿಳಿದುಕೊಂಡು ಆಡಿಕೊಳ್ಳುವ ಆಡಿಕೆಯು ನಿಶ್ಚಯವನ್ನು ಅರಿಯದೆ ಹಿಂದೂದೇಶದ ಚರಿತ್ರೆಯನ್ನು ದೂಷಣೆಮಿಳಿತವಾಗಿ ಬರೆದಿರುವ ಇಂಗ್ಲಿಷ್ ಗ್ರಂಥಕರ್ತರ ಶಬ್ದಾಡಂಬರಕ್ಕೂ ಅನೃತಕ್ಕೂ ಸರಿಯಾದ ತೂಕವಾಗುವುದು. ಈ ಪಾಳಯಗಾರರು ತಮ್ಮ ಆಳಿಕೆಯಲ್ಲಿ ಲೋಕೋಪಕಾರಕ್ಕೂ ಪ್ರಜಾಪರಿಪಾಲನೆಗೂ ಮಾಡಿದ ಕೆಲಸಗಳು ಈಚೆಗೆ ಅವರ ತರುವಾಯ ಆಳತಕ್ಕ ಪ್ರಭುಗಳ ಭಾಗ್ಯವಾಗಿವೆ. ಈ ಭಾಗದಲ್ಲಿ ಇನ್ನು ಹೆಚ್ಚಾಗಿ ಬರೆಯಲಾರೆ.

೮. ಇನ್ನೊಂದು ವಿಷಯವನ್ನು ಹೇಳಿ ಉಪನ್ಯಾಸವನ್ನು ಮುಗಿಸಬೇಕಾಗಿದೆ. ಈ ಪಾಳಯಗಾರರೆಲ್ಲಾ ಚಿಕ್ಕದೋ ದೊಡ್ಡದೋ ಹೇಗಾದರೂ ಇರಲಿ, ಒಂದೊಂದು ಸಂಸ್ಥಾನೀಕರಾಗಿದ್ದರು. ಅವರ ಕಾಲದಲ್ಲಿ ಆಯಾ ಪ್ರಾಂತಗಳಿಗೆ ದೊರೆಗಳನ್ನಿಸಿಕೊಂಡವರಾಗಿದ್ದರು. ಇವರು ಕೊಂಚ ಹೆಚ್ಚುಕಡಮೆಯಾಗಿ ಈ ನಮ್ಮ ಭರತಖಂಡದ ಎಲ್ಲಾ ಕಡೆಯಲ್ಲಿಯೂ ಚಿಕ್ಕಚಿಕ್ಕ ಪ್ರಾಂತಗಳಿಗೆ ಅಧಿಪತಿಗಳಾಗಿ ಆಳಿಕೊಂಡಿದ್ದರು. ದಕ್ಷಿಣ ದೇಶದ ವಿಜಯನಗರದ ಚಕ್ರಾಧಿಪತ್ಯದಲ್ಲಿ ಯಂತೂ ಈ ಪಾಳಯಗಾರರು ತಂತಮ್ಮ ಸಂಸ್ಥಾನಗಳಲ್ಲಿ ಈ ಕಾಲದ ಅಧೀನರಾಜರು ಇರುವಂತೆ ದೌಲತ್ತು ಮಾಡಿಕೊಂಡಿದ್ದರು. ಹೈದರಲ್ಲಿಯು ಪ್ರಬಲಿಸಿ ಕೃಷ್ಣಾ ನದಿಯಿಂದ ದಕ್ಷಿಣಕ್ಕೆ ಆಳಿಕೊಂಡಿದ್ದ ಇಂಥಾ ಅಧಿಪತಿಗಳನೇಕರನ್ನು ನಾಶಮಾಡಿದನು. ಇಕ್ಕೇರಿ, ಚಿತ್ರದುರ್ಗ, ಮೊದಲಾದ್ದನ್ನು ಯುದ್ಧಮಾಡಿಗೆದ್ದದ್ದೂ, ಹಾಗಲವಾಡಿ ಮೊದಲಾದ್ದನ್ನು ನಂಬಿಕೆ ತೋರಿಸಿ ಮೋಸಮಾಡಿದ್ದೂ, ಮಿತ್ರರಂತೆ ಭಾವಿಸಿ ಭೇಟಿಗೆ ಬಂದ ಪಾಳಯಗಾರರನ್ನು ದ್ರೋಹತನದಿಂದ ಸೆರೆಯಲ್ಲಿಡಿಸಿದ್ದೂ, ಕೆಲವು ಸಂಸ್ಥಾನಗಳಿಗೆ ವಂಶನಷ್ಟವಾಯಿತೆಂದು ತಾನು ಆಕ್ರಮಿಸಿದ್ದೂ, ಹೀಗೆ ಬಗೆ ಬಗೆ ಕಾರಣಗಳಮೇಲೆ ಆಯಾ ಪಾಳಯ ಪಟ್ಟುಗಳನ್ನು ಹೈದರಲ್ಲಿಯು ಆಕ್ರಮಿಸಿದನು. ಅವನ ಮರಣಾನಂತರ ಟೀಪುಸುಲ್ತಾನನು ಮೀರ್‌ಮೊಹಮದ್ ಸಾದಕ ಮುಂತಾದ ದುರ್ಮಂತ್ರಿಗಳ ದೆಸೆಯಿಂದ ಕೆಲವು ರಾಜ್ಯಗಳನ್ನು ಸೇರಿಸಿಕೊಂಡನು. ಕಂಪನಿ ಅಧಿಕಾರಿಗಳು ತಾವು ಮಾಡಿದ ವಾಗ್ದಾನವನ್ನು ಗೌರವಿಸದೇ ಹೋದ್ದರಿಂದ

ಕೆಲವು ಪ್ರಾಂತ ಸೇರಿ ಹೋಯಿತು. ಶ್ರೀರಂಗಪಟ್ಟಣವನ್ನು ಕಂಪನಿಯವರೂ, ಹೈದರಾಬಾದಿನವರೂ, ಮರಾಟೆಯವರೂ ಗೆದ್ದುಕೊಂಡು ಮೈಸೂರು ಸೀಮೆಯ ಮುಮ್ಮಡಿ ಕೃಷ್ಣರಾಜಬಡೆಯರವರಿಗೆ ಈಗಿನ ಮೈಸೂರು ರಾಜ್ಯವನ್ನು ಕೊಟ್ಟರಷ್ಟೆ. ಆಕಾಲದಲ್ಲಿ ಹೊಸಧಾಗಿ ಟೀಪುವು ಸೇರಿಸಿ ಕೊಂಡಿದ್ದ ಸಂಸ್ಥಾನಗಳು ಬಿಡುಗಡೆಯಾದ್ದರಿಂಧ ಆಯಾ ಹಕ್ಕುದಾರರಿಗೇ ಸ್ಥಿರಪಡಿಸಿದರು. ಈಗಿನ ಮೈಸೂರು ಸೀಮೆಗೆ ಒಳಪಟ್ಟಿದ್ದ ದೇಶಗಳು ಕೃಷ್ಣರಾಜವಡೆಯರಿಗೆ ಸೇರಿಹೋದವು. ಅಂಥಾ ಪಾಳಯಗಾರರ ವಂಶೀಯರಿಗೆ ಪೆನ್ಷನ್ ಕೊಡುತಾ ಇದಾರಷ್ಟೆ. ಕಾಲಗತಿಯನ್ನು ಅನುಸರಿಸಿ ಈ ಜನರು ತಮತಮಗೆ ಅನುಕೂಲವಾದ ಸ್ಥಳಗಳಲ್ಲಿ ವಾಸಮಾಡುತಾ ಮೈಸೂರು ಸರ್ಕಾರದವರು ಕೊಡುವ ಪೆನ್ಷನ್ನಲ್ಲಿ ಕಷ್ಟದಿಂದ ಜೀವನವನ್ನು ಮಾಡಿಕೊಳ್ಳುತಾ ಇದಾರೆ.

ಈ ದೊಡ್ಡ ವಂಶೀಯರು ತಮ್ಮ ಹಿರಿಯರ ಹೆಸರುವಾಸಿಯ ಮೇಲೆಯೂ ಗೌರವದಮೇಲೆಯೂ ದೃಷ್ಟೀ ಇಟ್ಟು ಮಾರ್ಗ ತಪ್ಪಿ ಹೋಗದೆ ತಮ್ಮ ಹಿರಿಯರ ಮರ್ಯಾದೆಯನ್ನು ಕಾಪಾಡಿಕೊಂಡು ಬರುತಾ ಇದಾರೆ. ಆಯಾ ಪ್ರದೇಶಗಳಲ್ಲಿ ಸಾಧಾರಣ ಜನರು ಈಗಲೂ ಇವರನ್ನು ದೊರೆಗಳು ಎಂತಲೇ ಕರೆಯುತಾರೆ. ನಮ್ಮ ಮೈಸೂರ ಮಹಾಜನರೂ ಈ ದೊಡ್ಡ ವಂಶೀಯರಿಗೆ ಕಾಲೋಚಿತವಾಗಿ ಸ್ವಲ್ಪಮಟ್ಟಿಗಾದರೂ ಹೆಚ್ಚಾದ ಉಪಪತ್ತಿಯನ್ನು ಕಲ್ಪಿಸಿ ಕೊಡುತ್ತಲೂ ಇದಾರೆ. ಈಗಿನ ಕಾಲಕ್ಕೆ ತಕ್ಕಹಾಗೆ ಪರೀಕ್ಷೆಗಳನ್ನು ಕೊಟ್ಟುಕೊಂಡು ಯೋಗ್ಯತೆ ಸಂಪಾದನೆ ಮಾಡಿಕೊಂಡಿದ್ದ ಗತಿಸಿದ ಕುಮಾರಸಾಮಿನಾಯುಕನಂಥವರಿಗೆ ಯೋಗ್ಯತಾನುಸಾರವಾದ ಉದ್ಯೋಗಗಳನ್ನೂ ಕೊಟ್ಟು ಕಾಪಾಡುತಿದ್ದರಷ್ಟೆ. ಈಗಿನ ಕಾಲರೀತಿಯಲ್ಲಿ ಯೋಗ್ಯತೆಯನ್ನು ಸಂಪಾದಿಸುವುದಕ್ಕೋಸ್ಕರ ಬಾಲಕರನ್ನು ದೊಡ್ಡ ವಿದ್ಯಾಶಾಲೆಗೆ ಕಳುಹಿಸಲು ಈ ವಂಶೀಯರಿಗೆ ಉಪಪತ್ತಿ ಏನೇನೂ ಸಾಲದು. ಮತ್ತು ವಿದ್ಯಾಭ್ಯಾಸವೆಂಬ ಅಚ್ಚಿಗೆ ಬಿದ್ದು ಒಂದೇ ವಿಧವಾದ ಆಕಾರವನ್ನು ಇವರು ಹೊಂದುವುದೂ ಸಾಧ್ಯವಿಲ್ಲ. ಒಬ್ಬೊಬ್ಬರು ಒಂದೊಂದು ನೈಸರ್ಗಿಕವಾದ ಶಕ್ತಿಯನ್ನು ಹೊಂದಿರಬಹುದು, ಒಬ್ಬರು ಓದುವುದರಲ್ಲಿ, ಒಬ್ಬರು ಬರೆಯುವುದರಲ್ಲಿ, ಮತ್ತೊಬ್ಬರು ಲೆಕ್ಕಾಚಾರದಲ್ಲಿ,

ಗ್ಯತೆ ಸಂಪಾದನೆ ಮಾಡಿಕೊಂಡಿದ್ದ ಗತಿಸಿದ ಕುಮಾರಸಾಮಿನಾಯಕ ನಂತವರಿಗೆ ಯೋಗ್ಯತಾನುಸಾರವಾದ ಉದ್ಯೋಗಗಳನ್ನೂ ಕೊಟ್ಟು ಕಾಪಾಡುತಿದ್ದರಷ್ಟೆ. ಈಗಿನ ಕಾಲರೀತಿಯಲ್ಲಿ ಯೋಗ್ಯತೆಯನ್ನು ಸಂಪಾದಿಸುವುದಕ್ಕೋಸ್ಕರ ಬಾಲಕರನ್ನು ದೊಡ್ಡ ವಿದ್ಯಾಶಾಲೆಗೆ ಕಳುಹಿಸಲು ಈ ವಂಶೀಯರಿಗೆ ಉಪಪತ್ತಿ ಏನೇನೂ ಸಾಲದು. ಮತ್ತು ವಿದ್ಯಾಭ್ಯಾಸವೆಂಬ ಅಚ್ಚಿಗೆ ಬಿದ್ದು ಒಂದೇ ವಿಧವಾದ ಆಕಾರವನ್ನು ಇವರು ಹೊಂದುವುದೂ ಸಾಧ್ಯವಿಲ್ಲ. ಒಬ್ಬೊಬ್ಬರು ಒಂದೊಂದು ನೈಸರ್ಗಿಕವಾದ ಶಕ್ತಿಯನ್ನು ಹೊಂದಿರಬಹುದು. ಒಬ್ಬರು ಓದುವುದರಲ್ಲಿ, ಒಬ್ಬರು ಬರೆಯುವುದರಲ್ಲಿ, ಮತ್ತೊಬ್ಬರು ಲೆಕ್ಕಾಚಾರದಲ್ಲಿ, ಮತ್ತೊಬ್ಬರು ಕುಮರೇ ಸವಾರಿಯಲ್ಲಿ, ಮಗದೊಬ್ಬರು ದಂಡಿನಕೆಲಸ ಅಥವಾ ಪೋಲೀಸ್ ಕೆಲಸದಲ್ಲಿ, ಹೀಗೆ ಒಂದೊಂದು ಶಕ್ತಿ ಒಬ್ಬೊಬ್ಬರಿಗಿರಬಹುದು. ಇವರು ಓದಿ ಬುದ್ಧಿವಂತರಾಗಲಿಲ್ಲವೆಂದು ಇವರನ್ನು ಮರೆತು ಬಿಡುವುದಕ್ಕಿಂತಲೂ, ಮೈಸೂರಲ್ಲಿ ಯಾಗಲಿ ಬೆಂಗಳೂರಲ್ಲಿ ಯಾಗಲಿ ಒಂದು ಪಾಠಶಾಲೆಯನ್ನೋ ಅಥವಾ ಇತರ ಕಲಾಶಾಲೆಯನ್ನೋ ಇಡಿಸಿ ದಂಡಿನ ಕೆಲಸ, ಪೋಲೀಸ್‌ಕೆಲಸ, ಬರವಣಿಗೆ ಕೆಲಸ, ಕುದುರೆ ಅಧಿಕಾರ ಇಂಥ ಉದ್ಯೋಗಗಳಿಗೆ ತಯಾರಾದ ಹಾಗೆಲ್ಲಾ ಅವರನ್ನು ನೇಮಿಸಿ ಉದ್ಧಾರಮಾಡುವುದು ಒಂದು ಧರ್ಮವಾಗಿದೆ. ಒಂದಾನೊಂದುಕಾಲವಲ್ಲಿ ದೌಲತ್ತುಮಾಡಿದವರ ವಂಶಸ್ಥರಾದ್ದರಿಂದ ಅವರಲ್ಲಿ ಯಾವುದಾದರೂ ಒಂದು ಗುಣ ಒಂದು ಯೋಗ್ಯತೆ ಇದ್ದೇ ಇರುವುದು. ಅವರಿಗೆ ತಕ್ಕಹಾಗೆ ಕೆಲಸವನ್ನು ಕೊಟ್ಟು ಜೀವಿಕಗಳನ್ನು ಕಲ್ಪಿಸಿ ಕೊಡುವುದು ಉತ್ತಮ. ಮೈಸೂರು ಸರ್ಕಾರದವರು ತಮ್ಮಲ್ಲಿ ದೊರೆಯಬಹುದಾದ ಉದ್ಯೋಗಗಳನ್ನು ಇಂಥಾ ಜನರಿಗೆ ಕೊಟ್ಟು ದಂಡಿನ ಕೆಲಸ ಕುದುರೇ ಸವಾರಿ ಮೊದಲಾದ ಮಿಲಿಟರಿ ಉದ್ಯೋಗಗಳನ್ನು ಇವರಿಗೆ ಕೊಡಿಸಬಹುದೆಂದು ಇಂಡ್ಯಾಸರ್ಕಾರಕ್ಕೆ ಸಿಫಾರಸು ಮಾಡಿ ಕಳುಹಿಸಿಕೊಡಬಹುದು. ಹೀಗೆ ಮಾಡುವುದರಲ್ಲಿ ಪ್ರಜಾ ಸಂರಕ್ಷಣೆಯೂ, ಯೋಗ್ಯತೆ ಅರಿತು ಜೀವಿಕ ಕಲ್ಪನೆಯೂ, ಹೀನಸ್ಥಿತಿಗೆ ಬರುತಿರುವವರ ಉದ್ಧಾರವೂ ಸಹಾ ಆಗಿ ನಮ್ಮ ಮಹಾರಾಜರಿಗೆ ಆಚಂದ್ರಾರ್ಕವಾದ ಕೀರ್ತಿ ಬರುವುದು.

---